ಸೋಮವಾರ, ಆಗಸ್ಟ್ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 233 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಅನುಭವಜನ್ಯ ಕಲಿಕೆಯಿಂದ ಮಕ್ಕಳ ಭವಿಷ್ಯ ಉತ್ತಮಗೊಳ್ಳುತ್ತದೆ.

ಆಳ-ಅಗಲ

ಪಿಎನ್‌ಆರ್ ಮಾಹಿತಿ ಸಲ್ಲಿಕೆ ಕಡ್ಡಾಯ ವಿದೇಶ ಪ್ರಯಾಣಿಕರ ಮೇಲೆ ಕಣ್ಗಾವಲು

'ಪಶ್ಚಿಮಘಟ್ಟ ಸೂಕ್ಷ್ಮಪ್ರದೇಶ ಘೋಷಣೆಯಿಂದ ಅನುಕೂಲ' 8

'ಉಚಿತ ಕೊಡುಗೆ: 'ಸುಪ್ರೀಂ'ಗೆ ಉಸಾಬರಿ ಏಕೆ' 4

ಇಂದು ನಿರುದ್ಯೋಗ ವಿರೋಧಿ ರ‍್ಯಾಲಿ

ರಾಕೇಶ್ ಟಿಕಾಯತ್ ಪೊಲೀಸ್ ವಶ 9

ಲುಕ್‌ಔಟ್ ನೋಟಿಸ್ ಹೊರಡಿಸಿದ್ದಾರೆ: ಸಿಸೋಡಿಯಾ • ಕೇಜ್ರಿವಾಲ್ ಭ್ರಷ್ಟ: ಬಿಜೆಪಿ

ಭ್ರಷ್ಟಾಚಾರ ಆರೋಪ: ತಿಕ್ಕಾಟ ತೀವ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮವಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿ ಬಿಜೆಪಿ ಮತ್ತು ಎಎಪಿ ನಡುವಣ ತಿಕ್ಕಾಟ ಭಾನುವಾರ ಇನ್ನಷ್ಟು ತೀವ್ರಗೊಂಡಿದೆ. ತಮ್ಮ ವಿರುದ್ಧ ಸಿಬಿಐ ಲುಕ್‌ಔಟ್ ನೋಟಿಸ್ ಹೊರಡಿಸಿದೆ ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಹೇಳಿದ್ದಾರೆ. ಆದರೆ, ಈ ಆರೋಪವನ್ನು ಸಿಬಿಐ ತಳ್ಳಿ ಹಾಕಿದೆ. ಈತನಕ ಲುಕ್‌ಔಟ್ ನೋಟಿಸ್ ಹೊರಡಿಸಿಲ್ಲ ಎಂದಿದೆ. ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಮತ್ತು ಸಿಸೋಡಿಯಾ ಅವರು ಸೋಮವಾರ ಗುಜರಾತ್‌ಗೆ ಭೇಟಿ ನೀಡಲಿದ್ದಾರೆ.

ತಮ್ಮ ಮನೆಯಲ್ಲಿ ಶೋಧ ನಡೆಸಿದ ಸಿಬಿಐ ತಂಡಕ್ಕೆ ಏನೂ ಸಿಕ್ಕಿಲ್ಲ. ಹಾಗಾಗಿ, ಲುಕ್‌ಔಟ್ ನೋಟಿಸ್ ಹೊರಡಿಸಿದ್ದಾರೆ ಎಂದಿದ್ದಾರೆ ಸಿಸೋಡಿಯಾ.

'ನಿಮ್ಮ ಎಲ್ಲ ಶೋಧಗಳೂ ವ್ಯರ್ಥವಾಗಿವೆ. ಏನೂ ಸಿಕ್ಕಿಲ್ಲ. ಒಂದು ಪೈಸೆಯ ಅಕ್ರಮವೂ ಆಗಿಲ್ಲ. ಸಿಸೋಡಿಯಾ ನಾಪತ್ತೆಯಾಗಿದ್ದಾರೆ ಎಂದು ಈಗ ನೀವು ಹೇಳುತ್ತಿದ್ದೀರಿ. ಮೋದಿಯವರೇ, ಏನಿದು ಪ್ರಹಸನ? ನಾನು ದೆಹಲಿಯಲ್ಲಿಯೇ ಇದ್ದೇನೆ. ಎಲ್ಲಿ ಬರಬೇಕು ಹೇಳಿ, ಅಲ್ಲಿಗೆ ಬರುತ್ತೇನೆ' ಎಂದು ಸಿಸೋಡಿಯಾ ಹೇಳಿದ್ದಾರೆ.

ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮ ಪ್ರಕರಣದ ಇಬ್ಬರು ಆರೋಪಿಗಳು ದೇಶ ಬಿಟ್ಟು ಹೋಗಿದ್ದಾರೆ. ಹಾಗಾಗಿ, ಉಳಿದ ಆರೋಪಿಗಳು ತಪ್ಪಿಸಿಕೊಳ್ಳುವುದನ್ನು ತಡೆಯುವುದಕ್ಕಾಗಿ ಅವರ ವಿರುದ್ಧ ಲುಕ್‌ಔಟ್ ನೋಟಿಸ್ ಹೊಡಿಸಲಾಗಿದೆ ಎಂದು ಬಿಜೆಪಿ ಸಂಸದ ಪರ್ವೇಶ್ ವರ್ಮಾ ಹೇಳಿದ್ದಾರೆ.

ಕೇಜ್ರಿವಾಲ್ ಬಗ್ಗೆ ಯಾವ ಭಯವೂ ಇಲ್ಲ. ಅವರ ಭ್ರಷ್ಟಾಚಾರದ ಒಂದೊಂದೇ ಮಾಹಿತಿ ಹೊರಕ್ಕೆ ಬರುತ್ತಿದೆ ಎಂದು ಬಿಜೆಪಿಯ ವಕ್ತಾರ ಗೌರವ್ ಭಾಟಿಯಾ ಹೇಳಿದ್ದಾರೆ.

'ಜನರು ಹಣದುಬ್ಬರದಿಂದಾಗಿ ಸಂಕಷ್ಟದಲ್ಲಿದ್ದಾರೆ. ಯುವಜನರಿಗೆ ಉದ್ಯೋಗ ಇಲ್ಲ. ಕೇಂದ್ರ ಸರ್ಕಾರವು ಎಲ್ಲ ರಾಜ್ಯ ಸರ್ಕಾರಗಳ ಜತೆ ಸೇರಿ ನಿರುದ್ಯೋಗ ಮತ್ತು ಹಣದುಬ್ಬರದ ವಿರುದ್ಧ ಹೋರಾಡಬೇಕಾಗಿದೆ. ಆದರೆ, ಕೇಂದ್ರವು ಇಡೀ ದೇಶದ ವಿರುದ್ಧವೇ ಹೋರಾಡುತ್ತಿದೆ' ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಕಾಂಗ್ರೆಸ್‌ನ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನೆತೆ ಅವರು ಎಎಪಿಯನ್ನು ಟೀಕಿಸುವ ಮೂಲಕ ವಿರೋಧ ಪಕ್ಷಗಳಲ್ಲಿ ಒಗ್ಗಟ್ಟಿಲ್ಲ ಎಂಬುದನ್ನು ಸಾರಿದ್ದಾರೆ. ಶಿಕ್ಷಣವನ್ನು ಮುಂದಿಟ್ಟುಕೊಂಡು ಅಬಕಾರಿ ಹಗರಣವನ್ನು ಮುಚ್ಚಿಹಾಕಲು ಎಎಪಿ ಯತ್ನಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ಎಎಪಿ ಮತ್ತು ಕೇಜ್ರಿವಾಲ್ ಅವರಿಗೆ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಅವರ ಬೆಂಬಲ ದೊರೆತಿದೆ. ಗುಜರಾತ್ ಮತ್ತು ಇತರೆಡೆ ಎಎಪಿಯ ಬೆಳವಣಿಗೆಯನ್ನು ತಡೆಯುವುದಕ್ಕಾಗಿಯೇ ಈ ಎಲ್ಲವೂ ನಡೆಯುತ್ತಿದೆ ಎಂದು ಸಿಬಲ್ ಹೇಳಿದ್ದಾರೆ.

ಕೆಸಿಆರ್‌ರನ್ನು ಎಳೆತಂದ ಬಿಜೆಪಿ

ದೆಹಲಿಯ ಅಬಕಾರಿ ನೀತಿ ಜಾರಿಯಲ್ಲಿ ಅಕ್ರಮ ಹಗರಣಕ್ಕೆ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರನ್ನೂ ಬಿಜೆಪಿ ಎಳೆದು ತಂದಿದೆ. ಈ ನೀತಿ ರೂಪಿಸುವುದಕ್ಕಾಗಿ ದೆಹಲಿಯ ಪಂಚತಾರಾ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಕೆಸಿಆರ್ ಅವರ ಕುಟುಂಬದ ಸದಸ್ಯರೂ ಇದ್ದರು ಎಂದು ಬಿಜೆಪಿ ಸಂಸದ ಪರ್ವೇಶ್ ವರ್ಮಾ ಹೇಳಿದ್ದಾರೆ.

ಪಶ್ಚಿಮ ಬಂಗಾಳ ಮತ್ತು ತೆಲಂಗಾಣದಲ್ಲಿ ದೆಹಲಿಯಲ್ಲಿ ಇರುವಂತಹುದೇ ನೀತಿ ಜಾರಿಯಲ್ಲಿದೆ. ಪಂಜಾಬ್‌ನಲ್ಲಿಯೂ ಇಂತಹುದೇ ನೀತಿಯನ್ನು ಕೆಸಿಆರ್ ಅವರ ಕುಟುಂಬದ ಸದಸ್ಯರು ಜಾರಿ ಮಾಡಿಸಿದ್ದಾರೆ. ಕೆಸಿಆರ್ ಕುಟುಂಬದ ಸದಸ್ಯರು ಸಿಸೋಡಿಯಾ ಮತ್ತು ಕೇಜ್ರಿವಾಲ್ ಜತೆ ಸೇರಿ ಈ ನೀತಿ ರೂಪಿಸಿದ್ದಾರೆ ಎಂದು ಪರ್ವೇಶ್ ಆರೋಪಿಸಿದ್ದಾರೆ.

ಎಂಟು ಮಂದಿಯ ವಿರುದ್ಧ ಲುಕ್‌ಔಟ್ ನೋಟಿಸ್

ಅಬಕಾರಿ ನೀತಿ ಜಾರಿ ಹಗರಣದ ಎಫ್‌ಐಆರ್‌ನಲ್ಲಿ ಹೆಸರು ಇರುವ ಎಂಟು ಮಂದಿಯ ವಿರುದ್ಧ ಲುಕ್‌ಔಟ್ ನೋಟಿಸ್ ಹೊರಡಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಎಫ್‌ಐಆರ್‌ನಲ್ಲಿ ಹೆಸರು ಇರುವ ಸಾರ್ವಜನಿಕ ಸೇವಕರ ವಿರುದ್ಧ ಇಂತಹ ನೋಟಿಸ್ ಹೊರಡಿಸಿಲ್ಲ. ಸಿಸೋಡಿಯಾ ಸೇರಿ ಸಾರ್ವಜನಿಕ ಸೇವಕರ ವಿರುದ್ಧ ಲುಕ್‌ಔಟ್ ನೋಟಿಸ್ ಹೊರಡಿಸುವ ಅಗತ್ಯ ಕಂಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರಕರಣದ ಎಫ್‌ಐಆರ್‌ನಲ್ಲಿ ಒಟ್ಟು 13 ಜನರನ್ನು ಹೆಸರಿಸಲಾಗಿದೆ.

> ಪ್ರತಿ ಬೆಳಿಗ್ಗೆಯೂ ಎದ್ದು ಸಿಬಿಐ, ಇ.ಡಿ. ಆಟವನ್ನು ಕೇಂದ್ರವು ಶುರು ಮಾಡಿಕೊಳ್ಳುತ್ತಿದೆ. ಹೀಗಾದರೆ ದೇಶದ ಪ್ರಗತಿ ಹೇಗೆ ಸಾಧ್ಯ?
> **ಅರವಿಂದ ಕೇಜ್ರಿವಾಲ್**
> ದೆಹಲಿ ಮುಖ್ಯಮಂತ್ರಿ

> ಅಬಕಾರಿ ನೀತಿಯ ಹಗರಣದ ಬೇರುಗಳು ಭ್ರಷ್ಟ ಕೇಜ್ರಿವಾಲ್ ಅವರ ಮನೆ ಬಾಗಿಲವರೆಗೂ ಚಾಚಿಕೊಂಡಿವೆ. ಕೈಕೋಳ ಅವರ ಹತ್ತಿರದಲ್ಲಿಯೇ ಇದೆ
> **ಗೌರವ್ ಭಾಟಿಯಾ**
> ಬಿಜೆಪಿ ರಾಷ್ಟ್ರೀಯ ವಕ್ತಾರ

ಸ್ತಂಭಾರೋಹಣ ಯಾದಗಿರಿ ಜಿಲ್ಲೆಯ ಸುರಪುರ ನಗರದ ಇತಿಹಾಸ ಪ್ರಸಿದ್ಧ ವೇಣುಗೋಪಾಲಸ್ವಾಮಿ (ಹಾಲೋಕುಳಿ) ಜಾತ್ರೆಯ ಅಂಗವಾಗಿ ಭಾನುವಾರ ನಡೆದ ಸ್ತಂಭಾರೋಹಣ ವೀಕ್ಷಿಸಲು ಸಾವಿರಾರು ಜನ ಸೇರಿದ್ದರು -ಪ್ರಜಾವಾಣಿ ಚಿತ್ರ

ಕೇಂದ್ರದ 'ಸ್ಮಾರ್ಟ್ ಸಿಟಿ' ಯೋಜನೆಯಲ್ಲಿ ಬೆಂಗಳೂರು ಮೂರನೇ ಹಂತದಲ್ಲಿ ಸೇರಿಕೊಂಡಿತು. ಕಾಮಗಾರಿಗಳು ಇನ್ನೂ ನಡೆಯುತ್ತಲೇ ಇವೆ. ಯೋಜನೆಯಲ್ಲಿ ನಗರ ಎಷ್ಟು ಸ್ಮಾರ್ಟ್ ಆಗಿದೆ ಎಂಬ ವಾಸ್ತವ ತೆರೆದಿಡಲಿದೆ ಈ ಲೇಖನ ಮಾಲೆ ಪುಟ 2

ಅಧ್ಯಕ್ಷ ಹುದ್ದೆಗೆ ಇನ್ನಿಲ್ಲದ ಲಾಬಿ

ಸದ್ಯ ಅಸ್ತಿತ್ವ ಕಳೆದುಕೊಂಡಿರುವ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಎಂಟು ತಿಂಗಳಿಂದ ಖಾಲಿ ಬಿದ್ದಿರುವ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಹುದ್ದೆಗೆ ಇನ್ನಿಲ್ಲದ ಪೈಪೋಟಿ ಏರ್ಪಟ್ಟಿದೆ. ಸಚಿವರು, ಮಠಾಧೀಶರು, ಪ್ರಭಾವಿ ರಾಜಕಾರಣಿಗಳ ಶಿಫಾರಸು ಪತ್ರಗಳ ಸಹಿತ 50ಕ್ಕೂ ಹೆಚ್ಚು ಅರ್ಜಿಗಳು ಈ ಹುದ್ದೆಗೆ ಸಲ್ಲಿಕೆಯಾಗಿವೆ. ಹೀಗಾಗಿ, ಸರ್ಕಾರದ ಪಾಲಿಗೆ ನೇಮಕಾತಿಯು ಕಗ್ಗಂಟಾಗಿ ಪರಿಣಮಿಸಿದೆ.

ಸಾಂವಿಧಾನಿಕ ಸಂಸ್ಥೆಯಾಗಿರುವ ಈ ಆಯೋಗ, ಮಕ್ಕಳ ಹಕ್ಕುಗಳ ರಕ್ಷಣೆಯ ಜೊತೆಗೆ, ಶಿಕ್ಷಣ ಹಕ್ಕು ಕಾಯ್ದೆ, ಪೋಕ್ಸೊ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳ ವಿಚಾರಣೆ ನಡೆಸುತ್ತದೆ. ಸದ್ಯ ಪೂರ್ಣಪ್ರಮಾಣದ ಆಯೋಗ ಇಲ್ಲದೇ ಇರುವುದರಿಂದ 1,200ಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥವಾಗದೇ ಉಳಿದಿವೆ.

ಆಯೋಗದ ಅಧ್ಯಕ್ಷರಾಗಿದ್ದ ಡಾ. ಅಂತೋಣಿ ಸೆಬಾಸ್ಟಿಯನ್ ಅವರ ಮೂರು ವರ್ಷಗಳ ಅಧಿಕಾರಾವಧಿ 2021ರ ಡಿ. 4ಕ್ಕೆ ಕೊನೆಗೊಂಡಿದೆ. ಬಳಿಕ, ಆಯೋಗದ ಆರು ಸದಸ್ಯರ ಪೈಕಿ ಒಬ್ಬರಾದ ಜಯಶ್ರೀ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಎಲ್ಲ ಆರೂ ಸದಸ್ಯರ ಅವಧಿ ಕೂಡಾ ಒಂದೂವರೆ ತಿಂಗಳ ಹಿಂದೆ (ಜುಲೈ 9) ಮುಕ್ತಾಯವಾಗಿದೆ. ಹೀಗಾಗಿ, ಆಯೋಗವು ಸದ್ಯ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಂತಿದೆ!

ಅಧ್ಯಕ್ಷ ಸ್ಥಾನಕ್ಕೆ ಆಯೋಗದ ಸದಸ್ಯರಾಗಿದ್ದ ಜಯಶ್ರೀ, 'ಚೈಲ್ಡ್ ರೈಟ್ಸ್ ಟ್ರಸ್ಟ್'ನ ಕಾರ್ಯಕಾರಿ ನಿರ್ದೇಶಕ ವಾಸುದೇವ ಶರ್ಮಾ, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಅವರೂ ಅರ್ಜಿ ಸಲ್ಲಿಸಿದ್ದಾರೆ.

ಅಧ್ಯಕ್ಷರ ಮತ್ತು ಸದಸ್ಯರ ಅಧಿಕಾರಾವಧಿ ಮೂರು ವರ್ಷಗಳು. ಅದಕ್ಕೂ ಮೊದಲು ಅಧ್ಯಕ್ಷರನ್ನು ಬದಲಿಸಲು ನಿಯಮದಲ್ಲಿ ಅವಕಾಶ ಇಲ್ಲ. ಅವರೇ ರಾಜೀನಾಮೆ ನೀಡಿದರೆ ಮಾತ್ರ ಹೊಸಬರ ನೇಮಕ ಮಾಡಬಹುದು.

8ನೇ ಪುಟ ನೋಡಿ

'ಸರ್ಕಾರಕ್ಕೆ ನಾಲ್ಕೈದು ಹೆಸರು ಶಿಫಾರಸು'

'ಹೊಸ ಅಧ್ಯಕ್ಷರ ನೇಮಕಕ್ಕೆ ಫೆ. 1ರಂದು ಅರ್ಜಿ ಆಹ್ವಾನಿಸಿ, 30 ದಿನಗಳ ಕಾಲಾವಕಾಶ ನೀಡಲಾಗಿತ್ತು. ಅರ್ಜಿ ಸಲ್ಲಿಕೆ ಅವಧಿ ಮುಗಿದು ಆರು ತಿಂಗಳು ಕಳೆದಿದೆ. ಹುದ್ದೆಗಾಗಿ ತೀವ್ರ ಪೈಪೋಟಿ, ಒತ್ತಡ, ವಶೀಲಿಬಾಜಿ ನಡೆಯುತ್ತಿದೆ. ಆರು ಸದಸ್ಯ ಸ್ಥಾನಗಳಿಗೆ ಜುಲೈ11ರಂದು ಅರ್ಜಿ ಆಹ್ವಾನಿಸಿ, ಒಂದು ತಿಂಗಳು ಅವಕಾಶ ನೀಡಲಾಗಿತ್ತು. ಸದಸ್ಯ ಸ್ಥಾನಕ್ಕೆ 90ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆ ಆಗಿವೆ. ಅಧ್ಯಕ್ಷರ ಹುದ್ದೆಗೆ ಸಲ್ಲಿಕೆಯಾದ ಅರ್ಜಿಗಳನ್ನು ಈಗಾಗಲೇ ಪರಿಶೀಲಿಸಿ, ನಾಲ್ಕೈದು ಹೆಸರುಗಳನ್ನು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ. ಸದಸ್ಯ ಸ್ಥಾನಗಳಿಗೆ ಸಲ್ಲಿಕೆಯಾದ ಅರ್ಜಿಗಳ ಪರಿಶೀಲನೆ ನಡೆಯುತ್ತಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

> ಅಧ್ಯಕ್ಷ ಹುದ್ದೆಗೆ ಸಾಕಷ್ಟು ಅರ್ಜಿಗಳು ಬಂದಿವೆ. ಆದರೆ, ಯಾವುದೇ ಶಿಫಾರಸು, ವಶೀಲಿಬಾಜಿ, ಒತ್ತಡಕ್ಕೆ ಮಣಿಯದೆ ಅತಿ ಶೀಘ್ರದಲ್ಲಿ ಆಯ್ಕೆ ಮಾಡುತ್ತೇವೆ
> **ಹಾಲಪ್ಪ ಆಚಾರ್**
> ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ

ಕಾಂಗ್ರೆಸ್ ಸಂಚಾಲನಾ ಸಮಿತಿಗೆ ಆನಂದ್ ಶರ್ಮಾ ರಾಜೀನಾಮೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಮಾಚಲ ಪ್ರದೇಶದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್‌ಗೆ ಹಿನ್ನಡೆ ಎದುರಾಗಿದೆ. ಪಕ್ಷದ ಪ್ರಮುಖ ನಾಯಕ ಆನಂದ್ ಶರ್ಮಾ ಅವರು ರಾಜ್ಯ ಕಾಂಗ್ರೆಸ್‌ನ ಸಂಚಾಲನಾ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ರಾಜೀನಾಮೆ ನೀಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ರಾಜೀನಾಮೆ ಪತ್ರ ರವಾನಿಸಿರುವ ಅವರು, 'ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ. ಈ ವಿಷಯವಾಗಿ ರಾಜಿ ಮಾಡಿಕೊಳ್ಳಲಾರೆ' ಎಂದು ಉಲ್ಲೇಖಿಸಿದ್ದಾರೆ.

'ಸಂಚಾಲನ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಭಾರವಾದ ಮನಸ್ಸಿನಿಂದಲೇ ರಾಜೀನಾಮೆ ನೀಡಿದ್ದೇನೆ. ನಾನು ಕಾಂಗ್ರೆಸ್ ಕಟ್ಟಾಳು. ಪಕ್ಷದ ಸಿದ್ಧಾಂತವು ರಕ್ತದಲ್ಲಿ ಬೆರೆತು ಹೋಗಿದೆ. ಆ ಸಿದ್ಧಾಂತಕ್ಕೆ ಬದ್ಧನಾಗಿಯೇ ಇರುತ್ತೇನೆ. ಈ ವಿಚಾರದಲ್ಲಿ ಯಾವುದೇ ಅನುಮಾನ ಬೇಡ. ನಿರಂತರ ಕಡೆಗಣನೆ ಹಾಗೂ ಅಪಮಾನದಿಂದ ನೊಂದಿದ್ದೇನೆ. ನಾನು ಸ್ವಾಭಿಮಾನಿ. ರಾಜೀನಾಮೆ ಬಿಟ್ಟರೆ ಬೇರೆ ಯಾವ ಆಯ್ಕೆಯೂ ಕಾಣಲಿಲ್ಲ' ಎಂದು ಅವರು ಟ್ವೀಟ್ ಮಾಡಿದ್ದಾರೆ.

'ಸಮಾಲೋಚನ ಸಭೆಗಳಿಂದ ತಮ್ಮನ್ನು ಪದೇ ಪದೇ ಕಡೆಗಣಿಸಲಾಗಿದೆ. ಈ ಸಭೆಗಳ ಬಗ್ಗೆ ಮಾಹಿತಿಯೇ ನೀಡುತ್ತಿರಲಿಲ್ಲ. ಅವುಗಳಿಗೆ ಆಹ್ವಾನವನ್ನೂ ನೀಡುತ್ತಿರಲಿಲ್ಲ ಎಂದೂ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿರುವ ಅವರು, ರಾಜ್ಯದಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮುಂದುವರಿಸುವುದಾಗಿ ವಿವರಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ರಾಜ್ಯದಲ್ಲಿ ವಿವಿಧ ಸಮಿತಿಗಳಿದ್ದು, ಸಂಚಾಲನ ಸಮಿತಿಯ ಕಾರ್ಯದ ಬಗ್ಗೆ ಸ್ಪಷ್ಟನೆ ನೀಡುವಂತೆ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಹಾಗೂ ರಾಜ್ಯ ಉಸ್ತುವಾರಿ ರಾಜೀವ್ ಶುಕ್ಲಾ ಅವರಿಗೆ ಮನವಿ ಮಾಡಿದ್ದಾರೆ ಎಂದೂ ಹೇಳಲಾಗಿದೆ.

ಕೆಲ ದಿನಗಳ ಹಿಂದೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಪಕ್ಷದ ಪ್ರಚಾರ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ 'ಜಿ- 23' ಗುಂಪಿನ ನಾಯಕ ಗುಲಾಂ ನಬಿ ಆಜಾದ್ ರಾಜೀನಾಮೆ ನೀಡಿದ್ದರು.

ಕೆಪಿಟಿಸಿಎಲ್ ಪ್ರಶ್ನೆಪತ್ರಿಕೆ ಸೋರಿಕೆ ತಂದೆ, ಮಗನ ಸೆರೆ

ಗದಗ: ಕೆಪಿಟಿಸಿಎಲ್ ಕಿರಿಯ ಸಹಾಯಕ ಹುದ್ದೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ ಆರೋಪದ ಮೇಲೆ ಗದುಗಿನ ಮುನ್ಸಿಪಲ್ ಕಾಲೇಜಿನ ಉಪ ಪ್ರಾಂಶುಪಾಲ ಮಾರುತಿ ಸೋನಾವನೆ ಹಾಗೂ ಅವರ ಮಗ ಸಮೀತ್ ಕುಮಾರ್ ಎಂಬುವವರನ್ನು ಬೆಳಗಾವಿ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

ನಗರದ ಮುನ್ಸಿಪಲ್ ಕಾಲೇಜು ಸೇರಿದಂತೆ ಅವಳಿ ನಗರದ 21 ಕಡೆಗಳಲ್ಲಿ ಆ.7ರಂದು ಪರೀಕ್ಷೆ ನಡೆದಿತ್ತು. ಗದಗದಿಂದ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಹಿನ್ನಲೆಯಲ್ಲಿ ಪೊಲೀಸರು ವಿಚಾರಣೆ ಚುರುಕುಗೊಳಿಸುತ್ತಿದ್ದಂತೆ, ತಂದೆ– ಮಗ ಪ್ರಶ್ನೆಪತ್ರಿಕೆ ಸೋರಿಕೆಗೆ ಕೈ ಜೋಡಿಸಿದ್ದಾರೆ ಎನ್ನುವ ವಿಷಯ ಬಹಿರಂಗವಾಗಿತ್ತು.

ಪತ್ರಕರ್ತನ ಸೋಗಿನಲ್ಲಿ ಮುನ್ಸಿಪಲ್ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಬಂದಿದ್ದ ಸಮೀತ್ ಕುಮಾರ್, ತನ್ನ ಮೊಬೈಲ್‌ನಲ್ಲಿ ಪ್ರಶ್ನೆಪತ್ರಿಕೆ ಫೋಟೊ ತೆಗೆದುಕೊಂಡಿದ್ದಾನೆ. ಮೊಬೈಲ್‌ನಲ್ಲಿ ಸೆರೆಹಿಡಿದಿದ್ದ ಫೋಟೊವನ್ನು ರಾಜ್ಯದ ಬೇರೆ ಬೇರೆ ಪರೀಕ್ಷಾ ಕೇಂದ್ರಗಳಿಗೂ ಕಳಿಸಿರುವ ಸಾಧ್ಯತೆಗಳಿವೆ ಎಂದು ಸೈಬರ್ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಒಳ ಪುಟಗಳು

ಮಂತ್ರ ಮಾಂಗಲ್ಯ: ದಾಂಪತ್ಯಕ್ಕೆ ಕಾಲಿಟ್ಟ 42 ಜೋಡಿ 4

ಈಜು: ಜೆಡಿಡಾ, ಶಾಲಿನಿ ಮಿಂಚು 9

ರಾಜ್ಯದ 2 ಸಹಕಾರ ಬ್ಯಾಂಕ್ ಠೇವಣಿದಾರರಿಗೆ ವಿಮೆ 9

ವಿದೇಶಿ ವಿದ್ಯಾರ್ಥಿಗಳಿಗೆ ಶೇ 25 ಹೆಚ್ಚುವರಿ ಸೀಟು: ಯುಜಿಸಿ

ನವದೆಹಲಿ (ಪಿಟಿಐ): 'ದೇಶದಲ್ಲಿರುವ ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಸ್ನಾತಕ (ಯುಜಿ) ಹಾಗೂ ಸ್ನಾತಕೋತ್ತರ (ಪಿಜಿ) ಕಾರ್ಯಕ್ರಮಗಳ ಅಡಿ ವಿದೇಶಿ ವಿದ್ಯಾರ್ಥಿಗಳಿಗಾಗಿ ಶೇ 25ರಷ್ಟು ಹೆಚ್ಚುವರಿ ಸೀಟುಗಳನ್ನು ಹೊಂದಲು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಅನುಮತಿ ನೀಡಿದೆ' ಎಂದು ಯುಜಿಸಿ ಮುಖ್ಯಸ್ಥ ಜಗದೀಶ್ ಕುಮಾರ್ ಭಾನುವಾರ ಹೇಳಿದ್ದಾರೆ.

'ಶಿಕ್ಷಣ ಸಂಸ್ಥೆಗಳು ಪ್ರವೇಶ ಪರೀಕ್ಷೆ ನಡೆಸದೆಯೇ ಈ ಸೀಟುಗಳನ್ನು ಭರ್ತಿ ಮಾಡಿಕೊಳ್ಳಬಹುದು. ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಜಾಗತಿಕ ಮಟ್ಟಕ್ಕೆ ವಿಸ್ತರಿಸುವ ಉದ್ದೇಶದಿಂದ ಹೋದ ವಾರ ನಡೆದ ಯುಜಿಸಿ ಸಭೆಯಲ್ಲಿ ಈ ಸಂಬಂಧ ನಿರ್ಣಯ ಕೈಗೊಳ್ಳಲಾಯಿತು' ಎಂದು ಅವರು ತಿಳಿಸಿದ್ದಾರೆ.

'ವಿಶ್ವವಿದ್ಯಾಲಯ ಅಥವಾ ಶಿಕ್ಷಣ ಸಂಸ್ಥೆ ಹೊಂದಿರುವ ಮೂಲಸೌಕರ್ಯ, ಬೋಧನಾ ಸಿಬ್ಬಂದಿಯ ಲಭ್ಯತೆ ಹಾಗೂ ಇತರ ಮಾನದಂಡಗಳ ಆಧಾರದಲ್ಲಿ ನಿಯಂತ್ರಕ ಸಂಸ್ಥೆಗಳು ಮಾರ್ಗಸೂಚಿ ಸಿದ್ಧಪಡಿಸಲಿವೆ. ಅವುಗಳಿಗೆ ಅನುಗುಣವಾಗಿ ಸಂಬಂಧಪಟ್ಟ ಉನ್ನತ ಶಿಕ್ಷಣ ಸಂಸ್ಥೆಗಳು ನಿಗದಿತ ಸಾಮರ್ಥ್ಯಕ್ಕಿಂತಲೂ ಅಧಿಕ ಸೀಟುಗಳನ್ನು ಹೊಂದುವ ಬಗ್ಗೆ ನಿರ್ಣಯ ತೆಗೆದುಕೊಳ್ಳಬಹುದಾಗಿದೆ' ಎಂದಿದ್ದಾರೆ.

ಸಿಒಎ ನೇಮಕ: 'ಸುಪ್ರೀಂ' ಮೆಟ್ಟಿಲೇರಿದ ಕೆಒಎ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ ಒಲಿಂಪಿಕ್ ಸಂಸ್ಥೆಗೆ ಆಡಳಿತ ಸಮಿತಿಯನ್ನು ನೇಮಕ ಮಾಡಿರುವ ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಒಲಿಂಪಿಕ್ ಸಂಸ್ಥೆಯು (ಕೆಒಎ) ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಐಒಎ ಆಡಳಿತವನ್ನು ನೋಡಿಕೊಳ್ಳಲು ಹೈಕೋರ್ಟ್ ಆಗಸ್ಟ್ 16ರಂದು ಸಿಒಎ ನೇಮಕ ಮಾಡಿತ್ತು. ಆದರೆ ಈ ನೇಮಕದ ಸಿಂಧುತ್ವವನ್ನು ಪ್ರಶ್ನಿಸಿರುವ ಕೆಒಎ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ನಿಗದಿಯ ವೇಳೆಯಲ್ಲಿ ಐಒಎಗೆ ಚುನಾವಣೆ ನಡೆಸಲು ಕೂಡ ಅನುವು ಮಾಡಿಕೊಡುವಂತೆಯೂ ಕೋರಿದೆ.

ಐಒಎಗೆ ಅನಿಲ್ ಖನ್ನಾ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವ ಹೈಕೋರ್ಟ್ ಕ್ರಮವೂ ನಿಯಮಬಾಹಿರವಾಗಿದೆ. ಜುಲೈ 23ರಂದು ಕಾರ್ಯನಿರ್ವಾಹಕ ಸಮಿತಿಯು ಮಾಡಿರುವ ನಿರ್ಣಯದನ್ವಯ ಅದಿಲೆ ಸುಮರಿವಾಲಾ ಅವರೇ ಅಧ್ಯಕ್ಷರಾಗಿ ಮುಂದುವರಿಯಬೇಕು ಎಂದೂ ಪ್ರತಿಪಾದಿಸಿದೆ.

ರಾಜ್ಯ ಒಲಿಂಪಿಕ್ ಸಂಸ್ಥೆಗಳ (ಎಸ್‌ಒಎ) ಪಾತ್ರವನ್ನೂ ಕ್ಷೀಣಗೊಳಿಸಿರುವ ಹೈಕೋರ್ಟ್, ಐಒಎನಲ್ಲಿ ಮತದಾನದ ಹಕ್ಕನ್ನು ಮೊಟಕುಗೊಳಿಸಿದೆ. ಎಸ್‌ಒಎ ಸದಸ್ಯರು ಐಒಎ ಕಾರ್ಯನಿರ್ವಾಹಕ ಸಮಿತಿಗೆ ಅಥವಾ ಪದಾಧಿಕಾರಿಯಾಗಿ ಚುನಾಯಿತರಾಗುವಂತಿಲ್ಲ ಎಂದು ಸೂಚಿಸಿರುವುದು ಅಸಮರ್ಪಕವಾಗಿದೆ. ಇದರಿಂದಾಗಿ ರಾಜ್ಯ ಸಂಸ್ಥೆಗಳು ಸರ್ಕಾರಿ ಅನುದಾನ ಹಾಗೂ ಸೌಲಭ್ಯಗಳಿಂದ ವಂಚಿತವಾಗುವ ಸಾಧ್ಯತೆಗಳಿವೆ ಎಂದೂ ಕೆಒಎ ಉಲ್ಲೇಖಿಸಿದೆ.

ಸಿಒಎ ನೇಮಕ ಪ್ರಶ್ನಿಸಿ ಐಒಎ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಆ. 18ರಂದು ನಡೆಸಿದ್ದ ಸುಪ್ರೀಂ 'ಯಥಾಸ್ಥಿತಿ ಕಾಪಾಡಿಕೊಳ್ಳಬೇಕು. ಐಒಎಯ ದೈನಂದಿನ ಆಡಳಿತವನ್ನು ತನ್ನ ಕೈಗೆ ತೆಗೆದುಕೊಳ್ಳಬಾರದು' ಎಂದು ಮಧ್ಯಂತರ ಆದೇಶ ನೀಡಿತ್ತು.

'ಐಒಎಯಲ್ಲಿರುವ ನಿಯಮಾವಳಿಯು ಅಂತರರಾಷ್ಟ್ರೀಯ ಒಲಿಂಪಿಕ್ ಕಮಿಟಿ (ಐಒಸಿ)ಯಿಂದ ಮಾನ್ಯಗೊಂಡಿರುವುದಾಗಿದೆ. ಅದರನ್ವಯ ಐಒಎ ಮತ್ತು ರಾಜ್ಯ ಸಂಸ್ಥೆಗಳ ನಡುವಣ ಇರುವ ವ್ಯವಸ್ಥಿತ ಆಡಳಿತವನ್ನು ಅರಿಯುವಲ್ಲಿಯೂ ಹೈಕೋರ್ಟ್ ವಿಫಲವಾಗಿದೆ. ಅರ್ಜಿದಾರರು ಐಒಎಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ತಡೆಯೊಡ್ಡಲಾಗಿದೆ. ಅವರಿಂದ ಒಂದು ವಿವರಣೆ ಕೂಡ ಪಡೆಯದೇ ಈ ಕ್ರಮ ಜರುಗಿಸಲಾಗಿದೆ' ಎಂದು ಕೆಒಎ ಪರ ವಕೀಲರಾದ ರಾಜೇಶ್ ಇನಾಮದಾರ್, ಹರ್ಷ ಪಾಂಡೆ ಮತ್ತು ಅಶ್ವಿನ್ ಜಿ ರಾಜ್ ಹೇಳಿದ್ದಾರೆ.

ಬಿಜೆಪಿ ಟೀಕೆಗೆ ಸಿದ್ದರಾಮಯ್ಯ ತಿರುಗೇಟು

'ಇಂತಹದ್ದೇ ತಿನ್ನು ಎಂದು ದೇವರು ಎಲ್ಲಿಯಾದರೂ ಹೇಳಿದ್ದಾನೆಯೇ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ಮಡಿಕೇರಿಗೆ ಭೇಟಿ ನೀಡಿದ್ದ ದಿನ ಮಧ್ಯಾಹ್ನ ಗೆಸ್ಟ್‌ಹೌಸ್‌ನಲ್ಲಿ ಊಟ ಮಾಡಿದ್ದೆ. ಸಂಜೆ ದೇಗುಲಕ್ಕೆ ಹೋಗಿದ್ದೆ. ರಾತ್ರಿ ಮಾಂಸ ತಿಂದು ಬೆಳಿಗ್ಗೆ ದೇಗುಲಕ್ಕೆ ಹೋಗಬಹುದು. ಮಧ್ಯಾಹ್ನ ತಿಂದು ಸಂಜೆ ಹೋಗಬಾರದೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇಂತಹದ್ದೇ ತಿನ್ನು ಎಂದು ದೇವರು ಎಲ್ಲಿಯಾದರೂ ಹೇಳಿದ್ದಾನೆಯೇ' ಎಂದು ಮಾಧ್ಯಮದವರನ್ನು ಕೇಳಿದರು.

'ನಾನು ಮಾಂಸಾಹಾರಿ. ಮಾಂಸ ತಿನ್ನುವೆ. ಅದರಲ್ಲಿ ತಪ್ಪೇನು? ನಿಮ್ಮ ಆಹಾರ ಕ್ರಮ ನಿಮ್ಮದು, ನಮ್ಮ ಆಹಾರ ಕ್ರಮ ನಮ್ಮದು' ಎಂದರು. 'ಬಿಜೆಪಿಯವರಿಗೆ ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಚೆನ್ನಾಗಿ ಗೊತ್ತು. ಎಲ್ಲಿ ಎಲ್ಲವೂ ಚೆನ್ನಾಗಿದೆಯೋ ಅಲ್ಲಿ ಅವರು ವಿಷ ಹಾಕುತ್ತಾರೆ' ಎಂದು ಟೀಕಿಸಿದರು.

ಅವರ ಮನೆಗೆ ಹೋಗಿಲ್ಲ (ಬೆಂಗಳೂರು ವರದಿ): 'ನಾನು ವೀಣಾ ಅಚ್ಚಯ್ಯನವರ ಮನೆಗೆ ಹೋಗಿಯೇ ಇಲ್ಲ. ಅವರ ಮನೆಗೆ ಹೋಗಿ ಮಾಂಸಾಹಾರ ತಿಂದೆ ಎಂದು ಹೇಳುತ್ತಾರೆ. ಸುದರ್ಶನ ಗೆಸ್ಟ್ ಹೌಸ್‌ನಲ್ಲಿ ಊಟ ಮಾಡಿದ್ದೆ' ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ಶಾಂತವೇರಿ ಗೋಪಾಲ ಗೌಡ ಹಾಗೂ ಮಧುಲಿಮಯೆ ಅವರ ಜನ್ಮ ಶತಮಾನೋತ್ಸವ ಮತ್ತು ಶಾಹು ಮಹಾರಾಜ್ ಒಂದು ನೆನಪು ಕಾರ್ಯಕ್ರಮದ ಸಮಾರೋಪದಲ್ಲಿ ಮಾತನಾಡಿದ ಅವರು, 'ನಾವು ಮೈಸೂರಿನಲ್ಲಿ ಚಾಮುಂಡೇಶ್ವರಿ ಹಬ್ಬ ಮಾಡುತ್ತೇವೆ. ಆಗ ಮರಿಯನ್ನೇ ಬಲಿ ಕೊಡೋದು. ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗೋದು ಬಿಡ್ತಾರಾ? ಆಷಾಢ ಬಂದಾಗ ಕಾಯ್ತಾ ಇರ್ತಾರೆ. ಏನು ಮೌಢ್ಯ ಆಚರಿಸುತ್ತಾರಪ್ಪ' ಎಂದು ಹೇಳಿದ್ದಾರೆ.

ಮಾಂಸ ಸೇವಿಸಿ ದೇವಾಲಯಕ್ಕೆ?

ಮಡಿಕೇರಿ: ಮಳೆ ಹಾನಿ ಪ್ರದೇಶಗಳನ್ನು ವೀಕ್ಷಿಸಲು ಬಂದಿದ್ದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಾಂಸಾಹಾರ ಸೇವಿಸಿ ಕೊಡ್ಲಿಪೇಟೆಯ ಬಸವೇಶ್ವರ ದೇಗುಲಕ್ಕೆ ಭೇಟಿ ನೀಡಿದ್ದರು ಎಂದು ಆರೋಪಿಸಲಾಗುತ್ತಿದೆ. ಈ ಬಗ್ಗೆ ಸಂದೇಶಗಳು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿವೆ.

ಪಕ್ಷದ ಮುಖಂಡರೊಬ್ಬರ ಮನೆಯಲ್ಲಿ ಸಿದ್ಧಪಡಿಸಿದ್ದ ನಾಟಿ ಕೋಳಿ ಭೋಜನವನ್ನು ಸುದರ್ಶನ ಪ್ರವಾಸಿ ಮಂದಿರದಲ್ಲಿ (ಗೆಸ್ಟ್‌ಹೌಸ್) ಸಿದ್ದರಾಮಯ್ಯ ಸೇವಿಸಿದ್ದರು. ಬಳಿಕ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

> ನಾಟಿಕೋಳಿ ಸಾಂಬಾರು ಒಯ್ದಿದ್ದು ನಿಜ. ಆದರೆ, ಕೊಡಗಿನ ವಿಶೇಷ ಅಡುಗೆಯಾದ ಕಳಲೆ ಸಾರು, ಅಕ್ಕಿರೊಟ್ಟಿಯನ್ನಷ್ಟೇ ಸೇವಿಸಿದ್ದರು. ಮಾಂಸ ತಿಂದಿರಲಿಲ್ಲ
> **ವೀಣಾ ಅಚ್ಚಯ್ಯ**
> ವಿಧಾನಪರಿಷತ್ ಮಾಜಿ ಸದಸ್ಯೆ

ಆತ್ಮಾಹುತಿ ದಾಳಿಗೆ ಸಂಚು: ಉಗ್ರ ಸೆರೆ

ಜಮ್ಮು (ಪಿಟಿಐ): 'ಲಷ್ಕರ್ ಎ- ತಯಬಾದ (ಎಲ್‌ಇಟಿ) ಮಾರ್ಗದರ್ಶಕ ಹಾಗೂ ಪಾಕಿಸ್ತಾನದ ಸೇನೆಯ ಗುಪ್ತಚರ ವಿಭಾಗದಲ್ಲಿ ಕೆಲಸ ಮಾಡಿದ್ದ ಉಗ್ರನನ್ನು ಭಾರತೀಯ ಸೇನೆಯು ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಭಾನುವಾರ ಬಂಧಿಸಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ಸಬ್ಜ್‌ಕೋಟ್ ಗ್ರಾಮದ ನಿವಾಸಿ ತಬರಕ್ ಹುಸೇನ್ (32) ಬಂಧಿತ. ಈತ ಆತ್ಮಾಹುತಿ ದಾಳಿಗೆ ಸಂಚು ರೂಪಿಸಿದ್ದ. 6 ವರ್ಷಗಳಲ್ಲಿ ಎರಡನೇ ಬಾರಿ ಈತನನ್ನು ಬಂಧಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಯುಪಿಐಗೆ ಶುಲ್ಕ: ಆಲೋಚನೆ ಇಲ್ಲ'

ನವದೆಹಲಿ (ಪಿಟಿಐ): ಯುಪಿಐ ವಹಿವಾಟುಗಳಿಗೆ ಶುಲ್ಕ ವಿಧಿಸುವ ಆಲೋಚನೆ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಭಾನುವಾರ ಸ್ಪಷ್ಟಪಡಿಸಿದೆ. ಯುಪಿಐ ವ್ಯವಸ್ಥೆಯು ಸಾರ್ವಜನಿಕರಿಗೆ ಹೆಚ್ಚು ಅನುಕೂಲಕರ ಆಗಿದೆ. ಬೇರೆ ಮಾರ್ಗಗಳ ಮೂಲಕ ಸೇವಾ ವೆಚ್ಚ ಭರಿಸಿಕೊಳ್ಳುವಂತೆ ಮಾಡಿ, ಸೇವೆ ನೀಡುವವರ ಆತಂಕ ದೂರ ಮಾಡಲಾಗುವುದು ಎಂದು ಸಚಿವಾಲಯವು ಟ್ವೀಟ್‌ನಲ್ಲಿ ತಿಳಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಿಮ್ಮ ನೆನಪಿನ ದಿನ ನಮ್ಮ ಸ್ಯಾಂಡಲ್‌ವುಡ್ ಹ್ಯಾಟ್ರಿಕ್ ಹೀರೋ ಶಿವರಾಜಕುಮಾರ ಅವರೊಂದಿಗೆ!

ದಿ. 1.08.2022 ರಿಂದ 31.09.2022 ರವರೆಗೆ

ಪ್ರತೀ ಒಂದು ಹೊಸ ಚಿನ್ನದ ಸಾಲದ ವ್ಯವಹಾರ ಮಾಡಿದರೇ ಅದೃಷ್ಟದ ಕೂಪನ್ ಪಡೆದುಕೊಂಡು ನಟ ಶಿವರಾಜಕುಮಾರ ಅವರನ್ನು ಭೇಟಿ ಮಾಡುವ ಸುವರ್ಣ ಅವಕಾಶವನ್ನು ನಿಮ್ಮದಾಗಿಸಿಕೊಳ್ಳಿ.

*ನಿಯಮ ಮತ್ತು ಷರತ್ತುಗಳು ಅನ್ವಯ.

ತಡರಾತ್ರಿ ಮತ್ತು ಭಾನುವಾರವೂ ಸೇವೆ ಲಭ್ಯವಿದೆ*

ಮಣಪ್ಪುರಂ ಫೈನಾನ್ಸ್ ಲಿಮಿಟೆಡ್

Make Life Easy

Toll Free : 1800-420-22-33

manappuramfinanceltd www.manappuram.com

To refer: Call: 1800 420 2233, E-Mail: mail@manappuram.com

BTM 2ನೇ ಹಂತ 24X7 DSGL (0879) *#10 (ಹಳೆಯ 20) ನೆಲ ಮಹಡಿ 100 ಅಡಿ ರಿಂಗ್ ರಸ್ತೆ, 9ನೇ ಮುಖ್ಯ**ಮೈಕೋ ಲೇಔಟ್ ಬಸ್ ನಿಲ್ದಾಣದ ಹತ್ತಿರ* *BTM ಲೇಔಟ್* *ಬೆಂಗಳೂರು - 560029* *ಸಂಪರ್ಕ : 90726 90879 / 90726 06047*

ಸಿಟಿ ಈಗ ಎಷ್ಟು ಸ್ಮಾರ್ಟ್?

'ಸ್ಮಾರ್ಟ್ ಸಿಟಿ' ಯೋಜನೆಗಳಿಗೆ ಒಂದು ವರ್ಷ ಹೆಚ್ಚುವರಿ ಕಾಲಾವಕಾಶ • ರಸ್ತೆಗಳಿಗೆ ಮೊದಲ ಆದ್ಯತೆ: ಸೆಪ್ಟೆಂಬರ್ ಎರಡನೇ ವಾರಕ್ಕೆ ಸಿದ್ಧ

'ಸ್ಮಾರ್ಟ್' ರಸ್ತೆಗಳಿಗೆ ₹436 ಕೋಟಿ ವೆಚ್ಚ

• ಆರ್. ಮಂಜುನಾಥ್

ಬೆಂಗಳೂರು: 'ಸ್ಮಾರ್ಟ್ ಸಿಟಿ' ಯೋಜನೆಗೆ ಬೆಂಗಳೂರನ್ನೂ ಸೇರಿಸಬೇಕು ಎಂದು ಎಲ್ಲೆಡೆಯ ಒತ್ತಾಯಕ್ಕೆ ಮಣಿದು ಕೇಂದ್ರ ಸರ್ಕಾರ ಮೂರನೇ ಸುತ್ತಿನಲ್ಲಿ ನಗರವನ್ನು ಆಯ್ಕೆ ಮಾಡಿತು. ಒಂದೆರಡು ವರ್ಷಗಳಲ್ಲಿ ಮುಗಿಯಬೇಕಿದ್ದ ಯೋಜನೆಗಳೂ ಇನ್ನೂ ಮುಗಿದಿಲ್ಲ. 2022ರ ಜೂನ್‌ಗೆ ಎಲ್ಲ ಕಾಮಗಾರಿಗಳೂ ಮುಗಿಯಬೇಕಿದ್ದವು. ಒಂದು ವರ್ಷ ಹೆಚ್ಚುವರಿ ಕಾಲಾವಕಾಶ ಪಡೆದಿರುವ 'ಸ್ಮಾರ್ಟ್ ಯೋಜನೆ'ಗಳು ಪೂರ್ಣಗೊಳ್ಳುವ ನಿರೀಕ್ಷೆ ಇಲ್ಲ.

'ಸ್ಮಾರ್ಟ್ ಸಿಟಿ ಯೋಜನೆಯಡಿ ಸುಮಾರು ಶೇ 43.6ರಷ್ಟು ಹಣ ವ್ಯಯವಾಗಿರುವುದು ರಸ್ತೆಗಳಿಗೆ. ಬೆಂಗಳೂರಿನಲ್ಲಿ ₹436 ಕೋಟಿ ವೆಚ್ಚದಲ್ಲಿ 32 ರಸ್ತೆಗಳು 'ಸ್ಮಾರ್ಟ್ ಟೆಂಡರ್ ಶ್ಯೂರ್' ಮಾದರಿಯಲ್ಲಿ ಅಭಿವೃದ್ಧಿಯಾಗಿವೆ. ಇನ್ನು ಅವೆನ್ಯೂ ರಸ್ತೆ ಹಾಗೂ ಎಚ್‌ಕೆಪಿ ರಸ್ತೆ (ಕ್ವೀನ್ಸ್ ರಸ್ತೆಯಿಂದ ರಸೆಲ್ ಮಾರುಕಟ್ಟೆ) ಅಭಿವೃದ್ಧಿಯ ಕೊನೆ ಘಟ್ಟದಲ್ಲಿವೆ.

ನಗರದಲ್ಲಿ ಎಲ್ಲೆಡೆ ರಸ್ತೆ ಅಭಿವೃದ್ಧಿ ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಆದರೆ, 'ಸ್ಮಾರ್ಟ್ ಸಿಟಿ'ಯಡಿ ಅಭಿವೃದ್ಧಿಯಾಗಿರುವ 32 ರಸ್ತೆಗಳು ಮೂರು ವರ್ಷ ನಿರ್ವಹಣೆಯನ್ನೂ ಹೊಂದಿವೆ. ಅಂದರೆ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಂಡ ಗುತ್ತಿಗೆದಾರರು ಮೂರು ವರ್ಷ ಇದರ ನಿರ್ವಹಣೆ ಮಾಡುತ್ತಾರೆ. ಇದು 'ಸ್ಮಾರ್ಟ್ ಸಿಟಿ'ಯ ಷರತ್ತೂ ಹೌದು.

ಟೆಂಡರ್ ಶ್ಯೂರ್ ಯೋಜನೆಯಡಿ ಬಿಬಿಎಂಪಿ 2017ರಲ್ಲಿ 36 ರಸ್ತೆಗಳ ಅಭಿವೃದ್ಧಿಗೆ ಕ್ರಿಯಾಯೋಜನೆ ರೂಪಿಸಿತ್ತು. ಇದು ಕಾರ್ಯಗತಗೊಂಡಿರಲಿಲ್ಲ. ಸ್ಮಾರ್ಟ್ ಸಿಟಿ ಯೋಜನೆಯಲ್ಲಿ 12 ಪ್ರಾಜೆಕ್ಟ್‌ಗಳಲ್ಲಿ 32 ರಸ್ತೆಗಳನ್ನು ಅಭಿವೃದ್ಧಿ ಮಾಡಲು 2019ರ ನವೆಂಬರ್ 9ರಂದು ಮುಖ್ಯಮಂತ್ರಿಯವರಿಂದ ಶಂಕುಸ್ಥಾಪನೆಗೊಂಡು ಈ ರಸ್ತೆಗಳ ಅಭಿವೃದ್ಧಿ ಆರಂಭವಾಯಿತು. 2020ರ ಮೇ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಕೋವಿಡ್ ಲಾಕ್‌ಡೌನ್‌ನಿಂದ ವಿಳಂಬವಾಯಿತು. ಎಲ್ಲ ಲಾಕ್‌ಡೌನ್‌ಗಳು ಮುಗಿದರೂ ಕಾಮಗಾರಿ ಪೂರ್ಣಗೊಂಡಿಲ್ಲ. ಇದಕ್ಕೆ 'ಏಜೆನ್ಸಿಗಳ ನಡುವಿನ ಸಮನ್ವಯ ಕೊರತೆ' ಎಂಬ ಸಬೂಬು ಕೇಳಿರುತ್ತದೆ. ಹೀಗಾಗಿ, ಎರಡು ವರ್ಷಗಳ ನಂತರ ರಸ್ತೆಗಳ ಅಭಿವೃದ್ಧಿ ಪೂರ್ಣಗೊಂಡಿದೆ.

ಸ್ಮಾರ್ಟ್ ಟೆಂಡರ್‌ಶ್ಯೂರ್ ರಸ್ತೆಗಳು ಅನುಷ್ಠಾನವಾಗುವ ಸಂದರ್ಭದಲ್ಲಿ ಜನರಿಗೆ ಸಾಕಷ್ಟು ಸಂಕಷ್ಟವನ್ನೂ ನೀಡಿವೆ. ಇವೆಲ್ಲ ರಸ್ತೆಗಳು ನಗರದ ಹೃದಯಭಾಗದಲ್ಲೇ ಇವೆ. ಹೀಗಾಗಿ, ಸಂಚಾರ ದಟ್ಟಣೆ ಕಿರಿಕಿರಿ ಹೆಚ್ಚಾಗಿಯೇ ಇತ್ತು. ಈಗ ಆ ಸಮಸ್ಯೆ ಕಡಿಮೆಯಾಗಿದೆ. 32 ರಸ್ತೆಗಳಲ್ಲೂ ಸಂಚಾರ ಇದೆ. ಆದರೆ, ಅವೆನ್ಯೂ ರಸ್ತೆ ಹಾಗೂ ಎಚ್‌ಕೆಪಿ ರಸ್ತೆ (ಕ್ವೀನ್ಸ್ ರಸ್ತೆಯಿಂದ ರಸೆಲ್ ಮಾರುಕಟ್ಟೆ) ಹೊರತುಪಡಿಸಿ ಉಳಿದ 30 ರಸ್ತೆಗಳಲ್ಲಿ ಸಂಚಾರ ಆರಂಭವಾಗಿದೆ. ಒಟ್ಟು 29.53 ಕಿ.ಮೀ ರಸ್ತೆ 'ಸ್ಮಾರ್ಟ್' ಅಭಿವೃದ್ಧಿಯಾಗುತ್ತಿದೆ.

ಶೇ 80ರಷ್ಟು ಪೂರ್ಣ

'ಒಳಚರಂಡಿ, ಕುಡಿವ ನೀರು, ವಿದ್ಯುತ್ ಸಂಪರ್ಕವನ್ನು ಪ್ರತಿ ಮನೆಗೆ ಒದಗಿಸಬೇಕಾದ್ದರಿಂದ ರಸ್ತೆ ಕಾಮಗಾರಿ ವಿಳಂಬವಾಯಿತು. ಹಲವು ಏಜೆನ್ಸಿಗಳ ಕೆಲಸವಾಗಬೇಕಾಗಿದೆ. ಅಲ್ಲದೆ, ಮಾರುಕಟ್ಟೆ ಪ್ರದೇಶದಲ್ಲಿ ರಾತ್ರಿಯ ಸುಮಾರು 5 ಗಂಟೆಯಷ್ಟು ಮಾತ್ರ ಕೆಲಸ ಮಾಡಲು ಸಮಯ ಇರುತ್ತದೆ. 30 ರಸ್ತೆಗಳು ಪೂರ್ಣಗೊಂಡು, ಸಂಚಾರಕ್ಕೆ ಅನುವಾಗಿವೆ. ಉಳಿದ ಎರಡು ರಸ್ತೆಗಳೂ ಸೆಪ್ಟೆಂಬರ್ ಎರಡನೇ ವಾರದಲ್ಲಿ ಪೂರ್ಣಗೊಳ್ಳಲಿವೆ' ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ತಿಳಿಸಿದರು.

'ಸ್ಮಾರ್ಟ್ ಸಿಟಿಯಲ್ಲಿ ಮೊದಲು ಯೋಜಿಸಿದ್ದ ಕಾಮಗಾರಿಗಳಲ್ಲಿ ಬಹುತೇಕ ಶೇ 80ರಷ್ಟು ಮುಗಿದಿವೆ. ಯೋಜನೆಗೆ ಹೊಸದಾಗಿ ಸೇರಿಕೊಂಡ ಕಾಮಗಾರಿಗಳು ವಿಳಂಬವಾಗಿವೆ ಬಹು ಅಂತಸ್ತಿನ ಕಾರು ಪಾರ್ಕಿಂಗ್ ಯೋಜನೆ ಇನ್ನು ಆರಂಭವಾಗಬೇಕಷ್ಟೇ' ಎಂದರು.

₹1,000 ಸ್ಮಾರ್ಟ್ ಸಿಟಿ ಯೋಜನೆ ಒಟ್ಟು ವೆಚ್ಚ

(ಕೋಟಿಗಳಲ್ಲಿ)

ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ	ಬಿಡುಗಡೆ	ವೆಚ್ಚ
₹500	₹500	₹755	₹667



ಪ್ರಜಾವಾಣಿ ಗ್ರಾಫಿಕ್ಸ್

ರಸ್ತೆಗಳ ವೈಶಿಷ್ಟ್ಯವೇನು?

- ಪಾದಚಾರಿಗಳಿಗೆ ವಿಸ್ತಾರ ಪಥ ಮತ್ತು ಸೈಕಲ್ ಟ್ರ್ಯಾಕ್
- ಸಾರ್ವಜನಿಕ ಸಾರಿಗೆಗಾಗಿ 'ಬಸ್ ಬೇ'
- ಎರಡೂ ಭಾಗದಲ್ಲಿ ಗಿಡ–ಮರ ಬೆಳೆಸಲು ಅವಕಾಶ
- ಪಾರ್ಕಿಂಗ್ ವ್ಯವಸ್ಥೆ ಜೊತೆಗೆ ವಾಹನಗಳ ಸುಗಮ ಸಂಚಾರಕ್ಕೆ ವಿಸ್ತಾರವಾದ ಲೇನ್
- ಮಳೆ ನೀರಗಾಲುವೆ, ವಿದ್ಯುತ್, ಒಳಚರಂಡಿ, ನೀರು ಸರಬರಾಜು, ಒಎಫ್‌ಸಿ ಲೈನ್‌ಗಳಿಗೆ ಪ್ರತ್ಯೇಕ ಡಕ್ಟ್

ಜವಾಹರ್ ಲಾಲ್ ನೆಹರು ತಾರಾಲಯ ರಸ್ತೆ

'ಸ್ಮಾರ್ಟ್ ಸಿಟಿ' ಕಾಮಗಾರಿ ಪೂರ್ಣಗೊಳ್ಳದ ಅವೆನ್ಯೂ ರಸ್ತೆ

ಯಾವ ಯಾವ ರಸ್ತೆಗಳು?

ಕಮರ್ಷಿಯಲ್ ಸ್ಟ್ರೀಟ್, ಕಾಮರಾಜ್ ರಸ್ತೆ, ಹಲಸೂರು ರಸ್ತೆ, ಡಿಕನ್ಸನ್ ರಸ್ತೆ, ಇನ್‌ಫೆಂಟ್ರಿ ರಸ್ತೆ, ಸೆಂಟ್ರಲ್ ಸ್ಟ್ರೀಟ್ (ಎಂ.ಜಿ. ರಸ್ತೆಯಿಂದ ಶಿವಾಜಿನಗರ ಬಸ್ ನಿಲ್ದಾಣ ರಸ್ತೆ), ಬೋರಿಂಗ್ ಆಸ್ಪತ್ರೆ ರಸ್ತೆ, ಮಿಲ್ಲರ್ಸ್ ರಸ್ತೆ, ರಾಜಭವನ ರಸ್ತೆ, ಮೆಕ್‌ಗ್ರಾತ್ ರಸ್ತೆ, ಕನ್ವೆಂಟ್ ರಸ್ತೆ (ರಿಚ್ಮಂಡ್ ರಸ್ತೆಯಿಂದ ರೆಸಿಡೆನ್ಸಿ ರಸ್ತೆ), ಹೇಯ್ಸ್ ರಸ್ತೆ, ವುಡ್‌ಸ್ಟ್ರೀಟ್, ಕ್ಯಾಸಲ್ ಸ್ಟ್ರೀಟ್, ಟಾಟಾ ಲೇನ್, ಕಸ್ತೂರಬಾ ರಸ್ತೆ, ಕ್ವೀನ್ಸ್ ರಸ್ತೆ, ರಾಜಾರಾಂ ಮೋಹನ್‌ರಾಯ್ ರಸ್ತೆ, ಲ್ಯಾವೆಲ್ಲೆ ರಸ್ತೆ, ಬ್ರಿಗೇಡ್ ರಸ್ತೆ, ಸೇಂಟ್ ಜಾನ್ಸ್ ರಸ್ತೆ, ಸೇಂಟ್ ಜಾನ್ಸ್ ಚರ್ಚ್ ರಸ್ತೆ, ಮಿಲ್ಲರ್ಸ್ ರಸ್ತೆ ವಿಸ್ತರಣೆ (ಅಂಡರ್‌ಪಾಸ್), ಕಂಟೋನ್ಮೆಂಟ್ ರಸ್ತೆ, ಎಚ್.ಕೆ.ಪಿ. ರಸ್ತೆ, ಜುಮ್ಮಾ ಮಸೀದಿ ರಸ್ತೆ, ಚಾಂದಿನಿ ಚೌಕ್ ರಸ್ತೆ, ರೇಸ್ ಕೋರ್ಸ್ ರಸ್ತೆ, ಮಿಲ್ಲರ್ಸ್ ರಸ್ತೆಯಿಂದ ಅಲಿ ಅಸ್ಕರ್ ರಸ್ತೆ, ಪ್ಯಾಲೇಸ್ ರಸ್ತೆ, ಅವೆನ್ಯೂ ರಸ್ತೆ, ಜನರಲ್ ತಿಮ್ಮಯ್ಯ ರಸ್ತೆಯಿಂದ ಲ್ಯಾಂಗ್ ಫೋರ್ಡ್ ರಸ್ತೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

IN THE COURT OF THE II ADDL. SENIOR CIVIL JUDGE, AT BENGALURU RURAL
O.S. NO. 383/2022
Between:
Kanthamma & Ors. ...Plaintiffs
And:
Sri. Gangadhar, M/s. United Infrastructures & Anr. ...Defendants
To,
General Public
PUBLIC NOTICE
General Public are hereby informed that the Plaintiffs have filed a suit in O.S. No.383 of 2022 seeking for a relief of Declaration and Permanent Injunction against the Defendants being the owner of Survey No. 326/1 who have illegally encroached 12 Guntas in Sy.No.326/2 and 1.12 Guntas in Sy.No.326/3 and by misrepresentation obtained Khatha and Sanction plan in their favour and have developed the property in Sy.No.326/1 by encroaching upon Sy.No.326/2 and Sy.no.326/3, and have put up construction of Residential Apartments thereon in the name and style of "UNITED HIGHLANDS" developed and constructed by the Defendant No.2 i.e., M/s United Infrastructures Pvt. Ltd.
The General Public hereby take notice that in view of the above dispute in relation with the title of the property, the public are cautioned against purchasing an Apartment in the said "UNITED HIGHLANDS".
Schedule Property
All that piece and parcel of the property in bearing Sy No.326/1, Sy No.326/2 and Sy No.326/3 situated at Amane Bellandur Khane, Thubarahalli Village, Varthur Hobli, Bengaluru East, being developed by M/s United Infrastructures Pvt. Ltd., in the name and style of "UNITED HIGHLANDS".
HARANAHALLI LAW PARTNERS LLP
No.160, Level II & III, R.T. Nagar Main Road, MLA Layout, Bangalore-32

JOB OPPORTUNITIES

Graphic Designers
WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General
JOB'S REQUIREMENTS Salary: 18k Banking Fieldwork, Telecaller backend, Kalyanimotors, Sancity. Qualification: SSLC, PUC Degree: 7483096378

Hospital & Medical Jobs
WANTED RECEPTIONIST, ICU, Ward Nursing Staff Contact: 9900520357 Chaitanya Hospital No:80/117 P&T Colony R.T.Nagar Bangalore-32

Multiple Vacancy
REQUIRED TEAMLEADER, Telecaller, & FieldExecutive For BankLoan collection. Direct recruitment to company Contact:- 9620206756, 9620200756.

Part-Time Jobs
GOVERNMENT RECOGNISED Data Entry Typing Work From Home, Daily Payment, No Target, No Accuracy, With Govt Bond. For details M: 9742344447

EDUCATIONAL

Admission
DIRECT FINAL: LLB (Become Lawyer),B.Tech/ MBA/BCA/BBA/B.Sc/B.Com/ D.Pharm/B.Pharm/BAMS/ BYNS/Nursing/PU/SSLC. Last few seats. Asha Academy, Bangalore. Ph:9448460103/ 7093438248.

BUSINESS

Business Offers
Finance
NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7411265189

TIRED OF trading with different platforms. Experience completely new form of trading and secure guarantee income on your investment. We will give you best services and new way of trading. For more details visit- www.globalshippingandtrading.com Contact:9699500429/ 9324124538

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/9606701007

WANTED BUSINESS Partner Veg Hotel 1 Crore Investment Monthly Income 5 Lakhs Contact: 8892501007/ 9606701007

PERSONAL

Change of Name
I, SWATI KURI, permanent resident of C/o Nadeem Mulla Ward No. 21 Prashanth Nagar Mahaboob Colony, Sindhanur- 584128, now residing at No. 3 2nd cross, Wind Tunnel Road, Murugeshpalya, Bengaluru-560017 have changed my name from SWATI KURI to SANA TABASSUM vide affidavit dated 20.08.2022 before Notary K. Venkateshan, Bangalore.

I, VEENA HIREMATH, W/o Shivakumar Hiremath, residingat no.204, 56/13, Bhargav Dhama Apartment, T P Venugopal Layout Ganganagar, Bangalore-560032 have changed my name to VEENA SHIVAKUMAR HIREMATH vide affidavit dated:19-08-2022 before Notary, Y.R.Chandrasekar Bangalore.

Book Your Classifieds Ads
Online Log in to dhclassifieds.com
DH ಪ್ರಜಾವಾಣಿ
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಸಿಎಂಆರ್ ವಿಶ್ವವಿದ್ಯಾಲಯ ಮತ್ತು ರ್‍ಯಾವರಣ್ ಗತಿವಿಧಿ ಅಂಡ್ ರೈನ್‌ಮ್ಯಾಟರ್ ಫೌಂಡೇಷನ್ ಸಹಯೋಗದಲ್ಲಿ 'ಶೃಂಗಸಭೆ–2022'ಯನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಉದ್ಘಾಟಿಸಿದರು

ಪರಿಸರ ಸ್ನೇಹಿ ಸ್ಟಾರ್ಟ್‌ಅಪ್‌ಗೆ ಪ್ರೋತ್ಸಾಹ: ರಾಜ್ಯಪಾಲ ಥಾವರ್

ಬೆಂಗಳೂರು: 'ದೇಶ ಬೃಹತ್ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಕೇಂದ್ರ ಸರ್ಕಾರ ಪರಿಸರ ಸ್ನೇಹಿ ಚಿಂತನೆಗಳಿಗೆ ಮೇಕ್ ಇಂಡಿಯಾ ಉಪಕ್ರಮದ ಮೂಲಕ ಪ್ರೋತ್ಸಾಹಿಸುತ್ತಿದೆ' ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಹೇಳಿದರು.

ಸಿಎಂಆರ್ ವಿಶ್ವವಿದ್ಯಾಲಯ ಮತ್ತು ರ್‍ಯಾವರಣ್ ಗತಿವಿಧಿ ಅಂಡ್ ರೈನ್‌ಮ್ಯಾಟರ್ ಫೌಂಡೇಷನ್ ಸಹಯೋಗದಲ್ಲಿ 'ಇವೈಎಸ್‌ಎಸ್–ಎಕೊ ಯೂತ್ ಸ್ಟಾರ್ಟ್‌ಅಪ್ ಸ್ಪರ್ಧೆ ಮತ್ತು ಶೃಂಗಸಭೆ–2022'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಹವಾಮಾನ ವೈಪರೀತ್ಯದಂತಹ ತೊಂದರೆಗಳನ್ನು ಪರಿಹರಿಸಲು ನೆರವಾಗುವ ಪರಿಸರ ಸ್ನೇಹಿ ಸ್ಟಾರ್ಟ್‌ಅಪ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದುವುದು ಇಂದಿನ ಅಗತ್ಯವಾಗಿದೆ' ಎಂದು ತಿಳಿಸಿದರು.

ಯುನೆಸ್ಕೊ ಎಂಜಿಐಇಪಿನ ಜಾಗತಿಕ ದಯಾ ರಾಯಭಾರಿ ರಿಕಿ ಕೇಜ್ ಮಾತನಾಡಿ, 'ಹವಾಮಾನ ಬದಲಾವಣೆ, ಪ್ರಭೇದಗಳ ನಶಿಸುವಿಕೆ, ಅರಣ್ಯ ನಾಶ, ಪ್ಲಾಸ್ಟಿಕ್, ವಾಯು ಮಾಲಿನ್ಯ ನಿಯಂತ್ರಣಕ್ಕೆ ಸ್ಟಾರ್ಟ್‌ಅಪ್‌ಗಳ ಮೂಲಕ ಯುವಜನತೆ ಇದರ ನೇತೃತ್ವ ವಹಿಸಿರುವುದು ಶ್ಲಾಘನೀಯ' ಎಂದರು.

ಸಿಎಂಆರ್ ಸಂಸ್ಥೆಗಳ ಸಮೂಹದ ಅಧ್ಯಕ್ಷ ಕೆ.ಸಿ ರಾಮಮೂರ್ತಿ ಮಾತನಾಡಿ, 'ಪರಿಸರಕ್ಕೆ ಸಂಬಂಧಿಸಿದಂತೆ ಸುಸ್ಥಿರ ಭವಿಷ್ಯಕ್ಕಾಗಿ ದೇಶದಲ್ಲಿ ಪರಿಸರ ವ್ಯವಸ್ಥೆಯೊಂದನ್ನು ಸೃಷ್ಟಿಸುವುದು ಈ ಶೃಂಗಸಭೆಯ ಉದ್ದೇಶ' ಎಂದರು.

ಐಡಿಯಾ ವರ್ಗದಲ್ಲಿ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ಪ್ರಥಮ ಪ್ರಶಸ್ತಿ ಪಡೆದುಕೊಂಡಿತು.

ದ್ವಿತೀಯ ಸ್ಥಾನವನ್ನು ಎಐ-ಜೆನ್‌ಝೆಡ್ ಪುದುಚೇರಿ ಮತ್ತು ಕೊಂಗುನಾಡು ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ತಿರುಚಿನಾಪಲ್ಲಿಗೆ ನೀಡಲಾಯಿತು.

ಪಾಕ್: ಇಮ್ರಾನ್ ಖಾನ್ ವಿರುದ್ಧ ಎಟಿಎ ಪ್ರಕರಣ

ಇಸ್ಲಾಮಾಬಾದ್ (ಪಿಟಿಐ): ಇಸ್ಲಾಮಾಬಾದ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಪೊಲೀಸ್, ನ್ಯಾಯಾಂಗ ಮತ್ತು ಇತರ ಸಂಸ್ಥೆಗಳಿಗೆ ಬೆದರಿಕೆ ಒಡ್ಡಿದ ಆರೋಪದ ಮೇರೆಗೆ ಅವರ ವಿರುದ್ಧ ಭಾನುವಾರ ಭಯೋತ್ಪಾದನಾ ನಿಗ್ರಹ ಕಾಯ್ದೆಯಡಿ (ಎಟಿಎ) ಪ್ರಕರಣ ದಾಖಲಾಗಿದೆ.

ಇಸ್ಲಾಮಾಬಾದ್‌ನ ಮರ್ಗಲ್ಲಾ ಪೊಲೀಸ್ ಠಾಣೆಯಲ್ಲಿ ಶನಿವಾರ ರಾತ್ರಿ ಎಫ್‌ಐಆರ್ ದಾಖಲಾಗಿದ್ದು, 'ಭಾಷಣದಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳು, ಮಹಿಳಾ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಿಗೆ ಬೆದರಿಕೆ ಒಡ್ಡಿದ್ದಾರೆ' ಎಂದು ಉಲ್ಲೇಖಿಸಲಾಗಿದೆ.

ಇಮ್ರಾನ್ ಪ್ರಚೋದನಕಾರಿ ಭಾಷಣ ಮಾಡಿರುವ ಬಗ್ಗೆ ಪ್ರಕರಣ ದಾಖಲಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

(ಕರ್ನಾಟಕ ಸರ್ಕಾರ)
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ದೂರವಾಣಿ ಸಂಖ್ಯೆ:– 08152–200049 ಇಮೇಲ್: eemidklr@rediffmail.com, eemigwddkolar@gmail.com
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/1584/2022–23/ದಿನಾಂಕ:16–08–2022
ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 02/2022–23/ದಿನಾಂಕ:25–05–2022
ಉಲ್ಲೇಖ: 1) ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :02/2022–23/962/ ದಿ: 25–05–2022.
2) ಅಲ್ಪಾವಧಿ ಟೆಂಡರ್ ತಿದ್ದುಪಡಿ ಹಾಗೂ ಮುಂದೂಡಿಕೆ ಪ್ರಕಟಣೆ ಸಂಖ್ಯೆ:02/22–23/1175/ದಿ:14–06–22.
3) ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ:02/2022–23/1507/ದಿ:02–08–22.
ಮೇಲಿನ ಉಲ್ಲೇಖ (1) ರಂತೆ ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ 07 ಕಾಮಗಾರಿಗಳಿಗೆ ಕೆ.ಡಬ್ಲ್ಯೂ–2,3&4 ಟೆಂಡರ್ ಡಾಕ್ಯುಮೆಂಟನ್ನು ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ 28ರನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿರುವ ಕ್ರಮ ಸಂಖ್ಯೆ: 05, 06 ರ ಕಾಮಗಾರಿಗಳನ್ನು ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ ಮೂಲಕ www.eproc.karnataka.gov.in ದಿನಾಂಕ:22/08/2022ರ ಸಂಜೆ 04:00 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯ ದಿನಾಂಕ:25/08/2022 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕೋಲಾರ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿ:03/09/2022ರ ಸಂಜೆ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿ:05/09/2022ರ ಸಂಜೆ 04:30 ಗಂಟೆಯ ನಂತರ. ಹಾಗೂ ಕ್ರಮ ಸಂಖ್ಯೆ:07ರ ಕಾಮಗಾರಿಯನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿರುತ್ತದೆ. ಉಳಿದಂತೆ ಸದರಿ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಮೇಲಿನ ವಿವರಗಳನ್ನು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

ಕುಂದುಕೊರತೆ ಆಲಿಸಲು ಸಚಿವ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಮತ್ತಿಕೆರೆ ಬಡಾವಣೆಯಲ್ಲಿ ಭಾನುವಾರ ಪಾದಯಾತ್ರೆ ನಡೆಸಿದ ಸ್ಥಳೀಯ ಶಾಸಕರೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದರು.

ಮತ್ತಿಕೆರೆ ಬಡಾವಣೆಯ ಮೂರನೇ ಮುಖ್ಯ ರಸ್ತೆಯ ಸರ್ಕಾರಿ ಶಾಲೆಯ ಸುತ್ತಮುತ್ತಲ ಪ್ರದೇಶದಲ್ಲಿ ಸಂಚರಿಸಿದ ಸಚಿವರು, ಜನರ ಬಳಿ ಸಮಸ್ಯೆಗಳ ಕುರಿತು ವಿಚಾರಿಸಿದರು. ಸಚಿವರೇ ಖುದ್ದಾಗಿ ಸಮಸ್ಯೆ ಆಲಿಸಲು ಬಂದಿದ್ದನ್ನು ಕಂಡು ಖುಷಿಯಾದ ಸಾರ್ವಜನಿಕರು, ಆ ಪ್ರದೇಶದಲ್ಲಿನ ಪರಿಸ್ಥಿತಿ ಕುರಿತು ವಿವರಿಸಿದರು.

ವಾಹನ ನಿಲುಗಡೆ, ಬೀದಿದೀಪಗಳ ನಿರ್ವಹಣೆ, ಘನ ತ್ಯಾಜ್ಯ ವಿಲೇವಾರಿ, ಕುಡಿಯುವ ನೀರು ಪೂರೈಕೆಯಲ್ಲಿ ಸಮಸ್ಯೆಗಳಿರುವುದನ್ನು ಜನರು ಮನವರಿಕೆ ಮಾಡಿಕೊಟ್ಟರು.

ಈ ಎಲ್ಲ ಸಮಸ್ಯೆಗಳನ್ನೂ ತ್ವರಿತವಾಗಿ ಪರಿಹರಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಮಕ್ಕಳೊಂದಿಗೆ ಕುಶಲೋಪರಿ: ಪಾದಯಾತ್ರೆಯ ಸಂದರ್ಭದಲ್ಲಿ ಎದುರಿಗೆ ಸಿಕ್ಕ ಮಕ್ಕಳೊಂದಿಗೆ ಕುಶಲೋಪರಿ ನಡೆಸಿದ ಸಚಿವರು, ವಿದ್ಯಾಭ್ಯಾಸ, ಶೈಕ್ಷಣಿಕ ಪ್ರಗತಿ, ಶಾಲೆಯಲ್ಲಿನ ಬಿಸಿಯೂಟದ ವ್ಯವಸ್ಥೆ ಸೇರಿದಂತೆ ಹಲವು ವಿಷಯಗಳ ಕುರಿತು ಮಾಹಿತಿ ಪಡೆದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ತಾವು ಪ್ರತಿನಿಧಿಸುವ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮತ್ತಿಕೆರೆ ಬಡಾವಣೆಯಲ್ಲಿ ಭಾನುವಾರ ಪಾದಯಾತ್ರೆ ನಡೆಸಿ ಸಾರ್ವಜನಿಕರ ಕುಂದುಕೊರತೆ ಆಲಿಸಿದರು

'ಪಾದಚಾರಿ ಮಾರ್ಗ: ಗುಂಡಿ ಮುಚ್ಚಿ'

ಫ್ರೀಡಂ ಪಾರ್ಕ್ ಪಕ್ಕದಲ್ಲಿರುವ ಪಾದಚಾರಿ ಮಾರ್ಗದಲ್ಲಿ ಅಲ್ಲಲ್ಲಿ ಗುಂಡಿಗಳು ಬಿದ್ದಿವೆ. ಮಕ್ಕಳು, ವೃದ್ಧರು ಸ್ವಲ್ಪ ಯಾಮಾರಿದರೂ ಬೀಳುವ ಸಾಧ್ಯತೆ ಇದೆ. ಹಗಲಿನಲ್ಲೇ ಅಪಾಯಕಾರಿ ಎನಿಸುವ ಈ ಗುಂಡಿಗಳು ರಾತ್ರಿ ವೇಳೆಯಂತೂ ಅಪಘಾತಕ್ಕೆ ಆಹ್ವಾನಿಸುವಂತಿವೆ. ಗುಂಡಿ ಬಿದ್ದು ಹಲವು ತಿಂಗಳು ಕಳೆದರೂ ಈ ಬಗ್ಗೆ ಯಾರೂ ಗಮನಿಸುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಬೇಕಿದೆ. ಆ ಮೂಲಕ ಜೀವಹಾನಿಯಾಗುವುದನ್ನು ತಡೆಯಬೇಕಿದೆ.

ಸ್ನೇಹಾ ರಾಜೀವ್, ಪಾರ್ವತಿ, ಪಾದಚಾರಿಗಳು

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಬೀದಿ ದೀಪ ಅಳವಡಿಸಿ

ಸ್ಮಾರ್ಟ್ ಸಿಟಿಯ ಹೃದಯ ಭಾಗದಲ್ಲಿರುವ ಕೆಂಪೇಗೌಡ ರಸ್ತೆಯಲ್ಲಿ ಎರಡು ಮೂರು ತಿಂಗಳಿಂದ ಉರಿಯದ ಬೀದಿ ದೀಪಗಳು. ನಿತ್ಯ ನೂರಾರು ಜನ ಇದೇ ದಾರಿಯಲ್ಲಿ ಓಡಾಡುತ್ತಿದ್ದು, ಭಯದಲ್ಲೇ ಸಂಚರಿಸಬೇಕಾಗಿದೆ. ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸುವುದಾಗಿ ಹಳೆಯ ವಿದ್ಯುತ್ ದೀಪದ ಕಂಬಗಳನ್ನು ತೆರವುಗೊಳಿಸಿ ಕಗ್ಗತ್ತಲ ಗವಿಯಾಗಿ ಮಾರ್ಪಡಿಸಿದ್ದಾರೆ. ಇದರಿಂದ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದು, ಕಳ್ಳಕಾಕರ ಹಾವಳಿ ಹೆಚ್ಚಾಗಿದೆ. ಆದ್ದರಿಂದ ಈ ಭಾಗದಲ್ಲಿ ಬೀದಿ ದೀಪಗಳನ್ನು ಅಳವಡಿಸಬೇಕು ಎಂದು ಒತ್ತಾಯಿಸಿದರು.

ಶಿವಪ್ರಸಾದ್, ಸ್ಥಳೀಯ ನಿವಾಸ

'ರಸ್ತೆ ಗುಂಡಿಗಳನ್ನು ಮುಚ್ಚಿ'

ಬಿಬಿಎಂಪಿ ಬಸವನಪುರ ವಾರ್ಡ್ ವ್ಯಾಪ್ತಿಯ ಮೇಡಹಳ್ಳಿಯಿಂದ ಕುರುಡು ಸೋನೆನಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಗುಂಡಿಗಳಿಂದ ಕೂಡಿದೆ. ಬೆಂಗಳೂರು ಜಲ ಮಂಡಳಿ ನಡೆಸಿರುವ ಅವೈಜ್ಞಾನಿಕ ಕಾಮಗಾರಿಯಿಂದ ಪ್ರತಿನಿತ್ಯ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ. ಕಾಮಗಾರಿ ಮುಗಿದರೂ ಅಗೆದಿರುವ ರಸ್ತೆ ದುರಸ್ತಿಗೊಳಿಸಿಲ್ಲ. ಈ ಭಾಗದಲ್ಲಿ ಹೆಚ್ಚು ಶಾಲಾ–ಕಾಲೇಜುಗಳಿದ್ದು, ಇಲ್ಲಿನ ವಿದ್ಯಾರ್ಥಿಗಳ ನರಕಯಾತನೆ ಅನುಭವಿಸುತ್ತಿದ್ದಾರೆ. ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಕಿರಣ್ ಕುಮಾರ್ ಜೆ , ಮೇಡಹಳ್ಳಿ (ಕೆ.ಆರ್. ಪುರ)



ರಸ್ತೆ ಸರಿಪಡಿಸಿ

ಬಿನ್ನಿಪೇಟೆ ಇಟಿಎ ಮಾಲ್ ಹತ್ತಿರದ ರಸ್ತೆ ಸಂಪೂರ್ಣ ಹಾಳಾಗಿದ್ದು, ವಾಹನ ಓಡಾಟ ಕಷ್ಟವಾಗಿದೆ. ಇನ್ನು ರಸ್ತೆಯಲ್ಲಿ ಅಲ್ಲಲ್ಲಿ ಭಾರಿ ಗುಂಡಿಗಳು ಇದ್ದು, ಮಳೆ ಬಂದು ನೀರು ನಿಂತರೆ ದ್ವಿಚಕ್ರ ವಾಹನಗಳಿಗೆ ಅಪಘಾತಗಳಾಗುವ ಭಯವಿರುತ್ತದೆ. ಈ ಕುರಿತು ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಈ ರಸ್ತೆಯನ್ನು ಶೀಘ್ರ ಡಾಂಬರೀಕರಣಗೊಳಿಸಬೇಕು.

ಶ್ರೀನಿವಾಸ್, ಸ್ಥಳೀಯ ನಿವಾಸಿ

ಕೇಂದ್ರ ಯೋಜನೆಗಳ ಪುಸ್ತಕ ಬಿಡುಗಡೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕವು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ಸಮಗ್ರ ಮಾಹಿತಿಯುಳ್ಳ ಪುಸ್ತಕಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹೊರತಂದಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಭಾನುವಾರ ಈ ಪುಸ್ತಕಗಳನ್ನು ಬಿಡುಗಡೆ ಮಾಡಿದರು.

'ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ, ಉಜ್ವಲಾ, ಉಜಾಲಾ, ಮುದ್ರಾ, ಸ್ಕಿಲ್ ಇಂಡಿಯಾ, ಜನೌಷಧಿ, ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್, ಸ್ವಚ್ಛ ಭಾರತ್, ಮೇಕ್ ಇನ್ ಇಂಡಿಯಾ ಸೇರಿದಂತೆ ಮೋದಿ ನೇತೃತ್ವದ ಸರ್ಕಾರ ಜಾರಿಗೊಳಿಸಿರುವ ನೂರಾರು ಯೋಜನೆಗಳ ಮಾಹಿತಿ ಪುಸ್ತಕದಲ್ಲಿದೆ. ಯೋಜನೆಗಳ ಪ್ರಯೋಜನ ಪಡೆಯುವ ವಿಧಾನ, ಅರ್ಹತಾ ಮಾನದಂಡಗಳು, ಅರ್ಜಿ ನಮೂನೆಗಳ ಮಾದರಿಗಳನ್ನೂ ಒದಗಿಸಲಾಗಿದೆ' ಎಂದು ಕಟೀಲ್ ತಿಳಿಸಿದರು. ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ನೆ.ಲ.ನರೇಂದ್ರಬಾಬು, ಹಾಸನ ಜಿಲ್ಲಾ ಘಟಕದ ಅಧ್ಯಕ್ಷ ಹುಲ್ಲಳ್ಳಿ ಸುರೇಶ್, ಸಕಲೇಶಪುರದ ಮುಖಂಡರಾದ ನಾರ್ವೆ ಸೋಮಶೇಖರ್, ಲಲ್ಲೇಶ್ ರೆಡ್ಡಿ ಉಪಸ್ಥಿತರಿದ್ದರು.

ರಂಗಶಂಕರ: ಸಂಗೀತ–ನಾಟಕ ಪ್ರದರ್ಶನ

ಬೆಂಗಳೂರು: ಭೂಮಿಜಾ ಟ್ರಸ್ಟ್ ಇಲ್ಲಿನ ರಂಗಶಂಕರದಲ್ಲಿ ಇದೇ 23 ಮತ್ತು 24ರ ಸಂಜೆ 7.30ಕ್ಕೆ 'ಆರೋಹ' ಸಂಗೀತ–ನಾಟಕ ಪ್ರದರ್ಶನ ಆಯೋಜಿಸಿದೆ.

ಮೈಸೂರು ಮಂಜುನಾಥ್ ಅವರ ಸಂಗೀತದಲ್ಲಿ ಈ ನಾಟಕ ಮೂಡಿಬರಲಿದೆ. ಎಸ್. ಸುರೇಂದ್ರನಾಥ್ ಅವರು ನಾಟಕ ನಿರ್ದೇಶಿಸಿದ್ದಾರೆ. ಕಲಾವಿದ ಶ್ರೀನಿವಾಸ ಪ್ರಭು ಪ್ರಧಾನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. 90 ನಿಮಿಷಗಳ ಈ ಸಂಗೀತ ನಾಟಕದಲ್ಲಿ 20 ಯುವ ಕಲಾವಿದರು ಸಂಗೀತ ಮೇಳ ನಡೆಸಲಿದ್ದಾರೆ.

ವಯೋಲಿನ್ ಜತೆಗೆ ವಿವಿಧ ವಾದ್ಯಗಳ ವಾದನವೂ ಇರಲಿದೆ ಎಂದು ಆಯೋಜಕರು ತಿಳಿಸಿದ್ದಾರೆ. ನಾಟಕ ವೀಕ್ಷಣೆಗೆ ₹ 300 ಪ್ರವೇಶ ಶುಲ್ಕ ವಿಧಿಸಲಾಗಿದ್ದು, ಟಿಕೆಟ್‌ಗಳು ಬುಕ್‌ಮೈ ಶೋದಲ್ಲಿ ಲಭ್ಯವಿದೆ.

ಸಾಹಿತಿ ಹಂ.ಪ. ನಾಗರಾಜಯ್ಯ ಕಳವಳ • ನಂದಿನಿ ಜಯರಾಮ್‌ಗೆ 'ಯಶೋಧರ ದಾಸಪ್ಪ ಪ್ರಶಸ್ತಿ' ಪ್ರದಾನ

'ರಾಸಾಯನಿಕಯುಕ್ತ ಆಹಾರದಿಂದ ಅನಾರೋಗ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚಿನ ವರ್ಷಗಳಲ್ಲಿ ಅಧಿಕ ಇಳುವರಿ ಪಡೆಯಲೆಂದು ಕೃಷಿ ಭೂಮಿಗೆ ರಾಸಾಯನಿಕಗಳನ್ನು ಹಾಕಲಾಗುತ್ತಿದೆ. ಇದರಿಂದ ಮಣ್ಣಿನ ಹಾಗೂ ಆ ಭೂಮಿಯಲ್ಲಿ ಬೆಳೆದ ಆಹಾರ ಧಾನ್ಯ ಸೇವಿಸಿದವರ ಆರೋಗ್ಯ ಕೆಡುತ್ತಿದೆ' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಕಳವಳ ವ್ಯಕ್ತಪಡಿಸಿದರು.

ಕನ್ನಡ ಜನಶಕ್ತಿ ಕೇಂದ್ರ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ರೈತ ಹೋರಾಟಗಾರ್ತಿ ನಂದಿನಿ ಜಯರಾಮ್ ಅವರಿಗೆ 'ಯಶೋಧರ ದಾಸಪ್ಪ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು. ಈ ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ.

'ನಮ್ಮ ಪೂರ್ವಜರು ಭೂಮಿಯನ್ನು ದೇವರು ಮತ್ತು ತಾಯಿ ಸ್ವರೂಪಕ್ಕೆ ಹೋಲಿಕೆ ಮಾಡುತ್ತಿದ್ದರು.

ನಂದಿನಿ ಜಯರಾಮ್ ಅವರಿಗೆ 'ಯಶೋಧರ ದಾಸಪ್ಪ ಪ್ರಶಸ್ತಿ'ಯನ್ನು ಹಂ.ಪ. ನಾಗರಾಜಯ್ಯ ಪ್ರದಾನ ಮಾಡಿದರು. (ಎಡದಿಂದ) ಸಿ.ಕೆ. ರಾಮೇಗೌಡ, ವಿಜಯಾ, ಗಾಯತ್ರಿ ರಾಮಣ್ಣ, ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶ್ ಗೌಡ ಮತ್ತು ಕರ್ನಾಟಕ ರಾಜ್ಯ ಕೃಷಿಕ ಪರಿಷತ್ತಿನ ಕೋಶಾಧಿಕಾರಿ ಚಿಕ್ಕಕೋಮಾರಿ ಗೌಡ ಇದ್ದಾರೆ –ಪ್ರಜಾವಾಣಿ ಚಿತ್ರ

ಇದರಿಂದಾಗಿಯೇ ಭೂಮಿಯ ಸತ್ವ ಹಾಳು ಮಾಡುವಂತಹ ಯಾವೊಂದು ಕಾರ್ಯವನ್ನೂ ಮಾಡದೇ, ಸಾಂಪ್ರದಾಯಿಕ ಕೃಷಿ ಪದ್ಧತಿಯ ಮೂಲಕ ಆಹಾರ ಬೆಳೆಗಳನ್ನು ಬೆಳೆಯುತ್ತಿದ್ದರು. ಆದರೆ, ಇತ್ತೀಚೆಗೆ ಕೃಷಿ ಭೂಮಿಗೆ ರಾಸಾಯನಿಕಯುಕ್ತ ಗೊಬ್ಬರ, ಕೀಟನಾಶಕಗಳನ್ನು ಸಿಂಪಡಿಸಲಾಗುತ್ತಿದೆ. ಇದರಿಂದ ಭೂಮಿಯ ಸತ್ವ ಹಾಳಾಗುತ್ತಿದೆ. ಕಲಬೆರಕೆಯುಕ್ತ ಆಹಾರಗಳ ಸೇವನೆಯಿಂದ ಆರೋಗ್ಯವೂ ಕೆಡುತ್ತಿದೆ' ಎಂದು ಹೇಳಿದರು.

ಲೇಖಕಿ ವಿಜಯಾ ಮಾತನಾಡಿ, 'ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಪರಸ್ಪರ ದ್ವೇಷ ಬಿತ್ತುವ ಕೆಲಸ ಆಗುತ್ತಿದೆ. ಇಂತಹ ಹೊತ್ತಿನಲ್ಲಿ ಮಕ್ಕಳಿಗೆ ನಾವು ಏನು ಹೇಳಿ ಕೊಡುತ್ತೇವೆ ಎನ್ನುವುದು ಮುಖ್ಯ. ಯಶೋಧರ ದಾಸಪ್ಪ ಅವರು ತುಳಿತಕ್ಕೆ ಒಳಗಾದವರ ಪರ ನಿಂತಿದ್ದರು. ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದರು. ಅವರ ಪ್ರತಿಮೆ ನಿರ್ಮಿಸುವ ಕೆಲಸ ಆಗಬೇಕು' ಎಂದರು.

ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, 'ಪ್ರಶಸ್ತಿ ನೀಡುವುದು ದಂಧೆಯಾಗುತ್ತಿದೆ. ಕಳ್ಳರು, ಖದೀಮರಿಗೆ ಕುವೆಂಪು ಸೇರಿ ನಾಡಿನ ಮಹಾನ್ ಸಾಹಿತಿಗಳ ಹೆಸರಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ಇದು ವ್ಯವಸ್ಥೆಯ ವಿಪರ್ಯಾಸ' ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಗಾಯತ್ರಿ ರಾಮಣ್ಣ ಅವರು ರಚಿಸಿದ 'ಯಶೋಧರ ದಾಸಪ್ಪ' ಕೃತಿ ಬಿಡುಗಡೆ ಮಾಡಲಾಯಿತು.

ರೈತರ ಶ್ರಮಕ್ಕಿಲ್ಲ ಬೆಲೆ: ನಂದಿನಿ ಜಯರಾಮ್

'ರೈತರ ಆತ್ಮಹತ್ಯೆ ನಿರಂತರವಾಗಿ ನಡೆಯುತ್ತಿದ್ದರೂ ನಮ್ಮನ್ನು ಆಳುವ ಪ್ರಭುತ್ವ ಮತ್ತು ವ್ಯವಸ್ಥೆ ಜಾಣ ಮೌನಕ್ಕೆ ಶರಣಾಗತವಾಗಿದೆ. ವ್ಯವಸ್ಥೆ ವಿರುದ್ಧ ಧ್ವನಿ ಎತ್ತುತ್ತಿದ್ದ ರೈತ ಸಂಘಟನೆಗಳು ವಿಘಟನೆ ಆಗುತ್ತಿವೆ. ಸೂಕ್ತ ಬೆಲೆ, ಮಾರುಕಟ್ಟೆ ಸಿಗದಿದ್ದರಿಂದ ರೈತರು ಕೃಷಿಯಿಂದ ವಿಮುಖರಾಗಿ, ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ' ಎಂದು ಪ್ರಶಸ್ತಿ ಪುರಸ್ಕೃತೆ ನಂದಿನಿ ಜಯರಾಮ್ ಬೇಸರ ವ್ಯಕ್ತಪಡಿಸಿದರು.

'ಸರ್ಕಾರವೇ ಕೃಷಿ ಬೆಳೆಯ ಖರೀದಿಗೆ ಮಿತಿ ವಿಧಿಸುತ್ತಿದೆ. ಅಧಿಕ ಹಣ ನೀಡಿ ವಿದೇಶಗಳಿಂದ ವಿವಿಧ ಬೆಳೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಬಂಡವಾಳದಾರರು ಕೃಷಿ ಭೂಮಿಯನ್ನು ಖರೀದಿಸಿ, ಆಹಾರವನ್ನೂ ಲಾಭದ ಸರಕಾಗಿ ನೋಡುತ್ತಿದ್ದಾರೆ' ಎಂದರು.

ಪಾಕಿಸ್ತಾನ 'ಕೋಗಿಲೆ' ನಯ್ಯಾರಾ ನೂರ್ ನಿಧನ

ಕರಾಚಿ (ಪಿಟಿಐ): ಪಾಕಿಸ್ತಾನದ ಖ್ಯಾತ ಗಾಯಕಿ ನಯ್ಯಾರಾ ನೂರ್ (71) ಅವರು ಭಾನುವಾರ ನಿಧನರಾಗಿದ್ದಾರೆ. ಕೆಲ ಸಮಯದಿಂದ ಅನಾರೋಗ್ಯಕ್ಕೆ ಒಳಗಾಗಿದ್ದ ಅವರು ಕರಾಚಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

1950ರಲ್ಲಿ ಅಸ್ಸಾಂನ ಗುವಾಹಟಿಯಲ್ಲಿ ಜನಿಸಿದ್ದ ನೂರ್, ಭಾರತ–ಪಾಕಿಸ್ತಾನ ಎರಡೂ ದೇಶಗಳಲ್ಲಿ ಅಭಿಮಾನಿಗಳನ್ನು ಹೊಂದಿದ್ದರು. 1958ರಲ್ಲಿ ನೂರ್ ಕುಟುಂಬವು ಲಾಹೋರ್‌ಗೆ ವಲಸೆ ಹೋಗಿತ್ತು.

'ಸಂಸ್ಕೃತಿಯ ರಕ್ಷಕ ಚಂದ್ರಕಾಂತ ಪೋಕಳೆ'

ಬೆಂಗಳೂರು: ಸಾಹಿತಿ ಚಂದ್ರಕಾಂತ ಪೋಕಳೆ ಅವರು ಇಡೀ ಬದುಕನ್ನೇ ಮರಾಠಿ ಸಾಹಿತ್ಯದ ಅನುವಾದಕ್ಕೆ ಮೀಸಲು ಮಾಡಿ ನಿರಂತರವಾಗಿ ಕೆಲಸ ಮಾಡಿಕೊಂಡು ಬಂದಿರುವಂತಹ ವ್ಯಕ್ತಿ ಎಂದು ಸಾಹಿತಿ ಎಚ್.ಎಸ್. ವೆಂಕಟೇಶಮೂರ್ತಿ ಹೇಳಿದರು

ಅಂಕಿತ ಪುಸ್ತಕ ಮತ್ತು ಬುಕ್ ಬ್ರಹ್ಮದ ಆಶ್ರಯದಲ್ಲಿ ವ್ಯಾಸರಾವ್ ನಿಂಜೂರ್ ಅವರ 'ಎಳೆದ ತೇರು' ಆತ್ಮಕಥನ ಮತ್ತು 'ಸಮಗ್ರ ಕಥೆಗಳು' ಹಾಗೂ ಚಂದ್ರಕಾಂತ ಪೋಕಳೆ ಅವರು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ 'ಸೇತು' ಕಾದಂಬರಿ ಭಾನುವಾರ ಬಿಡುಗಡೆ ಮಾಡಿ, 'ರಾಜಕೀಯ ಕಾರಣಕ್ಕೆ ಕರ್ನಾಟಕ ಹಾಗೂ ಮಹಾರಾಷ್ಟ್ರ ನಡುವೆ ಹಗ್ಗ-ಜಗ್ಗಾಟಗಳು ನಡೆಯುತ್ತಿವೆ. ಆದರೆ ಚಂದ್ರಕಾಂತ ಮರಾಠಿ ಕೃತಿಗಳನ್ನು ಕನ್ನಡಕ್ಕೆ ತರುವ ಮೂಲಕ ಒಂದು ಸೇತುವೆ ನಿರ್ಮಾಣ ಮಾಡುತ್ತಿದ್ದಾರೆ. ಇಂತಹವರು ನಿಜವಾಗಿಯೂ ಸಂಸ್ಕೃತಿಯ ರಕ್ಷಕರು. ಅವರು 100ಕ್ಕೂ ಅಧಿಕ ಮರಾಠಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ' ಎಂದರು.

ಕಾದಂಬರಿಕಾರ ಎಂ.ಆರ್.ದತ್ತಾತ್ರಿ ಮಾತನಾಡಿದರು. ಸಾಹಿತಿಗಳಾದ ಎಲ್.ಜಿ. ಮೀರಾ, ಶಶಿಧರ ಹಾಲಾಡಿ, ವ್ಯಾಸರಾವ್ ನಿಂಜೂರ್, ಚಂದ್ರಕಾಂತ ಪೋಕಳೆ ಇದ್ದರು.

'ಅದಾನಿ, ಅಂಬಾನಿ ಮೆರೆಸುವುದು ನಾಚಿಕೆಗೇಡು'

ಶಾಂತವೇರಿ ಗೋಪಾಲಗೌಡರ ಜನ್ಮ ಶತಮಾನೋತ್ಸವದಲ್ಲಿ ಕಾಗೋಡು ತಿಮ್ಮಪ್ಪ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾತ್ಮ ಗಾಂಧೀಜಿಯ ಹೋರಾಟದ ನೆಲವಾದ ಈ ನಾಡಿನಲ್ಲಿ ಅದಾನಿ, ಅಂಬಾನಿಯಂಥವರನ್ನು ಹೊತ್ತು ಮೆರೆಸುವುದು ನಾಚಿಕೆಗೇಡಿನ ಸಂಗತಿ' ಎಂದು ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಹೇಳಿದರು.

ಸಮಾಜವಾದಿ ವೇದಿಕೆ ವತಿಯಿಂದ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಶಾಂತವೇರಿ ಗೋಪಾಲಗೌಡ ಹಾಗೂ ಮಧುಲಿಮಯೆ ಅವರ ಜನ್ಮ ಶತಮಾನೋತ್ಸವ ಮತ್ತು ಶಾಹು ಮಹಾರಾಜ್ ಒಂದು ನೆನಪು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಅದಾನಿ, ಅಂಬಾನಿ ಅವರಂಥಹ ಕಾರ್ಪೊರೇಟ್ ಧಣಿಗಳನ್ನು ಎಲ್ಲಿ ಕೂರಿಸಬೇಕು ಎಂಬುದನ್ನೂ ಅರ್ಥ ಮಾಡಿಕೊಳ್ಳಲಾಗದ ಸ್ಥಿತಿಯಲ್ಲಿ ನಮ್ಮ ದೇಶ ಇದೆ. ಸಮಾಜವಾದಿ ಸಿದ್ಧಾಂತ ಮತ್ತು ಆಲೋಚನೆಗಳು ಮೂಲೆಗೆ ಸರಿದಿರುವುದರಿಂದ ಈ ರೀತಿ ಆಗುತ್ತಿದೆ. ದೇಶ ಮತ್ತು ಸಮಾಜ ಉಳಿದು, ಬೆಳೆಯಬೇಕಾದರೆ ಸಮಾಜವಾದಿ ಆಂದೋಲನ ಮುಂದುವರಿಸುವುದು ಅನಿವಾರ್ಯ' ಎಂದು ಹೇಳಿದರು.

ಬೆಂಗಳೂರಿನ ಗಾಂಧಿ ಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಶಾಂತವೇರಿ ಗೋಪಾಲಗೌಡ ಮತ್ತು ಮಧುಲಿಮಯೆ ಅವರ ಭಾವಚಿತ್ರಗಳಿಗೆ ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಪುಷ್ಪನಮನ ಸಲ್ಲಿಸಿದರು. ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮತ್ತು ಶಿವಾನಂದ ಕುಗ್ವೆ ಇದ್ದರು – ಪ್ರಜಾವಾಣಿ ಚಿತ್ರ

'ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಜಮೀನ್ದಾರರೂ ಇದ್ದರು. ಸ್ವಾತಂತ್ರ್ಯ ಲಭಿಸಿದಾಗ ಅವರೆಲ್ಲರೂ ಜಮೀನ್ದಾರರಾಗಿ ಮತ್ತಷ್ಟು ಗಟ್ಟಿಯಾಗಲು ಹೊರಟಿದ್ದರು. ಆದರೆ, 1951ರಲ್ಲಿ ತಮ್ಮ ಸ್ವಗ್ರಾಮ ಕಾಗೋಡಿನಲ್ಲಿ ಆರಂಭವಾದ ಗೇಣಿದಾರರ ಹೋರಾಟ ಭೂಸುಧಾರಣೆ ಕಾಯ್ದೆ ಜಾರಿಗೆ ನಾಂದಿಯಾಯಿತು. ಸ್ವಾತಂತ್ರ್ಯ ನಂತರದ ಭಾರತದಲ್ಲಿ ಸಾಮಾಜಿಕ ಸ್ಥಿತಿ ಬದಲಾವಣೆಗೆ ಸಮಾಜವಾದಿ ಹೋರಾಟದ ಕೊಡುಗೆ ಬಹಳ ದೊಡ್ಡದು' ಎಂದರು.

'ದೇಶ ಈಗ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯ ಸಂಭ್ರಮದಲ್ಲಿದೆ. ಆದರೆ, ಸ್ವಾತಂತ್ರ್ಯದ ಫಲ ದೇಶದ ಎಲ್ಲ ಜನರನ್ನೂ ತಲುಪಿಲ್ಲ. ಪೌರ ಕಾರ್ಮಿಕರನ್ನಾಗಿ ನಿರ್ದಿಷ್ಟ ಸಮುದಾಯದ ಜನರನ್ನೇ ದುಡಿಸಿಕೊಳ್ಳುವ ಪರಿಸ್ಥಿತಿ ಇದೆ. ಅವರೇನು ಅದಕ್ಕಾಗಿಯೇ ಹುಟ್ಟಿದ್ದಾರೆಯೇ' ಎಂದು ಪ್ರಶ್ನಿಸಿದರು.

'ಶಾಂತವೇರಿ ಗೋಪಾಲಗೌಡರು ನನ್ನನ್ನು ಸಾಗರದಿಂದ ಬೆಂಗಳೂರಿಗೆ ಕರೆತಂದು ಓದಿಸಿದರು. ಅವರು ನೀಡಿದ ಬೆಂಬಲದಿಂದ ರಾಜಕೀಯ ಪ್ರವೇಶಿಸಿ, ಶಾಸಕ, ಸಚಿವನಾಗಲು ಸಾಧ್ಯವಾಯಿತು. ಅವರಿಂದಾಗಿಯೇ ನಾನು ಬೆಳೆದೆ' ಎಂದು ಕಾಗೋಡು ಸ್ಮರಿಸಿದರು.

'ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದು ಹೋರಾಟದ ಫಲವಾಗಿ. ಈಗಲೂ ಅನ್ಯಾಯ ತಡೆಯಲು ಹೋರಾಟವೇ ಅಸ್ತ್ರವಾಗಬೇಕು. ಸ್ವಾತಂತ್ರ್ಯದ ಫಲ ಎಲ್ಲ ಜನರನ್ನೂ ತಲುಪುವಂತೆ ಸಮಾಜವಾದಿ ಸಿದ್ಧಾಂತದ ಅಡಿಯಲ್ಲಿ ಬಲವಾದ ಹೋರಾಟ ರೂಪಿಸಬೇಕು' ಎಂದು ಹೇಳಿದರು.

ರಾಜ್ಯ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಸಮಾಜವಾದಿ ಚಿಂತಕರಾದ ಶ್ರೀಕಂಠಮೂರ್ತಿ, ಎನ್. ಶಿವಾನಂದ ಕುಗ್ವೆ ಉಪಸ್ಥಿತರಿದ್ದರು.

'ರಾತ್ರಿ ಮಾಂಸ ತಿಂದು ಬೆಳಿಗ್ಗೆ ದೇವಸ್ಥಾನಕ್ಕೆ ಹೋಗಬಹುದಂತೆ'

ಬೆಂಗಳೂರು: ಸಮಾಜವಾದಿ ಸಿದ್ಧಾಂತದ ಮೂಲಕ ಬೆಳೆದುಬಂದಿದ್ದ ಶಾಂತವೇರಿ ಗೋಪಾಲಗೌಡರು ಮೌಢ್ಯಾಚರಣೆಯ ವಿರೋಧಿಯಾಗಿದ್ದರು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, 'ರಾತ್ರಿ ಮಾಂಸ ತಿಂದು ಬೆಳಿಗ್ಗೆ ದೇವಸ್ಥಾನಕ್ಕೆ ಹೋಗಬಹುದಂತೆ. ಬೆಳಿಗ್ಗೆ ತಿಂದು ಸಂಜೆ ದೇವಸ್ಥಾನಕ್ಕೆ ಹೋಗಬಾರದಂತೆ. ಏನಿದು ಮೌಢ್ಯ ಆಚರಣೆ?. ಅದಕ್ಕೆ ನಾನು ಮೌಢ್ಯ ನಿಷೇಧ ಕಾಯ್ದೆ ತಂದಿದ್ದೆ. ಈಗ ಅದನ್ನು ಕಸದ ಬುಟ್ಟಿಗೆ ಎಸೆದಿದ್ದಾರೆ' ಎಂದರು.

'ಗೋಪಾಲಗೌಡರು ಇದನ್ನೆಲ್ಲ ವಿರೋಧಿಸಿದ್ದರು. ಅವರು ಸಮಾಜವಾದದ ಹಿನ್ನೆಲೆಯಿಂದ ಬಂದವರು. ಈ ಸರ್ಕಾರಕ್ಕೆ ಸಮಾಜವಾದ, ಸಮಾನತೆ, ಜಾತ್ಯತೀತತೆಯನ್ನ ವಿರೋಧಿಸುವ ಮನಸ್ಥಿತಿ ಇದೆ' ಎಂದು ಹೇಳಿದರು.

ಚಿತ್ರಾವಳಿ



ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) 'ನವೋದಯ' ತಂಡದ ಕಲಾವಿದರು ಪ್ರಸನ್ನ ಅವರ ನಿರ್ದೇಶನದಲ್ಲಿ 'ಅಯೋಧ್ಯಾ ಕಾಂಡ' ನಾಟಕವನ್ನು ಭಾನುವಾರ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು ಜೆ. ಪಿ. ನಗರದ ಜರಗನಹಳ್ಳಿಯ ಸೀತಾರಾಮ ಲಕ್ಷ್ಮಣ ಹನುಮಂತ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಪುನರ್ ಪ್ರತಿಷ್ಠಾಪನೆ, ನೂತನ ವಿಮಾನ ಗೋಪುರ, ಗರುಡ ಸ್ತಂಭ ಮಹಾಕುಂಬಾಭಿಷೇಕ ಮಹೋತ್ಸವದಲ್ಲಿ ಮುತ್ತೈದೆಯರು ಬೆಲ್ಲದ ಆರತಿ ಹೊತ್ತು ಭಾನುವಾರ ಸಾಗಿದರು

ನಗರದಲ್ಲಿ ಇಂದು

ಜೈವಿಕ ಬಲವರ್ಧನೆ: ಅತಿಥಿಗಳು: ರಾಜೇಂದ್ರ ಕಟಾರಿಯಾ, ಉಷಾ ಮಂಜುನಾಥ, ಕಪಿಲ್ ಮೋಹನ್, ವಿನೀತಾ ಕುಮಾರಿ, ಶಿವಯೋಗಿ ಸಿ. ಕಳಸದ, ಆಯೋಜನೆ: ಎಫ್‌ಐಸಿಸಿಐ, ಸ್ಥಳ: ದಿ ಲಲಿತ್ ಅಶೋಕ್, ಬೆಳಿಗ್ಗೆ 10

ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಶ್ರೀಗಂಧದವನ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಮಾಡಾಳ್ ವಿರೂಪಾಕ್ಷಪ್ಪ, ಅತಿಥಿಗಳು: ಮುರುಗೇಶ ನಿರಾಣಿ, ಕೆ. ಗೋಪಾಲಯ್ಯ, ಆಯೋಜನೆ: ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್, ಸ್ಥಳ: ಕೆಎಸ್ ಆ್ಯಂಡ್ ಡಿಎಲ್, ಬೆಂಗಳೂರು ಸಂಕೀರ್ಣ, ನಂ.27, ಇಂಡಸ್ಟ್ರಿಯಲ್ ಸಬರ್ಬ್, ಮಲ್ಲೇಶ್ವರ (ಪಶ್ಚಿಮ), ಬೆಳಿಗ್ಗೆ 11

ಕ್ಲಾಸ್ ಮ್ಯಾಗಜಿನ್ 'ದಿ ವಿಷನ್': ಬಿಡುಗಡೆ: ರವೀಂದ್ರ ಭಟ್ಟ, ಅತಿಥಿಗಳು: ಗೌರೀಶ ಅಕ್ಕಿ, ಎಸ್.ಎನ್ ನಾಗರಾಜ ರೆಡ್ಡಿ, ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಕಾಲೇಜಿನ ಪತ್ರಿಕೋದ್ಯಮ ವಿಭಾಗ, ಜಯನಗರ, ಮಧ್ಯಾಹ್ನ 12.30

ವಚನ ಪ್ರವಚನ: ಮನೆ–ಮನಗಳಲ್ಲಿ ಶಿವಪೂಜೆ ಶಿವನಾನುಭವ ಹಾಗೂ ಸಿದ್ಧಾಂತ ಶಿಖಾಮಣಿ. ಜಯದೇವ್ ಚಿದಾನಂದ ಮಠದ್. ಸ್ಥಳ: ನಂ.61 ಪ್ರಕೃತಿ, 3ನೇ ಅಡ್ಡರಸ್ತೆ ನಾಗರಬಾವಿ 2ನೇ ಹಂತ, 1ನೇ ಬ್ಲಾಕ್. ಬೆಳಿಗ್ಗೆ 7.30. ನಿರ್ಮಲಾ ಮತ್ತು ಬ್ರಹ್ಮ ಚೈತನ್ಯ ಪ್ರಸಾದ, ಸ್ಥಳ: ನಂ.280 ಉಜ್ವಲ ವಿದ್ಯಾಲಯ ಎದುರು ಓ ಫಾರಂ ವೈಟ್‌ಫೀಲ್ಡ್, ಸಂಜೆ 5

ನಿಧನ ವಾರ್ತೆ

ಸುನೀತಾ ರೆಪ್ಸ್‌ವಾಲ್

ಬೆಂಗಳೂರು: ಲೆಫ್ಟಿನೆಂಟ್ ಜನರಲ್ ಬಿ.ಕೆ. ರೆಪ್ಸ್‌ವಾಲ್ ಅವರ ಪತ್ನಿ ಸುನೀತಾ (54) ಅವರು ಭಾನುವಾರ ನಿಧನ ಹೊಂದಿದರು. ಅವರಿಗೆ ಮೂವರು ಮಕ್ಕಳು ಇದ್ದಾರೆ.

SBI
ಭಾರತೀಯ ಸ್ಟೇಟ್ ಬ್ಯಾಂಕ್
ಐಟಿಎಸ್‌ಎಸ್ ವಿಭಾಗ, ಸ್ಥಳೀಯ ಪ್ರಧಾನ ಕಛೇರಿ
65, ಸೆಂಟ್ ಮಾರ್ಕರ ರಸ್ತೆ, ಬೆಂಗಳೂರು–560 001.

(ಕರ್ನಾಟಕ ರಾಜ್ಯ) ಬೆಂಗಳೂರು ವೃತ್ತದ ಶಾಖೆಗಳು/ಕಛೇರಿಗಳಲ್ಲಿರುವ ಐಟಿ ಸ್ವತ್ತುಗಳ ವಾರ್ಷಿಕ ನಿರ್ವಹಣೆ ಗುತ್ತಿಗೆಯನ್ನು ಕೈಗೊಳ್ಳಲು ಗುತ್ತಿಗೆದಾರರ ಎಂಪ್ಯಾನೆಲ್ಮೆಂಟ್ ಪ್ರಸ್ತಾವನೆ ಮನವಿಗಾಗಿ ಆಹ್ವಾನ

ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರಿನ ಸ್ಥಳೀಯ ಪ್ರಧಾನ ಕಛೇರಿಯು **01.09.2022** ರಿಂದ **30.09.2025** ರವರೆಗೆ 3 ವರ್ಷಗಳ ಅವಧಿಗಾಗಿ ಕರ್ನಾಟಕ ರಾಜ್ಯದ ಬೆಂಗಳೂರು ವೃತ್ತದ ಶಾಖೆಗಳು/ಕಛೇರಿಗಳಲ್ಲಿರುವ ಐಟಿ ಸ್ವತ್ತುಗಳ ಹಾರ್ಡ್‌ವೇರ್ ವಾರ್ಷಿಕ ನಿರ್ವಹಣೆ ಗುತ್ತಿಗೆಯನ್ನು ಕೈಗೊಳ್ಳಲು ಗುತ್ತಿಗೆದಾರರ ಎಂಪ್ಯಾನೆಲ್ಮೆಂಟ್‌ಗಾಗಿ ಟೆಂಡರ್ ಆಹ್ವಾನಿಸಿದೆ. ಬ್ಯಾಂಕ್ ವೆಬ್‌ಸೈಟ್ https://bank.sbi ನ ->SBI In the News ->Procurement News-> ನಲ್ಲಿ ಅಪ್‌ಲೋಡ್ ಮಾಡಲಾದ ವಿವರವಾದ ಆರ್‌ಎಫ್‌ಪಿಯನ್ನು **22.08.2022** ರಿಂದ **05.09.2022** ರ ಸಂಜೆ **5.00** ಗಂಟೆಯವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಹತಾ ಅಗತ್ಯತೆಗಳನ್ನು ಪೂರೈಸುವ ಗುತ್ತಿಗೆದಾರರು ಆರ್‌ಎಫ್‌ಪಿ ಪ್ರಸ್ತಾವನೆಗಳನ್ನು ನಿಯಮಾನುಸಾರ ಕೆಳಸಹಿದಾರರ ಮೇಲೆ ತಿಳಿಸಲಾದ ವಿಳಾಸಕ್ಕೆ **07.09.2022 ರಂದು ಸಂಜೆ 5.00 ಗಂಟೆಗೆ** ಅಥವಾ ಮುಂಚಿತವಾಗಿ ಸಲ್ಲಿಸಬಹುದು.

ಸಹಾಯಕ ಪ್ರಧಾನ ವ್ಯವಸ್ಥಾಪಕರು (ಐಟಿಎಸ್‌ಎಸ್)



ಸುಗಮ ಸಂಗೀತ ಪರಿಷತ್: ಮುದ್ದುಕೃಷ್ಣ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ಸುಗಮ ಸಂಗೀತ ಪರಿಷತ್ತಿಗೆ ಮತ್ತೊಂದು ಅವಧಿಗೆ ಅಧ್ಯಕ್ಷರಾಗಿ ಗಾಯಕ ವೈ.ಕೆ. ಮುದ್ದುಕೃಷ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಭಾನುವಾರ ನಗರದಲ್ಲಿ ನಡೆದ ಪರಿಷತ್ತಿನ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಈ ಆಯ್ಕೆ ನಡೆದಿದೆ. ಕಾರ್ಯಾಧ್ಯಕ್ಷರಾಗಿ ಕಿಕ್ಕೇರಿ ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿಯಾಗಿ ನಗರ ಶ್ರೀನಿವಾಸ ಉಡುಪ, ಪ್ರಧಾನ ಸಂಚಾಲಕರಾಗಿ ಇಂದು ವಿಶ್ವನಾಥ್ ಹಾಗೂ ಖಜಾಂಚಿಯಾಗಿ ಪ್ರಶಾಂತ್ ಉಡುಪ ಆಯ್ಕೆಯಾಗಿದ್ದಾರೆ.

ಎನ್.ಎಸ್. ಪ್ರಸಾದ್, ಡೇವಿಡ್, ಪ್ರವೀಣ್, ನಾಗಚಂದ್ರಿಕಾ, ನರಸಿಂಹಮೂರ್ತಿ, ಶಿವಶಂಕರ್, ತಿಮ್ಮೇಶ್ ಹಾಗೂ ಪ್ರಸನ್ನ ಕುಮಾರ್ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದಾರೆ.

ಮಡಿಕೇರಿಯಲ್ಲಿ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಅಲ್ಲಲ್ಲಿ ಭಾನುವಾರ ಸಾಧಾರಣ ಮಳೆಯಾಗಿದೆ.

ಮಡಿಕೇರಿಯಲ್ಲಿ ಭಾನುವಾರ ದಿನವಿಡೀ ಜಿಟಿಜಿಟಿ ಮಳೆ ಸುರಿದಿದೆ. ಸೋಮವಾರದಿಂದ ಮಳೆ ಬಿರುಸು ಪಡೆಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕೊಡಗು: ಪರಿಸ್ಥಿತಿಯ ಲಾಭ ಪಡೆಯಲು ಬಿಜೆಪಿ, ಕಾಂಗ್ರೆಸ್ ನಡುವೆ ಪೈಪೋಟಿ

ರಾಜಕೀಯ ಸಂಘರ್ಷದ ವೇದಿಕೆ?

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕಾಂಗ್ರೆಸ್–ಬಿಜೆಪಿ ನಡುವಿನ ರಾಜಕೀಯ ಸಂಘರ್ಷದ ವೇದಿಕೆಯಾಗಿ ಬದಲಾಗುತ್ತಿರುವ ಕಾರಣದಿಂದಾಗಿ ಕೊಡಗು ಜಿಲ್ಲೆ ರಾಜ್ಯದ ಗಮನಸೆಳೆದಿದೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಯಾಣಿಸುತ್ತಿದ್ದ ಕಾರಿಗೆ ಕೋಳಿಮೊಟ್ಟೆ ಎಸೆದ ಪ್ರಕರಣವು ಪಕ್ಷಗಳ ಪ್ರತಿಷ್ಠೆ ಹಾಗೂ ಅಸ್ತಿತ್ವದ ವಿಷಯವಾಗಿ ಬದಲಾಗಿದೆ. ಎರಡೂ ಪಕ್ಷಗಳೂ ಶಕ್ತಿಪ್ರದರ್ಶನಕ್ಕೆ ಬಳಸಿಕೊಳ್ಳಲು ಭಾರಿ ಸಿದ್ಧತೆ ನಡೆಸಿವೆ.

'ಸುಲಭವಾಗಿ ಸಿಕ್ಕಿರುವ ಅವಕಾಶ ಬಿಟ್ಟುಕೊಡಬಾರದು' ಎಂದೇ ಭಾವಿಸಿರುವ ಕಾಂಗ್ರೆಸ್, ದಾವಣಗೆರೆಯ ಬೃಹತ್ ಸಮಾವೇಶದ ನಂತರ ಪ್ರತಿಭಟನೆಯ ರೂಪದಲ್ಲಿ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗುತ್ತಿದೆ. ಆ.26ರಂದು ಹಮ್ಮಿಕೊಂಡಿರುವ ಎಸ್ಪಿ ಕಚೇರಿ ಮುತ್ತಿಗೆಗೆ ಕಾಂಗ್ರೆಸ್‌ನ ಎಲ್ಲ ಶಾಸಕರು, ವಿಧಾನಪರಿಷತ್ ಸದಸ್ಯರ ಜೊತೆಗೆ, ಎಐಸಿಸಿಯಿಂದಲೂ ಪ್ರಮುಖರನ್ನು ಕರೆದುಕೊಂಡು ಬರಲು ಯೋಜನೆ ರೂಪಿಸಿದೆ.

ಲಾಭದ ಲೆಕ್ಕಾಚಾರ: ಕಾಂಗ್ರೆಸ್‌ನ ಜಿಲ್ಲಾಮಟ್ಟದ ನಾಯಕರು ಪ್ರತಿಭಟನೆಗೆ ಸಜ್ಜಾಗುತ್ತಿದ್ದಾರೆ. 2004ರಿಂದಲೂ ಬಿಜೆಪಿಯ ಭದ್ರ ನೆಲೆಯಾಗಿರುವ ಮಡಿಕೇರಿ ಹಾಗೂ ವಿರಾಜಪೇಟೆ ಕ್ಷೇತ್ರಗಳಲ್ಲಿ ಆಡಳಿತ ವಿರೋಧಿ ಅಲೆ ಇದೆ ಎಂದು ಅಂದಾಜಿಸಿರುವ ಕಾಂಗ್ರೆಸ್, ಅದರ ಲಾಭ ಪಡೆಯಬಹುದು ಎಂಬ ಲೆಕ್ಕಾಚಾರದಲ್ಲಿದೆ.

ಮತ್ತೊಂದೆಡೆ, ಮೊಟ್ಟೆ ಎಸೆತ ಪ್ರಕರಣದ ರಾಜಕೀಯ ಲಾಭವನ್ನು ಕಾಂಗ್ರೆಸ್‌ಗೆ ಬಿಟ್ಟು ಕೊಡಬಾರದೆಂದು ಬಿಜೆಪಿ ಹೈಕಮಾಂಡ್ ಸಹ ಸೂಚಿಸಿದೆ ಎಂದು ತಿಳಿದುಬಂದಿದೆ. ಹಾಗಾಗಿ, ಕಾಂಗ್ರೆಸ್‌ನ ಪ್ರತಿಭಟನೆಯ ದಿನದಂದೇ ಜನಜಾಗೃತಿ ಸಮಾವೇಶ ಹಮ್ಮಿಕೊಂಡಿದೆ. ಮೊಟ್ಟೆ ಎಸೆತದಂತಹ ಘಟನೆಗಳು ಕಲ್ಲೆಸೆತದಂತಹ ಘಟನೆಗಳಾಗಿ ಪರಿವರ್ತನೆ ಆಗದಂತೆ ತಡೆಯಲು ಜಿಲ್ಲಾ ಪೊಲೀಸರೂ ಕಾರ್ಯತಂತ್ರ ರೂಪಿಸುತ್ತಿದ್ದಾರೆ.

ಎರಡೂ ಕಾರ್ಯಕ್ರಮಗಳಿಗೆ ಅನುಮತಿ ನೀಡಬಾರದು ಎಂಬ ಕೂಗು ಸಹ ಎದ್ದಿದೆ. ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿರುವ ಎರಡೂ ರಾಜಕೀಯ ಪಕ್ಷಗಳ ವರ್ತನೆಗೆ ಜನಸಾಮಾನ್ಯರಲ್ಲಿ ಆಕ್ರೋಶ ವ್ಯಕ್ತವಾಗಿದೆ.

'ಚೇತರಿಸಿಕೊಳ್ಳಲು ಬಿಡಿ': ವ್ಯಾಪಾರಸ್ಥರ ಮನವಿ: ಪ್ರವಾಸೋದ್ಯಮವೇ ಜೀವಾಳವಾಗಿರುವ ಜಿಲ್ಲೆಯಲ್ಲಿ 2018, 2019ರ ಮಹಾಮಳೆ, ಭೂಕುಸಿತ, 2020ರಲ್ಲಿ ಕೋವಿಡ್, ಲಾಕ್‌ಡೌನ್, ನಿರ್ಬಂಧಗಳಿಂದ ವಹಿವಾಟು ಸಂಪೂರ್ಣ ನೆಲಕಚ್ಚಿತ್ತು. ಸಣ್ಣಪುಟ್ಟ ವ್ಯಾಪಾರಸ್ಥರು, ದೊಡ್ಡ ಮಟ್ಟದ ವಾಣಿಜ್ಯೋದ್ಯಮಿಗಳೂ ಸಂಕಷ್ಟಕ್ಕೆ ಸಿಲುಕಿದ್ದರು. ಕೋವಿಡ್ ಕಡಿಮೆಯಾಗುವ ಈ ವರ್ಷದಲ್ಲಾದರೂ ಒಂದಿಷ್ಟು ವಹಿವಾಟು ಲೆಕ್ಕಾಚಾರದಲ್ಲಿದ್ದ ವ್ಯಾಪಾರ ಸ್ಥರಿಗೆ ಸಂಘರ್ಷಮಯ ವಾತಾವರಣ ನಿರಾಸೆ ಮೂಡಿಸಿದೆ. ವ್ಯಾಪಾರಕ್ಕೆ ಹೊಡೆತ ಬಿದ್ದಿರುವುದಕ್ಕೆ ಅಸಮಾಧಾನ ವ್ಯಕ್ತವಾಗಿದೆ. ಈ ವಾತಾವರಣ ತಿಳಿಯಾಗಿಸಲು ರಾಜಕಾರಣಿಗಳು ಪ್ರಯತ್ನಿಸಬೇಕು ಎಂಬುದು ಅವರ ಒತ್ತಾಯವಾಗಿದೆ.

ಪ್ರವಾಹ, ಭೂಕುಸಿತ, ಕೋವಿಡ್, ಲಾಕ್‌ಡೌನ್ ಗಳಿಂದ ವಹಿವಾಟು ನೆಲಕಚ್ಚಿದೆ. ಇನ್ನಾದರೂ ಉತ್ತಮ ವಹಿವಾಟು ನಡೆಸಲು ಅವಕಾಶ ಮಾಡಿಕೊಡಬೇಕು
ಗಿರೀಶ್ ಗಣಪತಿ
ಅಧ್ಯಕ್ಷ, ಮಡಿಕೇರಿ ನಗರದ ಎಫ್‌ಕೆಸಿಸಿಐ

ಸಂಘರ್ಷದ ವಾತಾವರಣದಿಂದ ಯಾರಿಗೂ ಲಾಭವಿಲ್ಲ. ಪ್ರವಾಸೋದ್ಯಮದಿಂದ ಇಲ್ಲಿ ಬದುಕಲು ಸಾಧ್ಯ. ವ್ಯಾಪಾರಿಗಳನ್ನು ನೆಮ್ಮದಿಯಾಗಿ ಬದುಕಲು ಬಿಡಿ
ಎಂ.ಬಿ.ದೇವಯ್ಯ
ಅಧ್ಯಕ್ಷ, ಕೊಡಗು ಜಿಲ್ಲಾ ವಾಣಿಜ್ಯ ಸಂಸ್ಥೆ

ಮಂತ್ರ ಮಾಂಗಲ್ಯ: ದಾಂಪತ್ಯಕ್ಕೆ ಕಾಲಿಟ್ಟ 42 ಜೋಡಿ

ಚಿಕ್ಕಬಳ್ಳಾಪುರ: ನಗರದ ಕೆ.ವಿ. ಕ್ಯಾಂಪಸ್ ಬಳಿ ಭಾನುವಾರ ದಲಿತ ಸಂಘರ್ಷ ಸಮಿತಿ ಮತ್ತು ಶೋಷಿತ ಸಮುದಾಯಗಳ ಅಭಿವೃದ್ಧಿ ಸಂಸ್ಥೆಯು ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ 42 ಜೋಡಿ ಮಂತ್ರ ಮಾಂಗಲ್ಯದಡಿ ದಾಂಪತ್ಯಕ್ಕೆ ಕಾಲಿಟ್ಟರು. ಆ ಪೈಕಿ ಎರಡು ಜೋಡಿಯದ್ದು ಅಂತರ್ಜಾತಿ ವಿವಾಹ.

ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ವಿವಾಹ ಸಂಹಿತೆ ಬೋಧಿಸಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಾಳಿ ನೀಡಿದರು.

ಶಾಸಕ ವಿ.ಮುನಿಯಪ್ಪ, ಎನ್.ಎಚ್.ಶಿವಶಂಕರರೆಡ್ಡಿ, ಕೆ.ಆರ್.ರಮೇಶ್ ಕುಮಾರ್, ಎಸ್.ಎನ್.ಸುಬ್ಬಾರೆಡ್ಡಿ, ಕಾಂಗ್ರೆಸ್ ಮುಖಂಡ ಎಚ್.ಸಿ.ಮಹದೇವಪ್ಪ, ಜೆಡಿಎಸ್ ಮುಖಂಡ ಕೆ.ಪಿ. ಬಚ್ಚೇಗೌಡ ಮತ್ತಿತರರು ಸಾಕ್ಷಿಯಾದರು.

'ಜಾತಿ ವ್ಯವಸ್ಥೆಗಳಲ್ಲಿ ಬದಲಾವಣೆ ಆಗುತ್ತಿಲ್ಲ. ಅಂತರ್ಜಾತಿ ವಿವಾಹಗಳು ಸಮಾಜದಲ್ಲಿ ಹೆಚ್ಚಬೇಕು' ಎಂದು ಸಿದ್ದರಾಮಯ್ಯ ಹೇಳಿದರು.

ಮನೆಗೆ ಬೆಂಕಿ ಬೆದರಿಕೆ: ಸಂಪತ್ ಆರೋಪ

ಮಡಿಕೇರಿ: 'ಮನೆಗೆ ಬೆಂಕಿ ಇಡುತ್ತೇವೆ, ಬಸ್ ನಿಲ್ದಾಣದಲ್ಲಿ ನಿಲ್ಲಿಸಿ ಮೊಟ್ಟೆಯಿಂದ ಹೊಡೆಯುತ್ತೇವೆ ಎಂದು ಕೆಲವರು ಮೊಬೈಲ್ ಫೋನ್‌ಗೆ ಕರೆ ಮಾಡುತ್ತಿದ್ದಾರೆ. ನಾನೇನು ದೇಶದ್ರೋಹದ ಕೆಲಸ ಮಾಡಿದ್ದೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆದ ಆರೋಪಿ ಸಂಪತ್ ಪ್ರಶ್ನಿಸಿದ್ದಾರೆ.

'ನಾನು ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವ ಪಡೆದಿಲ್ಲ. ಆದರೆ, ಕಾಂಗ್ರೆಸ್ ಪಕ್ಷಕ್ಕೆ ಕೆಲಸ ಮಾಡಿದ್ದೇನೆ. ಚುನಾವಣೆ ಸಮಯದಲ್ಲಿ ಮಾತ್ರವೇ ಕಾಂಗ್ರೆಸ್ ಮುಖಂಡರಿಗೆ ಬೇಕಾಗುತ್ತೇನೆ. ಇಂತಹ ಸಮಯದಲ್ಲಿ ಕೈಬಿಡುತ್ತಾರೆ' ಎಂದು ಸೋಮವಾರಪೇಟೆಯಲ್ಲಿ ಭಾನುವಾರ ಸುದ್ದಿಗಾರರಿಗೆ ಹೇಳಿದ್ದಾರೆ.

'ಸ್ನೇಹಿತನೊಬ್ಬ ಜಾಮೀನು ಕೊಟ್ಟ. ಮನೆಯಲ್ಲಿ 10 ಮಂದಿ ಇರುವಷ್ಟು ದೊಡ್ಡ ಸಂಸಾರ ಹೊಂದಿರುವ ನಿನಗೆ ಮೊಟ್ಟೆ ಹೊಡೆಯುವುದು ಬೇಕಾಗಿತ್ತಾ ಎಂದು ಬೈಯ್ದ. ಆದರೆ, ಸಿದ್ದರಾಮಯ್ಯ ಅವರ ಕೊಡಗು ವಿರೋಧಿ, ಹಿಂದೂ ವಿರೋಧಿ ಹೇಳಿಕೆಗಳಿಂದ ಕೋಪಗೊಂಡು ಈ ಕೃತ್ಯ ಎಸಗಿದೆ' ಎಂದರು.

'ನಾನು ಗಣವೇಷಧಾರಿಯಾಗಿರುವ ಚಿತ್ರವು 20 ವರ್ಷ ಹಳೆಯದು. ಈಗ ನಾನು ಕಾಂಗ್ರೆಸ್ ಕಾರ್ಯಕರ್ತ ಎಂದು ಪುನರುಚ್ಚರಿಸಿದ್ದಾರೆ.

ಬೆದರಿಕೆ: 'ಸಿದ್ದರಾಮಯ್ಯ ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕೋಳಿ ಮೊಟ್ಟೆ ಎಸೆದ ಆರೋಪ ಎದುರಿಸುತ್ತಿರುವ ನನ್ನ ಮಗ ಸಂಪತ್‌ಗೆ ಬೆದರಿಕೆ ಇದೆ' ಎಂದು ಸಂಪತ್ ತಂದೆ, ಸುಂದರಮೂರ್ತಿ ಅವರು ಪತ್ರಕರ್ತರಿಗೆ ತಿಳಿಸಿದ್ದಾರೆ.

'ನಾನು ಬಿಜೆಪಿ ಕಾರ್ಯಕರ್ತನಾಗಿದ್ದರೂ ಮಗ ಕಾಂಗ್ರೆಸ್ ಸೇರಿದ್ದ. ಹೀಗಿದ್ದರೂ, ಅಪ್ಪಟ ಹಿಂದೂ ಕಾರ್ಯಕರ್ತ' ಎಂದರು.

ನಿಷೇಧಾಜ್ಞೆ?: ಆ.26ರಂದು ಕಾಂಗ್ರೆಸ್‌ನಿಂದ ಮಡಿಕೇರಿ ಚಲೋ ಹಾಗೂ ಬಿಜೆಪಿಯಿಂದ ಜನಜಾಗೃತಿ ಸಮಾವೇಶ ಹಮ್ಮಿ ಕೊಳ್ಳಲಾಗಿದೆ. ಈ ಎರಡೂ ಕಾರ್ಯ ಕ್ರಮಗಳಿಗೂ ಅನುಮತಿ ನೀಡದಿರಲು, ಮುಂಜಾಗ್ರತಾ ಕ್ರಮವಾಗಿ ಆ.25ರಿಂದ 2 ದಿನ ನಿಷೇಧಾಜ್ಞೆ ಜಾರಿಗೆ ಪೊಲೀಸರು ಯೋಜಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಹೊರಗೆ ಹೋಗುವಾಗ ಮುಖಗವಸು ಧರಿಸಿ

ಸುದ್ದಿ 2 ನಿಮಿಷ

ಹಿಂದುಳಿದ ವರ್ಗಗಳ ಆಯೋಗ; ಶಿಫಾರಸು ಆಧರಿಸಿ ಮೀಸಲಾತಿ ತೀರ್ಮಾನ

ಹಾವೇರಿ: 'ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡುವ ಬಗ್ಗೆ ನಿರ್ಧರಿಸುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 'ನ್ಯಾಯಾಲಯಗಳ ತೀರ್ಪು ಸೇರಿದಂತೆ ಎಲ್ಲದರ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುತ್ತೇನೆ. ಕೂಡಲಸಂಗಮದ ಶ್ರೀಗಳ ಜೊತೆ ಈ ಬಗ್ಗೆ ಮಾತನಾಡುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಇಂಥ ಸಮಾವೇಶ ಎಷ್ಟು ನೋಡಿಲ್ಲ?'

ಹಾಸನ: 'ರಾಜ್ಯದಲ್ಲಿ ನಾವು ಕಾಣದೇ ಇರುವ ಸಿದ್ದರಾಮೋತ್ಸವನಾ? ಎಂತೆಂಥ ಸಮಾವೇಶಗಳನ್ನು ಎಷ್ಟು ಪಕ್ಷಗಳು ಮಾಡಿಲ್ಲ? ಸುಮ್ಮನೆ ಅವರ ಚಪಲಕ್ಕೆ ಹೇಳಿಕೊಳ್ಳುತ್ತಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದರು.

'ದಾವಣಗೆರೆ ಕಾರ್ಯಕ್ರಮದ ನಂತರ ಎರಡು ಪಕ್ಷಗಳು ಹತಾಶಗೊಂಡಿವೆ' ಎಂಬ ಸಿದ್ದರಾಮಯ್ಯ ಹೇಳಿಕೆಗೆ, ಜಿಲ್ಲೆಯ ಹರದನಹಳ್ಳಿಯಲ್ಲಿ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಇಂತಹ ಉತ್ಸವಗಳಿಂದ ಜನ ವೋಟು ಹಾಕುತ್ತಾರೆ ಎಂದು ತಿಳಿದುಕೊಂಡಿದ್ದರೆ ಅದು ಭ್ರಮೆ' ಎಂದರು.

'ಆ.26ರಂದು ಕಾಂಗ್ರೆಸ್‌ನಿಂದ ಹಮ್ಮಿಕೊಂಡಿರುವ ಪಾದಯಾತ್ರೆಗೆ ನಾನೇನು ಮಹತ್ವ ಕೊಡುವುದಿಲ್ಲ' ಎಂದು ಹೇಳಿದರು.

'ನಮ್ಮ ಆಹಾರ ಪದ್ಧತಿ, ನಡವಳಿಕೆಯನ್ನು ದೊಡ್ಡ ಮಟ್ಟದಲ್ಲಿ ಸಾರ್ವಜನಿಕರ ಎದುರು ಪ್ರಚಾರಕ್ಕೆ ಬಳಸುವುದು ಸರಿಯಲ್ಲ. ನಾವು ಅದಕ್ಕೆ ಅವಕಾಶ ನೀಡಬಾರದು' ಎಂದರು.

ಮುಡಿ ಶಾಸ್ತ್ರ: ನಿಖಿಲ್ ಕುಮಾರಸ್ವಾಮಿ ಹಾಗೂ ರೇವತಿ ಪುತ್ರ ಅವ್ಯನ್ ದೇವ್‌ಗೆ ಭಾನುವಾರ ಮುಡಿ ಶಾಸ್ತ್ರ ಮಾಡಲಾಗಿದ್ದು, ಚನ್ನರಾಯಪಟ್ಟಣ ತಾಲ್ಲೂಕಿನ ಯಲಿಯೂರು ಲಕ್ಷ್ಮಿದೇವಾಲಯದಲ್ಲಿ ದೇವರಿಗೆ ಮುಡಿ ನೀಡಿ ಕುಮಾರಸ್ವಾಮಿ ಪೂಜೆ ಮಾಡಿಸಿದರು. ಬಳಿಕ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿಯ ದೇವೇಶ್ವರ ದೇಗುಲದಲ್ಲಿ ಪೂಜೆ ಸಲ್ಲಿಸಿದರು.

'ಜನಶಕ್ತಿ ಉತ್ಸವ'ದಲ್ಲಿ ಕೇರಳದ ಸಂಸದ ಜಾನ್ ಬ್ರಿಟ್ಟಾಸ್ ಪ್ರಶ್ನೆ

'ಉಚಿತ ಕೊಡುಗೆ: 'ಸುಪ್ರೀಂ'ಗೆ ಉಸಾಬರಿ ಏಕೆ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಜನರಿಗೆ ಉಚಿತ ಕೊಡುಗೆಗಳನ್ನು ಘೋಷಿಸುವ ಬಗ್ಗೆ ತೀರ್ಮಾನ ಮಾಡಬೇಕಾದುದು ಸಂಸತ್ ಮಾತ್ರ. ಉಚಿತ ಕೊಡುಗೆ ನಿಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಯಾವ ನೆಲೆಯಲ್ಲಿ ತಾನೆ ಹೇಳಲು ಸಾಧ್ಯ. ಅಷ್ಟಕ್ಕೂ ಈ ಸುಪ್ರೀಂ ಕೋರ್ಟ್‌ಗೆ ಈ ಉಸಾಬರಿ ಏಕೆ? ದೇಶದಲ್ಲಿ ಹತ್ಯಾಕಾಂಡಗಳು ನಡೆದಾಗ, ಅವುಗಳನ್ನು ತಡೆಯಲು ಸುಪ್ರೀಂ ಕೋರ್ಟ್ ಏನಾದರೂ ಕ್ರಮ ಕೈಗೊಂಡಿದೆಯೇ' ಎಂದು ಕೇರಳದ ಸಂಸದ ಜಾನ್ ಬ್ರಿಟ್ಟಾಸ್ ಪ್ರಶ್ನಿಸಿದರು.

ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವ ಅಂಗವಾಗಿ ಇಲ್ಲಿ ಭಾನುವಾರ ಆಯೋಜಿಸಿದ್ದ 'ಜನಶಕ್ತಿ ಉತ್ಸವ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಐದಾರು ವರ್ಷಗಳಲ್ಲಿ ಕಾರ್ಪೊರೇಟ್ ಉದ್ಯಮಿಗಳ ₹10 ಲಕ್ಷ ಕೋಟಿಗೂ ಅಧಿಕ ಸಾಲ ರೈಟ್ ಆಫ್ ಮಾಡಿದಾಗ ಯಾರೂ ಚಕಾರ ಎತ್ತಿಲ್ಲ. ಬಡವರ ಮನೆಗೆ ಪೂರೈಸುವ ನೀರಿಗೆ ಸಬ್ಸಿಡಿ ನೀಡುವಂತಹ ವಿಚಾರಕ್ಕೆ ತಕರಾರು ತೆಗೆಯಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಗುಜರಾತ್‌ನ ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದಲ್ಲಿ ಕಠಿಣ ಸಜೆ ಅನುಭವಿಸುತ್ತಿದ್ದ ಅಪರಾಧಿಗಳ ಶಿಕ್ಷೆಯನ್ನು ಮೊಟಕುಗೊಳಿಸಿ, ಅವರನ್ನು ಬಿಡುಗಡೆ ಮಾಡಲಾಯಿತು. ಘೋರ ಅಪರಾಧಿಗಳ ಬಿಡುಗಡೆಯ ನಿರ್ಧಾರ ಕೈಗೊಂಡ ಸಮಿತಿಯಲ್ಲಿದ್ದ ಐಎಎಸ್ ಅಧಿಕಾರಿಗಳೂ ಇದಕ್ಕೆ ಆಕ್ಷೇಪ ದಾಖಲಿಸಿಲ್ಲ. ಬಿಡುಗಡೆಯಾದ ಅಪರಾಧಿಗಳಿಗೆ ಹಾರ ಹಾಕಿ ಬರಮಾಡಿಕೊಳ್ಳಲಾಯಿತು. 'ಬಿಡುಗಡೆಗೊಂಡ ಅಪರಾಧಿಗಳು ಬ್ರಾಹ್ಮಣರು. ಅವರು ಅಪರಾಧ ನಡೆಸಲು ಸಾಧ್ಯವಿಲ್ಲ' ಎಂದು ಬಿಜೆಪಿ ಶಾಸಕರೊಬ್ಬರು ಹೇಳಿಕೆ ನೀಡುತ್ತಾರೆ. ಇದಕ್ಕಿಂತ ಲಜ್ಜೆಗೇಡು ನಡವಳಿಕೆ ಇದೆಯೇ' ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಜಾನ್ ಬ್ರಿಟ್ಟಾಸ್ (ಎಡದಿಂದ ಐದನೆಯವರು) ಅವರು ಜನಶಕ್ತಿ ಪತ್ರಿಕೆಯ 'ಅಮೃತ ಕರ್ನಾಟಕ' ಸಂಚಿಕೆಯನ್ನು ಬಿಡುಗಡೆ ಮಾಡಿದರು. ಪತ್ರಿಕೆಯ ಸಂಪಾದಕ ಡಾ.ಕೆ.ಪ್ರಕಾಶ್, ಉತ್ಸವದ ಸ್ವಾಗತ ಸಮಿತಿಯ ಎನ್.ಕೆ.ವಸಂತರಾಜ್, ಸಾಹಿತಿ ಬಿ.ಎಂ.ರೋಹಿಣಿ, ಸಾಹಿತಿ ಪುರುಷೋತ್ತಮ ಬಿಳಿಮಲೆ, ಹಂಪಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ.ಚಂದ್ರ ಪೂಜಾರಿ, ಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯ ಕೆ.ಯಾದವ ಶೆಟ್ಟಿ, ಪ್ರಕಾಶಕ ಯು.ಬಸವರಾಜು, ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಡಾ.ಎಸ್‌ವೈ.ಗುರುಶಾಂತ್, ಸ್ವಾಗತ ಸಮಿತಿಯ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಇದ್ದಾರೆ

ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ, 'ಕೇವಲ ಮೂರು ಸಾವಿರ ಜನ ಮಾತನಾಡುವ ಸಂಸ್ಕೃತ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ರೂಪಿಸುವ ಸಂಚು ನಡೆದಿದೆ. 2023ರ ಜನಗಣತಿಯಲ್ಲಿ ದೇಶದಲ್ಲಿ ಸಂಸ್ಕೃತ ತಿಳಿದವರ ಸಂಖ್ಯೆ 30 ಕೋಟಿಗಳಷ್ಟಾದರೂ ಇದೆ ಎಂದು ಬಿಂಬಿಸುವ ಪ್ರಯತ್ನ ನಡೆದಿದೆ. ತಾಯಿಯನ್ನು ತಾಯಿಯಲ್ಲ ಎಂದು ಯಾವತ್ತೂ ಹೇಳಬಾರದು. ಹಾಗೆಯೇ ಗಣತಿ ಸಂದರ್ಭದಲ್ಲಿ ಜನರು ತಮ್ಮ ನಿಜವಾದ ತಾಯಿ ನುಡಿಯನ್ನೇ ನಮೂದಿಸಬೇಕು' ಎಂದರು.

ಜನಶಕ್ತಿ ಪತ್ರಿಕೆಯ 'ಅಮೃತ ಕರ್ನಾಟಕ' ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

'ಪರ-ವಿರೋಧದ ಪ್ರತಿಪಾದನೆ ವೈಚಾರಿಕ ನೆಲೆಯಲ್ಲಿರಲಿ'

ಹುಬ್ಬಳ್ಳಿ: 'ಯಾವ ವಿಷಯಗಳನ್ನು ಎಷ್ಟರ ಮಟ್ಟಿಗೆ ಮುಂದಕ್ಕೆ ಒಯ್ಯಬೇಕು ಮತ್ತು ರಾಜಕೀಯಕರಣಗೊಳಿಸಬೇಕು ಎಂಬುದು ರಾಜಕೀಯ ಪಕ್ಷಗಳಿಗೆ ಗೊತ್ತಿರಬೇಕು. ಯಾವುದೇ ವಿಷಯಗಳ ಕುರಿತ ಪ್ರತಿಪಾದನೆ ಮತ್ತು ವಿರೋಧ ವೈಚಾರಿಕವಾಗಿಯೇ ಇರಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆತ ಮತ್ತು ವಿ.ಡಿ. ಸಾವರ್ಕರ್ ಭಾವಚಿತ್ರಕ್ಕೆ ಬೆಂಕಿ ಘಟನೆ ಕುರಿತು, ನಗರದ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಐತಿಹಾಸಿಕ ವಿಷಯಗಳ ಬಗ್ಗೆ ನಂಬಿಕೆ ಮತ್ತು ವಿರೋಧ ಇದ್ದಿದ್ದೆ. ಅದನ್ನು ಪ್ರಜಾಪ್ರಭುತ್ವದ ಮಾದರಿಯಲ್ಲಿ ಯಾವ ವೇದಿಕೆಯಲ್ಲಿ ಎಷ್ಟರ ಮಟ್ಟಿಗೆ ವ್ಯಕ್ತಪಡಿಸಬೇಕು ಎಂಬುದು ರಾಜಕೀಯ ಪಕ್ಷಗಳ ಜವಾಬ್ದಾರಿ. ಅದನ್ನು ಅರಿತರೆ ಭಿನ್ನಾಭಿಪ್ರಾಯ ಇದ್ದಾಗಲೂ ನಾವು ಕೆಲಸ ಮಾಡಬಹುದು. ಅಂತಹ ವಿಷಯಗಳನ್ನು ಬೀದಿಗೆ ಎಳೆದು ತರುವುದರಿಂದ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುತ್ತದೆ. ಆ ಕೆಲಸವನ್ನು ಯಾರೂ ಮಾಡಬಾರದು' ಎಂದರು.

ಕಳಸಾ ಬಂಡೂರಿ ಯೋಜನೆ ನನೆಗುದಿಗೆ ಬಿದ್ದಿಲ್ಲ. ಯೋಜನೆಗೆ ಪರಿಸರ ಇಲಾಖೆ ಮತ್ತು ಕೇಂದ್ರ ಜಲ ಆಯೋಗದಿಂದ ಅನುಮತಿ ಸಿಗುವ ಹಂತದಲ್ಲಿದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.16	7,054	2,406
ಹಾರಂಗಿ	2,859	2,857.56	3,258	1,300
ಕಬಿನಿ	2,284	2,283.45	5,320	2,000
ಹೇಮಾವತಿ	2,922	2,921.90	5,163	5,660
ಲಿಂಗನಮಕ್ಕಿ	1,819	1,813	8,399	5,924
ಸೂಪಾ (ಮೀ)	564	548.80	8,598	1,118
ಮಾಣಿ	594	588	1,606	352
ತುಂಗಭದ್ರಾ	1,633	1,632.99	30,769	30,430
ಮಲಪ್ರಭಾ	2,079.50	2,077.70	2,545	994
ಘಟಪ್ರಭಾ	2,175	2,174.50	7,395	4,978
ಭದ್ರಾ	186	184	5,747	5,145
ಆಲಮಟ್ಟಿ (ಮೀ)	519.6	519.55	90,914	84,375
ನಾರಾಯಣಪುರ (ಮೀ)	492.25	491.87	25,000	19,604

* ನೆಲಮಟ್ಟದಿಂದ

'ಗಣೇಶ ಮೂರ್ತಿ ಬಳಿ ಸಾವರ್ಕರ್ ಫೋಟೊ ಇಡಿ'

ವಿಜಯಪುರ: ನಗರದಲ್ಲಿ ಸಾರ್ವಜನಿಕ ಗಣೇಶೋತ್ಸವ ಸಮಿತಿಯವರು ಕೂರಿಸುವ ಪ್ರತಿ ಗಣೇಶನ ಮೂರ್ತಿ ಬಳಿ ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಫೋಟೊ ಇಡಬೇಕು. ಫೋಟೊ ನಾನೇ ಕೊಡುತ್ತೇನೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದ ಭಾನುವಾರ ಸ್ವಾಮಿ ವಿವೇಕಾನಂದ ಸೇನೆ ಆಯೋಜಿಸಿದ್ದ ಗಜಾನನ ಮಹಾಮಂಡಳ ಸಭೆಯಲ್ಲಿ ಅವರು ಮಾತನಾಡಿದರು.

'ಸಾವರ್ಕರ್ ಅವರ ಚಪ್ಪಲಿ ಕಿಮ್ಮತ್ತು ಇಲ್ಲದವರು ಅವರ ಬಗ್ಗೆ ಕೇವಲವಾಗಿ ಮಾತನಾಡುತ್ತಾರೆ. ಅವರನ್ನು ಟೀಕಿಸುವವರು ಒಂದು ವಾರ ಹೋಗಿ ಅಂಡಮಾನ್ ಜೈಲಿನಲ್ಲಿ ಇದ್ದು ಬರಲಿ' ಎಂದು ಅವರು ಸವಾಲೆಸೆದರು.

'ಅಂಡಮಾನ್ ಜೈಲಿನಲ್ಲಿ 10 ವರ್ಷ ಜೈಲುವಾಸ ಅನುಭವಿಸುವುದು ಬೇಡ, ಹೊರಗೆ ಬಂದು ಈ ದೇಶಕ್ಕಾಗಿ ಏನಾದರೂ ಮಾಡೋಣ ಎಂಬ ಉದ್ದೇಶದಿಂದ ಸಾವರ್ಕರ್ ಬ್ರಿಟಿಷರ ಕ್ಷಮಾಪಣೆ ಕೇಳಿದ್ದರೇ ಹೊರತು ಶಿಕ್ಷೆ ಅನುಭವಿಸಲು ಹೆದರಿ ಅಲ್ಲ' ಎಂದರು.

NOTICE INVITING APPLICATIONS FOR ALLOTMENT OF SHOPS AT DEPOT BN, MEG & CENTRE, BANGALORE-560 042.

1. CO, Depot Bn, MEG & Centre, Bangalore - 42 Invites applications for allotment of various regimental shops on rental basis at this Bn, Shops would be allotted to highest bidder based on under mentioned priority in descending order of applications :-
   (a) War Widows / Widows of def personnel killed while on duty
   (b) Disabled Soldiers
   (c) Ex-Servicemen
   (d) Spouse / Widow of Ex-Servicemen
2. Details of Shops is given below :-

Ser No.	Name of Shop	Sq,Ft.
(a)	Photo Studio (P-203 / 01 & 02)	252
(b)	Mobile Shop (P-203 / 03)	91
(c)	Gift Shop (P-203 / 04)	84
(d)	Tailor Shop (P-203 / 06)	208
(e)	Juice Bar (P-203 / 07)	273
(f)	Fruit / Vegetable (P-203 / 08)	308
(g)	Photostat / Lamination (P-203 / 09)	273
(h)	Grocery Store (P-203 / 10)	143
(i)	Store (P-203 / 11)	156
(k)	Scooter / Cycle Repair (P-203 / 13)	84
(l)	Bakery & Tea Stall (P-203 / 14)	154
(m)	Ice Cream / Cold Drink / Milk & Snacks (P-203 / 15)	180
(n)	Gen Store (P-203 / 16)	210
(o)	Garments Shop (P-203 / 17)	154
(p)	Army Store & School Uniform (P-203 / 18 & 19)	434
(q)	Cable TV Room	168
(r)	Store Near Murphy Gate	207
(s)	Photo Stat / Super Seva Near MSI	225
(t)	Fish & Chicken Shop, Near Murphy Gate	176
(u)	Wet Canteen CICE	180

3. The License Fees & Rebate will be intimated during collection of the application form.
4. Details of shops are available in the Application form and the same may be obtained by drawing DD on all working days :-
   (a) Issue of Application From : 29 Aug. 2022 to 10 Sep. 2022 (from 0900 Hrs to 1400 Hrs)
   (b) Dt of receipt of application form : 12 Sep. 2022 to 17 Sep. 2022 (Upto 1100 h)
   (c) DD in favour of REGT FUND ACCOUNT, Depot Bn, MEG & Centre payable at SBI & MEG & Centre
   (d) DD Amount 5000/- (will be refunded to those not allotted Shop & will be adjusted in Security Deposit those allotted shops)
5. One indl cannot be allotted more than one shop on his name.
6. Allotment of shops in a period of 3 Years, not exceeding 5 years
7. Applications forms are available at (a) Reception of Main Gate, MEG & Centre (b) QM Branch, Depot Bn.

ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ:"ನಿರ್ಮಾಣ ಭವನ", ಡಾ|| ರಾಜ್‌ಕುಮಾರ್ ರಸ್ತೆ, (ಓರಾಯನ್ ಮಾಲ್ ಎದುರು) 1ನೇ ಬ್ಲಾಕ್ , ರಾಜಾಜಿನಗರ, ಬೆಂಗಳೂರು–560010
Tel: 080-23371977, email: mdkscc68@gmail.com
ಸಂ. ಕರಾನಿನಿ/ಆಡಳಿತ/ಕಛೇರಿ ಬಾಡಿಗೆ/2022–23/264 ದಿನಾಂಕ: 19–08–2022

ಕಛೇರಿ /ಗೋದಾಮುಗಳಿಗೆ ಬಾಡಿಗೆ ಆಧಾರದ ಮೇಲೆ ಸ್ಥಳಾವಕಾಶ ಲಭ್ಯವಿದೆ ರಾಜಾಜಿನಗರ, (ಓರಾಯನ್ ಮಾಲ್ ಎದುರು) ಬೆಂಗಳೂರು

ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಕೇಂದ್ರ ಕಛೇರಿಯ ಮುಖ್ಯ ಕಟ್ಟಡದಲ್ಲಿ ಹಾಗೂ ಪೂರಕ ಕಟ್ಟಡದಲ್ಲಿ ಕಛೇರಿ ಕಾರ್ಯ ನಿರ್ವಹಿಸಲು ಬಾಡಿಗೆಗೆ ಈ ಕೆಳಕಂಡಂತೆ ಸ್ಥಳಾವಕಾಶ ಲಭ್ಯವಿರುತ್ತದೆ.

1.ಮುಖ್ಯ ಕಟ್ಟಡ

1)	ಬೇಸ್ ಮೆಂಟ್	416.75 ಚ.ಮೀ (4486 ಚ.ಅಡಿ)
2)	ನೆಲಮಹಡಿ	724.92 ಚ.ಮೀ (7803 ಚ.ಅಡಿ)
3)	ಮೊದಲನೇ ಮಹಡಿ	724.92 ಚ.ಮೀ (7803 ಚ.ಅಡಿ)
4)	ಮೂರನೇ ಮಹಡಿ (ಅರ್ಧ ಭಾಗ)	227.61 ಚ.ಮೀ (2450 ಚ.ಅಡಿ)

2.ಪೂರಕ ಕಟ್ಟಡ (Adjacent Building)

1)	ಬೇಸ್ ಮೆಂಟ್	380.52 ಚ.ಮೀ (4096 ಚ.ಅಡಿ)
2)	ನೆಲಮಹಡಿ	249.44 ಚ.ಮೀ (2685 ಚ.ಅಡಿ)

ಮುಖ್ಯ ಕಟ್ಟಡ ಹಾಗೂ ಪೂರಕ ಕಟ್ಟಡದ (Adjacent Building) ಬೇಸ್‌ಮೆಂಟ್ ಸ್ಥಳಾವಕಾಶವನ್ನು ಕಛೇರಿ/ ಗೋದಾಮು (Godown) ಗಳಿಗೆ ಉಪಯೋಗಿಸಬಹುದಾಗಿದೆ. ಆಸಕ್ತಿಯುಳ್ಳ ಸರ್ಕಾರಿ / ಅರೆಸರ್ಕಾರಿ/ಖಾಸಗಿ ಸಂಸ್ಥೆಗಳು ಮೇಲೆ ತಿಳಿಸಿರುವ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.
ದೂರವಾಣಿ ಸಂಖ್ಯೆ : 080–23371977.
ಮೊಬೈಲ್ ಸಂಖ್ಯೆ : 1) 94481 37414. 2) 98809 78765. 3)94487 63285
ಸಹಿ/–
ಸ್ಥಳ : ಬೆಂಗಳೂರು
ದಿನಾಂಕ : 19.08.2022
ವ್ಯವಸ್ಥಾಪಕ ನಿರ್ದೇಶಕರು
ಕ ರಾ ನಿ ನಿ (ನಿ), ಬೆಂಗಳೂರು

INNOVATE KARNATAKA K-tech

ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: E-713905 -KITS/ ADMN/VECH/3/2022-AA-KITS; ದಿನಾಂಕ:19/08/2022
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮಾಸಿಕ ಬಾಡಿಗೆ ಆಧಾರದ ಮೇಲೆ 2018 ಮತ್ತು ಮೇಲ್ಪಟ್ಟ ಮಾಡೆಲ್‌ನ ಹಳದಿ ಬೋರ್ಡ್ ಹೊಂದಿರುವ 04 ಸಂಖ್ಯೆ ಟ್ಯಾಕ್ಸಿ ಸೇವೆಯನ್ನು ಮಾಲೀಕರು/ಚಾಲಕರು, ಟ್ಯಾಕ್ಸಿ ಏಜೆನ್ಸಿ ಯವರು/ನೇರ ಮಾಲೀಕರು, ಟ್ರಾವೆಲ್ ಏಜೆನ್ಸಿಗಳು ಅಥವಾ ಇತರೆ ಟ್ಯಾಕ್ಸಿ ಸೇವೆಯನ್ನು ಒದಗಿಸುವ ಸಂಸ್ಥೆಗಳಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಹವಾ ನಿಯಂತ್ರಿತ (ಎ.ಸಿ) ವಾಹನಕ್ಕೆ ಮಾಸಿಕ ಬಾಡಿಗೆ ರೂ.40,000–00 ಹಾಗೂ ಹವಾ ನಿಯಂತ್ರಿತವಲ್ಲದ ವಾಹನಕ್ಕೆ ಮಾಸಿಕ ಬಾಡಿಗೆ ರೂ. 35,000–00 ಗಳನ್ನು ನಿಗದಿಪಡಿಸಲಾಗಿರುತ್ತದೆ.

ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ಕೊನೆಯ ದಿನಾಂಕ: 06.09.2022 ಅಪರಾಹ್ನ 4.30 ಆಗಿರುತ್ತದೆ. ಟೆಂಡರ್ ಷರತ್ತು ಮತ್ತಿತರ ವಿವರಗಳು https://eproc.karnataka.gov.in ರಲ್ಲಿ ಲಭ್ಯವಿರುತ್ತದೆ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕಿಟ್ಸ್

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು–560027.
ದೂರವಾಣಿ: 080–22231006/8. ಇ–ಮೇಲ್: kitsgok@karnataka.gov.in
ವಾ.ಸಾ.ಸಂ.ಇ/ವಾಪ್ರ/1886/ಆಕಾರ್/22–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad -500028
Corporate Identity Number (CIN) - L13100TG1958GOI001674
CONTRACTS DEPARTMENT
E-Tender Notice (Open Tender Enquiry for Domestic Bidding)
Tender Enquiry No: *HO (Contracts)/Construction/Toe Wall & Garland Drain/DNM/2022/856, dated 22.08.2022*
[MSTC Ref. No.: NMDC/HO/47/22-23/ET/332]
NMDC Limited, A **"NAVARATNA"** Public Sector Company under Ministry of Steel, Govt, of India, invites **online bids** from experienced domestic bidders for the work of **'Construction of Toe wall and Garland Drain for TW-MP 1A and GD-MP-1A of back filling at MP-1A of DIOM'.**
The detailed NITs and Bid documents can be viewed and /or downloaded from **22-08-2022 to 14-09-2022 from following website links;**
1. NMDC website - **http://tenders.nmdc.co.in/nmdctender**
2. Central Public Procurement portal - **http://www.eprocure.gov.in/epublish/app** and
3. MSTC portal - **https://www.mstcecommerce.com/eprochome/nmdc/buyer_login.isp**
For accessing the bid document from MSTC portal, bidder has to register as 'New Vendor' at MSTC website link **https://www.mstcecommerce.co.in/eprochome/nmdc/buyer_login.jsp** and search Tender Event No. NMDC/HO/47/22-23/ET/332. For further help refer to 'vendor guide'given in MSTC website. The bidders are requested to submit their bids online through MSTC Limited e-procurement website.
For further clarification, the following can be contacted: **Chief General Manager** (Contracts), **NMDC Limited, Hyderabad, Fax No. 040-23534746, Tel No. 040- 23532800, email: contracts@nmdc.co.in**
For and on behalf of NMDC Ltd
Chief General Manager (Contracts)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಲಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009						
1	ಕೇಂದ್ರ ಉಗ್ರಾಣ	ಬೆಂಜಮಂ/ಕಾನಿಅ(ಕೇಂ.ಉ)/ಸಕಾನಿಅ/ಸಅ/ಉಗ್ರಾಣ/370/2022–23 ದಿನಾಂಕ: 17.08.2022 (4ನೇ ಕರೆ)		₹ 32,32,000/- / ₹ 64,640/-	12.09.2022 ರ ಸಂಜೆ 4:00 ಗಂಟೆಯವರೆಗೆ	14.09.2022 ರ ಮಧ್ಯಾಹ್ನ 12:00 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ ಉಗ್ರಾಣ)						
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009						
2	ವಾಯುವ್ಯ–2	ಬೆಂಜಮಂ/ಕಾನಿಅ(ವಾಯುವ್ಯ–2)/ಪಿಬಿ/866/2022–23 ದಿನಾಂಕ: 19.08.2022		₹ 5,62,998/- / ₹ 14,100/-	05.09.2022 ರ ಸಂಜೆ 4:00 ಗಂಟೆಯವರೆಗೆ	06.09.2022 ರ ಮಧ್ಯಾಹ್ನ 3:00 ಗಂಟೆಯ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ವಾಯುವ್ಯ–2)						
ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009						
3	ನೈರುತ್ಯ–1	ಬೆಂಜಮಂ/ಕಾನಿಅ(ನೈರುತ್ಯ–1)/ತಾಂಅ/ಪಿಬಿ/155/2022–23 ದಿನಾಂಕ: 20.08.2022	1	₹ 17,57,377/- / ₹ 50,000/-	07.09.2022 ರ ಸಂಜೆ 4:00 ಗಂಟೆಯವರೆಗೆ	09.09.2022 ರ ಮಧ್ಯಾಹ್ನ 3:00 ಗಂಟೆಯ ನಂತರ
4			2	₹ 22,65,601/- / ₹ 50,000/-		
5			3	₹ 23,49,623/- / ₹ 50,000/-		
6			4	₹ 24,52,645/- / ₹ 50,000/-		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ನೈರುತ್ಯ–1)						

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/MIA/1877/2022-23
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಮ್ಮ ಮೆಟ್ರೋ namma metro
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಇ-ಮೇಲ್: contracts@bmrc.co.in ವೆಬ್‌ಸೈಟ್: www.bmrc.co.in
ಸ್ವಾತಂತ್ರ್ಯದ ಅಮೃತ ಮಹೋತ್ಸವ
ಟೆಂಡರ್ ಪ್ರಕಟಣೆ ದಿನಾಂಕ: 22.08.2022
ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್ ಇವರ ಪರವಾಗಿ ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು) ಕೆಳಕಂಡ ಕಾಮಗಾರಿಗೆ ಮುಕ್ತ ಟೆಂಡರ್ ಆಹ್ವಾನಿಸಿರುವರು.

ಕ್ರ. ಸಂ	ಕಾಮಗಾರಿ ಹೆಸರು	ಬಿಡ್ ಸಂಖ್ಯೆ ಮತ್ತು ದಿನಾಂಕ	ಅಂದಾಜು ಬೆಲೆ	ಬಿಡ್ ಬೆಲೆ	ಬಿಡ್ ಭದ್ರತಾ ಮೊತ್ತ	ಬಿಡ್ ದಸ್ತಾವೇಜುಗಳ ಮಾರಾಟ (ಆನ್‌ಲೈನ್ ಮಾತ್ರ)	ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಬಿಡ್ ತೆರೆಯುವ ದಿನಾಂಕ ಮತ್ತು ಸಮಯ
1	ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ–2ಎ ಗಾಗಿ ಅಸ್ತಿತ್ವದಲ್ಲಿರುವ ಬೈಯಪ್ಪನಹಳ್ಳಿ ಡಿಪೋವನ್ನು ನವೀಕರಿಸುವುದು ಮತ್ತು ಹೊಸದಾಗಿ ನಿರ್ಮಾಣ ಮಾಡುವುದು.	ಬಿಎಂಆರ್‌ಸಿಎಲ್/ ಫೇಸ್–2ಎ/ ರೀಮಾಡಲಿಂಗ್– ಬೈಯಪ್ಪನಹಳ್ಳಿ ಡಿಪೋ/89 ದಿನಾಂಕ: 22.08.2022	ರೂ. 266.21 ಕೋಟಿಗಳು	ರೂ. 59,000/–	ರೂ. 2.66 ಕೋಟಿಗಳು	22.08.2022 ರಿಂದ 03.10.2022 ರವರೆಗೆ	03.10.2022 ರಿಂದ 07.10.2022 ರವರೆಗೆ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಮತ್ತು 10.10.2022 ರಂದು ಬೆಳಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ	10.10.2022 ಮಧ್ಯಾಹ್ನ 3.30 ಗಂಟೆಗೆ
2	ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ–2ಗಾಗಿ ಡೈರಿ ವೃತ್ತದ ಬಳಿಯ ಐಟಿಐ ಕಾಲೇಜು ಆವರಣದಲ್ಲಿ ಅಸ್ತಿತ್ವದಲ್ಲಿರುವ ಕಟ್ಟಡಗಳನ್ನು ನವೀಕರಣ ಗೊಳಿಸುವುದು ಮತ್ತು ಹೊಸ ಕಟ್ಟಡ ವಿನ್ಯಾಸ ಮತ್ತು ನಿರ್ಮಾಣ	ಬಿಎಂಆರ್‌ಸಿಎಲ್/ ಫೇಸ್–2/ ರೀಚ್–6–ಯುಜಿ/ ಐಟಿಐ ಕಾಲೇಜು/ 2022/90/ ದಿನಾಂಕ: 22.08.2022	ರೂ. 5.66 ಕೋಟಿಗಳು	ರೂ. 11,800/–	ರೂ. 8.49 ಲಕ್ಷಗಳು	22.08.2022 ರಿಂದ 22.09.2022 ರವರೆಗೆ	23.09.2022 ರಿಂದ 29.09.2022 ರವರೆಗೆ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಮತ್ತು 30.09.2022 ರಂದು ಬೆಳಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ	30.09.2022 ಮಧ್ಯಾಹ್ನ 3.30 ಗಂಟೆಗೆ

ಹೆಚ್ಚಿನ ವಿವರಗಳಿಗೆ, ದಿನಾಂಕ: 22.08.2022 ರಿಂದ ನಮ್ಮ ವೆಬ್‌ಸೈಟ್ www.bmrc.co.in ಸಂಪರ್ಕಿಸಿ.
ಸಹಿ/– ಅಪರ ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು)

ಕಡಿಮೆ ವೆಚ್ಚ, ಉತ್ತಮ ಹವಾಗುಣ, ಪ್ರವೇಶವೂ ಸರಳ

ಜಾರ್ಜಿಯದಲ್ಲಿ ಗುಣಮಟ್ಟದ ವೈದ್ಯಕೀಯ ಶಿಕ್ಷಣ

ಬೆಂಗಳೂರು: 'ಜಾರ್ಜಿಯ ದೇಶದಲ್ಲಿ ಗುಣಮಟ್ಟದ ವೈದ್ಯಕೀಯ ಶಿಕ್ಷಣದ ಜತೆಗೆ ವಿದೇಶದ ಪ್ರತಿ ವಿದ್ಯಾರ್ಥಿಗೂ ಸುರಕ್ಷತೆ ನೀಡಲಾಗುತ್ತಿದೆ' ಎಂದು ಕೌಕಾಸಸ್ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ಸಂಬಂಧ ಮತ್ತು ಯೋಜನಾ ವಿಭಾಗದ ಉಪನಿರ್ದೇಶಕಿ ಕೆಟವನ್ ಕಾರ್ಬಿಯಾ ಹೇಳಿದರು.

ನಗರದ ಹೋಟೆಲ್ ಸಿಟಿ ಸೆಂಟರ್ ಸಭಾಂಗಣದಲ್ಲಿ 'ಸೀಕೊ ಇಂಟರ್‌ನ್ಯಾಷನಲ್' ಸಂಸ್ಥೆಯು ಡಿಎಚ್ ಹಾಗೂ ಪಿವಿ ಬ್ರ್ಯಾಂಡ್ ಸ್ಪಾಟ್ ಸಹಯೋಗದಲ್ಲಿ ಆಯೋಜಿಸಿದ್ದ 'ವಿದೇಶದಲ್ಲಿ ಎಂಬಿಬಿಎಸ್ ಅಧ್ಯಯನಕ್ಕೆ ಅವಕಾಶಗಳು' ಕುರಿತು ಸಂವಾದದಲ್ಲಿ ಅವರು ಮಾತನಾಡಿದರು.

'ವಿ.ವಿಗೆ ಪ್ರವೇಶವು ಸರಳವಾಗಿ ಇರಲಿದೆ. ಎಂಬಿಬಿಎಸ್ ಶಿಕ್ಷಣ ಮುಕ್ತಾಯವಾದ ಬಳಿಕ ತಮ್ಮ ದೇಶಗಳಲ್ಲಿ ವೈದ್ಯ ವೃತ್ತಿ ಆರಂಭಿಸಬಹುದು. ವಿಶ್ವವಿದ್ಯಾಲಯಕ್ಕೆ ಅಂತರರಾಷ್ಟ್ರೀಯ ಮಾನ್ಯತೆಯಿದೆ. ಕಡಿಮೆ ವೆಚ್ಚದಲ್ಲಿ ವೈದ್ಯಕೀಯ ಶಿಕ್ಷಣ ಸೇರಿದಂತೆ ವಿವಿಧ ಪದವಿಗಳನ್ನು ಪೂರೈಸಬಹುದು' ಎಂದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

'ಸಿಬ್ಬಂದಿಗೆ 23 ವರ್ಷಗಳ ಶೈಕ್ಷಣಿಕ ಸೇವಾ ಅನುಭವವಿದೆ. 600 ಮಂದಿ ನುರಿತ ಉಪನ್ಯಾಸಕರಿದ್ದು ಸುಸಜ್ಜಿತ ಪ್ರಯೋಗಾಲಯ ವ್ಯವಸ್ಥೆಯಿದೆ. ನಮ್ಮ ವಿವಿಯಲ್ಲಿ 7 ಸಾವಿರ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಎಂಬಿಬಿಎಸ್ ಸೇರಿದಂತೆ ಯಾವ ಪದವಿ ಪಡೆದರೂ ಉದ್ಯೋಗ ಖಚಿತ. ಶೇ 99ರಷ್ಟು ಮಂದಿಗೆ ಕೆಲಸ ಸಿಕ್ಕಿದೆ. ವಿವಿಧ ರಾಷ್ಟ್ರಗಳ ವಿದ್ಯಾರ್ಥಿಗಳೊಂದಿಗೆ ಬೆರೆಯುವ ಅವಕಾಶ ಲಭಿಸುತ್ತದೆ' ಎಂದು ಹೇಳಿದರು.

ಜಾರ್ಜಿಯ ವಿವಿಯ ಪದವಿ ವಿಭಾಗದ ಆಡಳಿತಾತ್ಮಕ ನಿರ್ದೇಶಕಿ ನೀನೊ ಚಲಾಬಾಷ್‌ವಿಲಿ ಪ್ರತಿಕ್ರಿಯಿಸಿ, ಗುಣಮಟ್ಟದ ಜತೆಗೆ ಪ್ರಾಯೋಗಿಕ ಶಿಕ್ಷಣಕ್ಕೆ ಒತ್ತು ನೀಡಲಾಗುವುದು ಎಂದರು.

ಬೆಂಗಳೂರಿನ ಪೀಣ್ಯದ ಸೀಕೊ ಇಂಟರ್‌ನ್ಯಾಷನಲ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಮೀರಾ, '17 ವರ್ಷಗಳಿಂದ ಎಂಬಿಬಿಎಸ್ ಸೇರ ಬಯಸುವ ವಿದ್ಯಾರ್ಥಿಗಳಿಗೆ ಸಂಸ್ಥೆಯು ನೆರವು ನೀಡುತ್ತಿದೆ. ರಷ್ಯಾ, ಉಕ್ರೇನ್, ಜಾರ್ಜಿಯಾ, ಪೋಲ್ಯಾಂಡ್ ದೇಶಗಳಲ್ಲಿ ಶಿಕ್ಷಣ ಪಡೆಯಲು ತೆರಳುವವರಿಗೆ ಎಲ್ಲ ರೀತಿಯ ಸಹಾಯ ನೀಡಲಾಗಿದೆ. ಭಾರತದಲ್ಲಿ ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೂ, ಲಭ್ಯವಿರುವ ಸೀಟ್‌ಗಳಿಗೂ ವ್ಯತ್ಯಾಸವಿದೆ. ರಾಜ್ಯದಲ್ಲಿ ಕೇವಲ 10 ಸಾವಿರ ಸೀಟ್‌ಗಳು ಲಭ್ಯವಿದೆ. ದಿನದಿಂದ ದಿನಕ್ಕೆ ಸ್ಪರ್ಧೆ ಹೆಚ್ಚಾಗುತ್ತಿದ್ದು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆಯೂ ಹೆಚ್ಚಳವಾಗಿದೆ' ಎಂದರು.

ಸೀಕೊದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಜಾಝಿರ್ ಅಬ್ದುಲ್ ಖಾದರ್ ಮಾತನಾಡಿ, ಬಲ್ಗೇರಿಯ, ಜಾರ್ಜಿಯ, ಪೋಲ್ಯಾಂಡ್ ದೇಶಕ್ಕೆ ಸಾಕಷ್ಟು ವಿದ್ಯಾರ್ಥಿಗಳನ್ನು ಕಳುಹಿಸಲಾಗಿದೆ. ಜಾರ್ಜಿಯದಲ್ಲೇ 17 ಸಾವಿರ ಭಾರತೀಯ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. 24 ಪ್ರತಿಷ್ಠಿತ ವಿವಿಗಳಿವೆ. ಆರಂಭಿಕ ದಿನಗಳಲ್ಲಿ ಅಲ್ಲಿನ ಆಹಾರ ರುಚಿಸುವುದಿಲ್ಲ. ಸಂಸ್ಕೃತಿ ವಿಭಿನ್ನವಾಗಿದೆ. ಕ್ರಮೇಣ ಎಲ್ಲವೂ ಹೊಂದಾಣಿಕೆ ಆಗಲಿದೆ ಎಂದು ಹೇಳಿದರು.

ಈ ವರ್ಷ 18 ಲಕ್ಷ ಮಂದಿ ನೀಟ್ ಪರೀಕ್ಷೆ ತೆಗೆದುಕೊಂಡಿದ್ದಾರೆ. ದೇಶದಲ್ಲಿಯೇ ಎಲ್ಲರಿಗೂ ಎಂಬಿಬಿಎಸ್‌ಗೆ ಪ್ರವೇಶ ದೊರೆಯುವುದಿಲ್ಲ ಎಂದರು. ಸಂಸ್ಥೆಯ ಮುಖ್ಯಸ್ಥ ಅಬ್ದುಲ್ ಖಾದರ್ ಹಾಜರಿದ್ದರು.

ನಗರದಲ್ಲಿ 'ಸೀಕೊ ಇಂಟರ್‌ನ್ಯಾಷನಲ್' ಸಂಸ್ಥೆಯು ಡಿಎಚ್ ಹಾಗೂ ಪಿವಿ ಬ್ರ್ಯಾಂಡ್ ಸ್ಪಾಟ್ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ವಿದೇಶದಲ್ಲಿ ಎಂಬಿಬಿಎಸ್ ಅಧ್ಯಯನಕ್ಕಿರುವ ಅವಕಾಶಗಳು ಕುರಿತ ಸಂವಾದದಲ್ಲಿ ಜಾರ್ಜಿಯದ ಕೌಕಾಸಸ್ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ಸಂಬಂಧ ಮತ್ತು ಯೋಜನಾ ವಿಭಾಗದ ಉಪನಿರ್ದೇಶಕಿ ಕೆಟವನ್ ಕಾರ್ಬಿಯಾ ಅವರಿಗೆ ಸೀಕೊದ ವ್ಯವಸ್ಥಾಪಕ ನಿರ್ದೇಶಕಿ ಮೀರಾ ಹಸ್ತಲಾಘವ ನೀಡಿದರು. (ಎಡದಿಂದ) ಡಾ.ಜಾಝಿರ್ ಅಬ್ದುಲ್ ಖಾದರ್, ಸಂಸ್ಥೆಯ ಮುಖ್ಯಸ್ಥ ಅಬ್ದುಲ್ ಖಾದರ್ ಹಾಗೂ ನೀನೊ ಚಲಾಬಾಷ್‌ವಿಲಿ ಹಾಜರಿದ್ದರು

ಜಾರ್ಜಿಯದಲ್ಲಿ ಉತ್ತಮ ಹವಾಗುಣ ಇದೆ. ನೆರೆ ರಾಷ್ಟ್ರಗಳಿಂದಲೂ ಭೀತಿ ಇಲ್ಲ. ಸುರಕ್ಷತೆ ಇದೆ. ಅಲ್ಲಿ ವೈದ್ಯಕೀಯ ಶಿಕ್ಷಣವೂ ದುಬಾರಿ ಆಗಿಲ್ಲ. 6 ವರ್ಷದ ಎಂಬಿಬಿಎಸ್ ಶಿಕ್ಷಣವನ್ನು ₹ 35 ಲಕ್ಷದ ಒಳಗೆ ಪೂರ್ಣಗೊಳಿಸಬಹುದು.

ಎಸ್.ವಿ.ಶ್ರೀಕುಮಾರ್, ಆರ್‌ಟಿ ನಗರ

ಭಾರತ ಹಾಗೂ ಜಾರ್ಜಿಯದಲ್ಲಿನ ವೈದ್ಯಕೀಯ ಶಿಕ್ಷಣದ ಪಠ್ಯಕ್ರಮಕ್ಕೆ ಅಷ್ಟೊಂದು ವ್ಯತ್ಯಾಸ ಇಲ್ಲ. ಅಲ್ಲಿ ಶಿಕ್ಷಣ ಪಡೆದು ಭಾರತದಲ್ಲಿ ಸುಲಭವಾಗಿ ವೃತ್ತಿ ಆರಂಭಿಸಬಹುದು.

ಪ್ರೀತು, ವಿದ್ಯಾರ್ಥಿನಿ, ಮೈಸೂರು

ಭಾರತದಲ್ಲಿ ಎಂಬಿಬಿಎಸ್ ಶಿಕ್ಷಣ ಪೂರ್ಣಗೊಳಿಸಲು ₹ 2 ಕೋಟಿ ಬೇಕು. ಇಲ್ಲಿ ಶಿಕ್ಷಣ ದುಬಾರಿ ಆಗಿದೆ. ಜಾರ್ಜಿಯಾದಲ್ಲಿ ಕಡಿಮೆ ಹಣಕ್ಕೆ ಉತ್ತಮ ಶಿಕ್ಷಣ ಲಭಿಸುತ್ತದೆ.

ಮಹಮ್ಮದ್ ಇಕ್ಬಾಲ್, ವಿದ್ಯಾರ್ಥಿ ಮೊಹಿದ್ದೀನ್ ಇಲಾಹನ್ ಅವರ ತಂದೆ, ದಕ್ಷಿಣ ಕನ್ನಡ

ಜೈನ್ ವಿಶ್ವವಿದ್ಯಾಲಯದ ಭಾಷಾ ವಿಭಾಗದ ರಜನಿ ಜಯರಾಮ್ ಅಭಿಮತ

'ಪಠ್ಯೇತರ ಚಟುವಟಿಕೆಯಿಂದ ಅರಿವಿನ ವಿಸ್ತಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆ ಹಾಗೂ ಸಾಮಾಜಿಕ ಹೊಣೆಗಾರಿಕೆ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಇದರಿಂದ ಅರಿವಿನ ವಿಸ್ತಾರ ಸಾಧ್ಯವಾಗಲಿದೆ' ಎಂದು ಜೈನ್ ವಿಶ್ವವಿದ್ಯಾಲಯದ ಭಾಷಾ ವಿಭಾಗಗಳ ಮುಖ್ಯಸ್ಥೆ ರಜನಿ ಜಯರಾಮ್ ತಿಳಿಸಿದರು.

ವಿ.ಕೃ. ಗೋಕಾಕ್ ಟ್ರಸ್ಟ್ ಮತ್ತು ಜೈನ್ ವಿಶ್ವವಿದ್ಯಾಲಯ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡ 'ಬಹುಭಾಷೆಗಳಲ್ಲಿ ವಿ.ಕೃ. ಗೋಕಾಕರ ಕವಿತೆಗಳು' ಕಮ್ಮಟದ ಪೂರ್ವಭಾವಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ (ಯುಜಿಸಿ) ನಿಯಮಗಳ ಪ್ರಕಾರ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚಿನ ಆದ್ಯತೆ ನೀಡಬೇಕು. ಆದರೆ, ಬಹುತೇಕ ಕಡೆ ಪಠ್ಯಕ್ಕೆ ಮಾತ್ರ ಆದ್ಯತೆ ಸಿಗುತ್ತಿದೆ' ಎಂದರು.

ವಿಶ್ವವಿದ್ಯಾಲಯದ ಸೆಂಟರ್ ಫಾರ್ ರಿಸರ್ಚ್ ಅಕಾಡೆಮಿಯ ಉಪ ನಿರ್ದೇಶಕಿ ಮೈಥಿಲಿ ಪಿ. ರಾವ್, 'ಅನುವಾದದಿಂದ ನಮ್ಮ ಸೃಜನಶೀಲ ಸಂವೇದನೆಗಳು ಇನ್ನಷ್ಟು ವಿಸ್ತಾರಗೊಳ್ಳುತ್ತವೆ. ಇತ್ತೀಚಿನ ದಿನಗಳಲ್ಲಿ ಅನುವಾದಕ್ಕೆ ಹಲವು ಅವಕಾಶ ಹಾಗೂ ವೇದಿಕೆಗಳು ದೊರೆಯುತ್ತಿವೆ. ಗೋಕಾಕರ ಹಲವು ಕವನಗಳು ಇಂಗ್ಲಿಷ್, ಹಿಂದಿ, ಸಂಸ್ಕೃತ, ಜಪಾನಿ ಸೇರಿ ವಿವಿಧ ಭಾಷೆಗಳಿಗೆ ಅನುವಾದಗೊಂಡಿವೆ. ಈ ಕವನಗಳನ್ನು ಜೈನ್ ಪ್ರೆಸ್ ಕವನ ಸಂಕಲನ ರೂಪದಲ್ಲಿ ಹೊರ ತರುತ್ತಿದೆ' ಎಂದು ಹೇಳಿದರು.

ಟ್ರಸ್ಟ್‌ನ ಜಂಟಿ ಕಾರ್ಯದರ್ಶಿ ಅಭಿನವ ರವಿಕುಮಾರ್, 'ಶ್ರಮ ಸಂಸ್ಕೃತಿಯ ಕುರುಹಾಗಿ ಹುಟ್ಟಿದ ಕಾವ್ಯ, ನಾಗರಿಕ ಸಮಾಜದ ಔನ್ನತ್ಯಕ್ಕೆ ತನ್ನದೆ ನೆಲೆಯಲ್ಲಿ ಕೊಡುಗೆ ನೀಡುತ್ತಾ ಬಂದಿದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಥಿಲಿ ಪಿ. ರಾವ್ ಮಾತನಾಡಿದರು. ರಜನಿ ಜಯರಾಮ್ ಹಾಗೂ ಅಭಿನವ ರವಿಕುಮಾರ್ ಇದ್ದಾರೆ

ಚಾಮರಾಜಪೇಟೆ ಮೈದಾನದಲ್ಲಿ ಗಣೇಶೋತ್ಸವ ಆಚರಣೆಯ ವಿಚಾರ: ಭದ್ರತೆ ಮುಂದುವರಿಕೆ

ಬೆಂಗಳೂರು: ಚಾಮರಾಜಪೇಟೆ ಮೈದಾನದಲ್ಲಿ ಗಣೇಶೋತ್ಸವ ಆಚರಿಸಲು ಪಟ್ಟು ಹಿಡಿದಿರುವ ಕೆಲ ಸಂಘಟನೆಯವರು, ಅನುಮತಿ ಕೋರಿ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಪರಿಶೀಲನೆ ನಡೆಯುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಮೈದಾನಕ್ಕೆ ಹೆಚ್ಚಿನ ಭದ್ರತೆ ಒದಗಿಸಿದ್ದಾರೆ.

ಮೈದಾನದಲ್ಲಿ ಆಗಸ್ಟ್ 15ರಂದು ಮೊದಲ ಬಾರಿಗೆ ರಾಷ್ಟ್ರ ಧ್ವಜಾರೋಹಣ ನೆರವೇರಿಸಲಾಗಿದೆ. ಇದರ ಮರುದಿನದಿಂದಲೇ ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆ ಹಾಗೂ ಇತರೆ ಸಂಘಟನೆಗಳ ಸದಸ್ಯರು, ಗಣೇಶೋತ್ಸವ ಆಚರಿಸಲು ತೆರೆಮರೆಯಲ್ಲಿ ಸಿದ್ಧತೆ ಆರಂಭಿಸಿದ್ದಾರೆ.

'ಚಾಮರಾಜಪೇಟೆ ಮೈದಾನವನ್ನು ಸದ್ಯ ಅತೀ ಸೂಕ್ಷ್ಮ ಪ್ರದೇಶವೆಂದು ಗುರುತಿಸಲಾಗಿದೆ. ಮುಂಬರುವ ಗಣೇಶೋತ್ಸವ ವಿಚಾರವಾಗಿ ಗೊಂದಲಗಳು ಉಂಟಾಗುತ್ತಿವೆ. ಹೀಗಾಗಿ, ಮೈದಾನಕ್ಕೆ ಬಿಗಿ ಭದ್ರತೆ ಒದಗಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮೈದಾನದ ಜಾಗ ಕಂದಾಯ ಇಲಾಖೆ ಒಡೆತನದಲ್ಲಿದೆ. ಹೀಗಾಗಿ, ಗಣೇಶೋತ್ಸವ ಆಚರಣೆಗೆ ಕಂದಾಯ ಇಲಾಖೆಯೇ ಅನುಮತಿ ನೀಡಬೇಕು. ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆ ಸೇರಿದಂತೆ ಮೂರು ಸಂಘಟನೆಗಳು, ಗಣೇಶೋತ್ಸವ ಆಚರಣೆಗೆ ಅನುಮತಿ ಕೋರಿ ನಗರ ಜಿಲ್ಲಾಧಿಕಾರಿ ಅವರಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿವೆ. ಅನುಮತಿ ನೀಡುವುದು ಅಥವಾ ನಿರಾಕರಿಸುವುದು ಕಂದಾಯ ಇಲಾಖೆಗೆ ಬಿಟ್ಟಿದ್ದು. ಪೊಲೀಸ್ ಇಲಾಖೆಯಿಂದ ಮೈದಾನದ ಭದ್ರತೆಗೆ ಒತ್ತು ನೀಡಲಾಗಿದೆ' ಎಂದೂ ಹೇಳಿದರು.

40 ಸಿಬ್ಬಂದಿ ನಿಯೋಜನೆ: 'ಮೈದಾನದಲ್ಲಿ ಈದ್ಗಾ (ಗೋಡೆ) ಇದ್ದು, ಇದರ ಸುತ್ತಮುತ್ತ 24 ಗಂಟೆಯೂ ಭದ್ರತೆ ಒದಗಿಸಲಾಗಿದೆ. ಕೆಎಸ್‌ಆರ್‌ಪಿ ಹಾಗೂ ಸ್ಥಳೀಯ ಪೊಲೀಸರು ಸೇರಿ 40 ಸಿಬ್ಬಂದಿಯನ್ನು ಮೈದಾನದ ಭದ್ರತೆಗೆ ನಿಯೋಜಿಸಲಾಗಿದೆ' ಎಂದು ಅಧಿಕಾರಿ ತಿಳಿಸಿದರು.

ಎರಡು ವರ್ಷದ ಬಳಿಕ ಭೌತಿಕ 'ಕಾವ್ಯ ಉತ್ಸವ'



ಬೆಂಗಳೂರು: ಆಟಗಲಾಟ ಸಂಸ್ಥೆಯ ಆಶ್ರಯದಲ್ಲಿ 'ಬೆಂಗಳೂರು ಕಾವ್ಯ ಉತ್ಸವ' ಎರಡು ವರ್ಷಗಳ ಬಳಿಕ ಭೌತಿಕವಾಗಿ ನಡೆಯುತ್ತಿದೆ. ಇದೇ 27 ಮತ್ತು 28ರಂದು ಹಳೆ ವಿಮಾನ ನಿಲ್ದಾಣ ರಸ್ತೆಯ ಲೀಲಾ ಪ್ಯಾಲೇಸ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

'ಕೋವಿಡ್‌ನಿಂದಾಗಿ 2020ರಲ್ಲಿ ಆನ್‌ಲೈನ್ ವೇದಿಕೆಯಲ್ಲಿಯೇ ಕಾವ್ಯ ಉತ್ಸವ ನಡೆಸಲಾಗಿತ್ತು. ಈ ಬಾರಿ ಭೌತಿಕವಾಗಿ ನಡೆಯಲಿರುವ ಈ ಉತ್ಸವದಲ್ಲಿ ಕಾವ್ಯ ವಾಚನದ ಜತೆಗೆ ಕಾರ್ಯಾಗಾರವನ್ನೂ ಏರ್ಪಡಿಸಲಾಗಿದೆ. ಎರಡು ದಿನಗಳ ಈ ಉತ್ಸವದಲ್ಲಿ ಬೆಳಿಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಇಂಗ್ಲಿಷ್, ಹಿಂದಿ, ಕನ್ನಡ, ಮಲಯಾಳಂ, ಬಂಗಾಳಿ ಸೇರಿ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಕವಿತೆಗಳ ವಾಚನ ನಡೆಯಲಿದೆ' ಎಂದು ಉತ್ಸವದ ನಿರ್ದೇಶಕಿ ಶೈನಿ ಆ್ಯಂಟನಿ ತಿಳಿಸಿದ್ದಾರೆ.

'ದೇಶ ವಿದೇಶಗಳಿಂದ ಹಳೆಯ ಮತ್ತು ಹೊಸ ತಲೆಮಾರಿನ ಬಹುಭಾಷಾ ಕವಿಗಳು, ಗೀತ ರಚನೆಕಾರರು, ಹಾಡುಗಾರರು, ಸಂಗೀತಗಾರರು ಭಾಗವಹಿಸಲಿದ್ದಾರೆ. ಉತ್ಸವವು ಕವಿತೆ, ಸಂವಾದ, ಭಾಷಣಗಳು ಹಾಗೂ ಕಾರ್ಯಾಗಾರಗಳನ್ನು ಒಳಗೊಂಡಿದೆ. ಕನ್ನಡದ ಕಾವ್ಯ ಗೋಷ್ಠಿಗಳೂ ನಡೆಯಲಿವೆ. 2016ರಿಂದ 2019ರವರೆಗೆ ನಡೆದ ಉತ್ಸವದಲ್ಲಿ ಪ್ರತಿವರ್ಷ 5 ಸಾವಿರಕ್ಕೂ ಹೆಚ್ಚು ಕಾವ್ಯಾಸಕ್ತರು ಭಾಗವಹಿಸಿದ್ದರು. ಈ ವರ್ಷ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವ ನಿರೀಕ್ಷೆಯಿದೆ. ಪ್ರತಿ ವರ್ಷದಂತೆ ಈ ಬಾರಿಯೂ ಬೆಂಗಳೂರು ಸಾಹಿತ್ಯೋತ್ಸವ ಪುಸ್ತಕ ಬಹುಮಾನ ನೀಡಲಾಗುತ್ತದೆ. ಅತ್ಯುತ್ತಮ ಮುಖಪುಟ ವಿನ್ಯಾಸ ಸೇರಿ ವಿವಿಧ ವಿಭಾಗಗಳಲ್ಲಿ 7 ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತಿದೆ' ಎಂದು ತಿಳಿಸಿದ್ದಾರೆ.

'ಈ ಬಾರಿಯಿಂದ 'ಅತ್ಯುತ್ತಮ ಯುವ ಲೇಖಕರ ಪುಸ್ತಕ' ಮತ್ತು 'ಅತ್ಯುತ್ತಮ ಮಕ್ಕಳ ಪುಸ್ತಕ' ಎಂದು ಚಿತ್ರ ಪುಸ್ತಕಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಕನ್ನಡದಲ್ಲಿ ಸಾಹಿತ್ಯ ಸಾಧನೆಗಾಗಿ ಲೇಖಕರಿಗೆ ವಾರ್ಷಿಕ ಪ್ರಶಸ್ತಿ ಸಹ ನೀಡಲಾಗುವುದು' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನಗರದಲ್ಲಿ ಮಳೆ

ಬೆಂಗಳೂರು: ಕೆಲವು ದಿನಗಳಿಂದ ಬಿಡುವು ನೀಡಿದ್ದ ಮಳೆ, ನಗರದ ಹಲವು ಭಾಗಗಳಲ್ಲಿ ಭಾನುವಾರ ಮಧ್ಯಾಹ್ನ ಹಾಗೂ ಸಂಜೆ ಜೋರಾಗಿ ಸುರಿಯಿತು.

ವಿಜಯನಗರ, ರಾಜಾಜಿನಗರ, ಮಲ್ಲೇಶ್ವರ, ರಾಜರಾಜೇಶ್ವರಿ ನಗರ, ಕೆಂಗೇರಿ, ನಾಯಂಡಹಳ್ಳಿ, ಶಾಂತಿನಗರ, ಬಸವನಗುಡಿ, ಸಂಪಂಗಿರಾಮ ನಗರಗಳಲ್ಲಿ ಭಾರಿ ಮಳೆಯಾಯಿತು.

ಯುವಕ ನಾಪತ್ತೆ

ಸುಬ್ರಹ್ಮಣ್ಯ: ಇಲ್ಲಿ ಭಾನುವಾರ ಕುಮಾರಧಾರ ನದಿಯಲ್ಲಿ ಸ್ನಾನಕ್ಕಿಳಿದ ಮಂಡ್ಯದ ಶಿವು (25) ನಾಪತ್ತೆಯಾಗಿದ್ದಾರೆ.

ಬೆಂಗಳೂರಿನಲ್ಲಿ ಉದ್ಯೋಗದಲ್ಲಿರುವ ಅವರು, ಸ್ನೇಹಿತರೊಂದಿಗೆ ಬಂದಿದ್ದರು.

200 ಮಕ್ಕಳ ವಾಸ್ತವ್ಯಕ್ಕೆ ಅನುಕೂಲ: ವಸತಿ ಸಚಿವ ವಿ.ಸೋಮಣ್ಣ

‘ಕನಕ ಭವನ’ ಮಠಕ್ಕೆ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಬಾವಿ ವಾರ್ಡ್ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಕನಕ ಭವನವನ್ನು ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಉದ್ಘಾಟಿಸಲಾಯಿತು.

ಬಳಿಕ ಮಾತನಾಡಿದ ಸ್ವಾಮೀಜಿ, ‘ರಾಜಕಾರಣಿಗಳು ಮೈಕುಗಳ ಮುಂದೆ ಜಾತ್ಯತೀತವಾಗಿ ಬದುಕಬೇಕು ಎಂದು ಕಿವಿಮಾತು ಹೇಳುತ್ತಾರೆ. ಆದರೆ, ಚಾಲಕರು, ಸಹಾಯಕರ ನೇಮಕದ ವೇಳೆ ತಮ್ಮ ಜಾತಿಯವರನ್ನೇ ನೇಮಿಸಿಕೊಳ್ಳುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಹೊಸದುರ್ಗ ಕನಕಪೀಠದ ಈಶ್ವರಾನಂದಪುರಿ ಸ್ವಾಮೀಜಿ ಮಾತನಾಡಿ, ‘ಅಪಪ್ರಚಾರಕ್ಕೆ ಕಿವಿಗೊಡುವುದು ಬೇಡ. ಉತ್ತರ ಕರ್ನಾಟಕದ ಸಾಕಷ್ಟು ಮಂದಿ ಈ ಭಾಗಕ್ಕೆ ಬಂದು ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಪಡೆದುಕೊಳ್ಳುತ್ತಾರೆ. ಮುಂದೆ ಅವರೆಲ್ಲರೂ ಈ ಭವನದಲ್ಲಿ ವಾಸ್ತವ್ಯ ಮಾಡಬಹುದು’ ಎಂದು ಹೇಳಿದರು. ‘ಸಚಿವ ವಿ. ಸೋಮಣ್ಣ ಅವರು ಕುರುಬ ಸಮಾಜದ ಶ್ರೇಯೋಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಅವರ ಉಪಕಾರವನ್ನು ಸಮಾಜ ಮರೆಯುವುದಿಲ್ಲ. ನೀರು ಕೇಳಿದರೆ ಹಾಲು ಕೊಡುವ ಸಮಾಜ ನಮ್ಮದು’ ಎಂದು ಹೇಳಿದರು.

ಸಚಿವ ವಿ.ಸೋಮಣ್ಣ ಮಾತನಾಡಿ, ‘ಈ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಅಂತೆಕಂತೆಗಳನ್ನು ಬಿಟ್ಟು ಎಲ್ಲರ ಶ್ರೇಯೋಭಿವೃದ್ಧಿಗೆ ಶ್ರಮಿಸುವ ಕೆಲಸ ಮಾಡೋಣ. ಕನಕ ಭವನವನ್ನು ಶ್ರೀಮಠಕ್ಕೆ ಹಸ್ತಾಂತರ ಮಾಡಲಾಗುವುದು. ಇಲ್ಲಿ 150ರಿಂದ 200 ಮಕ್ಕಳು ರಾಜಧಾನಿಗೆ ಬಂದಾಗ ವಾಸ್ತವ್ಯಕ್ಕೆ ಅನುಕೂಲ ಆಗಲಿದೆ’ ಎಂದು ಹೇಳಿದರು. ಹಿಂದುಳಿದ ವರ್ಗಗಳ ಐಎಎಸ್, ಐಪಿಎಸ್ ಆಕಾಂಕ್ಷಿ ಅಭ್ಯರ್ಥಿಗಳಿಗೆ ಈ ಭವನದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗುವುದೆಂದು ಸೋಮಣ್ಣ ಭರವಸೆ ನೀಡಿದ್ದಾರೆ. ಅದು ಆದಷ್ಟು ಬೇಗ ಈಡೇರಲಿದೆ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಸಚಿವ ಎಂ.ಟಿ.ಬಿ ನಾಗರಾಜ್ ಮಾತನಾಡಿ, ‘ಬಿಜೆಪಿ ಆಡಳಿತ ಅವಧಿಯಲ್ಲಿ ಭವನ ನಿರ್ಮಾಣಕ್ಕೆ ಅನುದಾನ ನೀಡಿದೆ. ಕನಕ ಭವನವು ಐಟಿ–ಬಿಟಿ ಮಾದರಿಯಲ್ಲಿ ನಿರ್ಮಾಣವಾಗಿದೆ’ ಎಂದರು. ‘ಯಾರಿಗೂ ಅಧಿಕಾರ ಶಾಶ್ವತ ಅಲ್ಲ. ಆಡಳಿತ ಅವಧಿಯಲ್ಲಿ ಶಾಶ್ವತವಾಗಿ ಉಳಿಯುವ ಕೆಲಸ ಮಾಡಬೇಕು’ ಎಂದು ಕರೆ ನೀಡಿದರು. ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ ಮಾತನಾಡಿ, ‘ಇದು ಆತ್ಮಸಂತೋಷದ ಕಾರ್ಯಕ್ರಮ. ಗೋವಿಂದರಾಜ ನಗರದಲ್ಲಿ ಸುಸಜ್ಜಿತವಾದ ಭವನ ನಿರ್ಮಾಣವಾಗಿದೆ. ವಿ.ಸೋಮಣ್ಣ ಸಮಾಜಕ್ಕೆ ಬೇಕಾದ ಕೆಲಸಗಳನ್ನು ಮಾಡಿಕೊಟ್ಟಿದ್ದಾರೆ’ ಎಂದರು. ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ಕನಕಶ್ರೀ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಟಿ.ಬಿ.ಬಳಗಾವಿ, ಪಿ.ಎನ್.ಕೃಷ್ಣಮೂರ್ತಿ, ಎಂ.ಪ್ರಕಾಶ್ ಹಾಜರಿದ್ದರು.

ನಾಗರಬಾವಿ ವಾರ್ಡ್ ವ್ಯಾಪ್ತಿಯ ಚಂದ್ರಾ ಬಡಾವಣೆಯಲ್ಲಿ ನಿರ್ಮಿಸಿರುವ ಕನಕ ಭವನದ ಉದ್ಘಾಟನಾ ಸಮಾರಂಭದಲ್ಲಿ ಕಾಗಿನೆಲೆಮಠದ ಪೀಠಾಧ್ಯಕ್ಷ ನಿರಂಜನಾನಂದಪುರಿ ಸ್ವಾಮೀಜಿ, ಹೊಸದುರ್ಗ ಮಠದ ಪೀಠಾಧ್ಯಕ್ಷ ಈಶ್ವರಾನಂದಪುರಿ ಸ್ವಾಮೀಜಿ, ವಸತಿ ಸಚಿವ ವಿ.ಸೋಮಣ್ಣ, ಸಂಸದ ತೇಜಸ್ವಿ ಸೂರ್ಯ, ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಪಾಲಿಕೆ ಮಾಜಿ ಸದಸ್ಯ ಡಾ.ಎಸ್.ರಾಜು ಇದ್ದಾರೆ — ಪ್ರಜಾವಾಣಿ ಚಿತ್ರ

‘ಭಾರತ ಸಮೃದ್ಧ, ಶಕ್ತಿಶಾಲಿ ರಾಷ್ಟ್ರ’

ಸಚಿವ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ‘ಭಾರತ ಸಮೃದ್ಧ, ಶಕ್ತಿಶಾಲಿ ಆಗುತ್ತಿದೆ. ಉಕ್ರೇನ್ ಹಾಗೂ ರಷ್ಯಾದ ಮಧ್ಯ ನಡೆದ ಯುದ್ಧದ ವೇಳೆ ಭಾರತೀಯ ವೈದ್ಯಕೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರಲಾಯಿತು. ಬೇರೆ ದೇಶಗಳು ಈ ಕೆಲಸ ಮಾಡಲಿಲ್ಲ. ಭಾರತದ ನಾಯಕತ್ವಕ್ಕೆ ಇಡೀ ಪ್ರಪಂಚವೇ ಗೌರವ ನೀಡುತ್ತಿದೆ’ ಎಂದು ಹೇಳಿದರು.

ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಆಡಿದ ಮಾತುಗಳಿಂದ ಮುಜುಗರ ಆಯಿತು. ಹೇಳಲು ನನ್ನ ಬಳಿಯೂ ವಿಷಯಗಳಿವೆ. ಆದರೆ ನಾನು ರಾಜಕೀಯ ಮಾತನಾಡುವುದಿಲ್ಲ.

ಎಚ್.ಎಂ.ರೇವಣ್ಣ, ಕಾಂಗ್ರೆಸ್ ಮುಖಂಡ

ಮನೆ ಖಾಲಿ ಮಾಡಿಸಲು ನೋಟಿಸ್ ಕೊಡಿಸಿದ್ದಕ್ಕೆ ಕೃತ್ಯ

ಬಾಲಕಿ ಕೊಂದು ಜಿಂದಾಲ್ ನೌಕರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ 11 ವರ್ಷದ ಬಾಲಕಿಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪಿ ನಂದಕಿಶೋರ್ (55) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವ ಜಿಂದಾಲ್ ಸ್ಟೀಲ್ ಕಾರ್ಖಾನೆಯ ಕ್ವಾರ್ಟರ್ಸ್‌ನಲ್ಲಿ ಭಾನುವಾರ ಈ ಘಟನೆ ನಡೆದಿದೆ. ಬಾಲಕಿ ಹಾಗೂ ಆರೋಪಿ ಮೃತದೇಹಗಳನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಮಾದನಾಯಕನಹಳ್ಳಿ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

‘ಹರಿಯಾಣದ ಆರೋಪಿ ನಂದಕಿಶೋರ್, ಜಿಂದಾಲ್ ಸ್ಟೀಲ್ ಕಾರ್ಖಾನೆ ನೌಕರ. ಇಬ್ಬರು ಮಕ್ಕಳು ಹಾಗೂ ಪತ್ನಿ ಜೊತೆ ಕ್ವಾರ್ಟರ್ಸ್‌ನಲ್ಲಿ ವಾಸವಿದ್ದ. ಮೃತ ಬಾಲಕಿಯ ತಂದೆ ಸಹ ಅದೇ ಕಾರ್ಖಾನೆ ನೌಕರ. ಅವರ ಕುಟುಂಬವೂ ಕ್ವಾರ್ಟರ್ಸ್‌ನಲ್ಲಿ ನೆಲೆಸಿತ್ತು’ ಎಂದೂ ತಿಳಿಸಿವೆ.

ಅಸಭ್ಯ ವರ್ತನೆ ವಿಚಾರಕ್ಕೆ ಗಲಾಟೆ: ‘ಐದನೇ ತರಗತಿಯಲ್ಲಿ ಓದುತ್ತಿದ್ದ ಬಾಲಕಿ ಜೊತೆ ಆರೋಪಿ ನಂದಕಿಶೋರ್ ಅಸಭ್ಯವಾಗಿ ವರ್ತಿಸಿದ್ದ. ಇದೇ ವಿಷಯವನ್ನು ಬಾಲಕಿ ತನ್ನ ತಂದೆಗೆ ತಿಳಿಸಿದ್ದಳು. ಸಿಟ್ಟಾಗಿದ್ದ ತಂದೆ, ನಂದಕಿಶೋರ್‌ನನ್ನು ತರಾಟೆಗೆ ತೆಗೆದುಕೊಂಡಿದ್ದರು. ಇಬ್ಬರ ನಡುವೆ ಜೋರು ಗಲಾಟೆ ಆಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಾಲಕಿಯ ತಂದೆಯ ಮೇಲೆ ನಂದಕಿಶೋರ್ ಹಲ್ಲೆ ಮಾಡಿದ್ದ. ಈ ಬಗ್ಗೆ ಆಡಳಿತ ಮಂಡಳಿಗೆ ತಂದೆ ದೂರು ನೀಡಿದ್ದರು. ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಆಡಳಿತ ಮಂಡಳಿ, ಕ್ವಾರ್ಟರ್ಸ್‌ನಲ್ಲಿರುವ ಮನೆ ಖಾಲಿ ಮಾಡುವಂತೆ ನಂದಕಿಶೋರ್‌ಗೆ ನೋಟಿಸ್ ನೀಡಿತ್ತು. ಆದರೆ, ಈತ ಮನೆ ಖಾಲಿ ಮಾಡಲು 1 ತಿಂಗಳು ಕಾಲಾವಕಾಶ ಕೋರಿದ್ದ’ ಎಂದೂ ತಿಳಿಸಿವೆ.

ಆಟವಾಡುತ್ತಿದ್ದಾಗ ಚಾಕು ಇರಿದ: ‘ಕಾರ್ಖಾನೆ ಸುತ್ತಮುತ್ತ ಬಾಡಿಗೆಗೆ ಯಾವುದೇ ಮನೆಗಳು ಸಿಕ್ಕಿರಲಿಲ್ಲ. ಆಡಳಿತ ಮಂಡಳಿ ನೀಡಿದ್ದ ಕಾಲಾವಕಾಶವೂ ಮುಗಿಯುತ್ತ ಬಂದಿತ್ತು’ ಎಂದು ಮೂಲಗಳು ತಿಳಿಸಿವೆ.

‘ಒತ್ತಡಕ್ಕೆ ಸಿಲುಕಿದ್ದ ನಂದಕಿಶೋರ್, ಬಾಲಕಿಯಿಂದಲೇ ತನಗೆ ಈ ಸ್ಥಿತಿ ಬಂತೆಂದು ಮನೆಯಲ್ಲಿ ಕೂಗಾಡಿದ್ದ. ಅದೇ ಸಿಟ್ಟಿನಲ್ಲೇ ಭಾನುವಾರ ಬೆಳಿಗ್ಗೆ ಚಾಕು ಸಮೇತ ಬಾಲಕಿಯನ್ನು ಕೊಲ್ಲಲು ಹೊರಟಿದ್ದ. ಮನೆ ಸಮೀಪದಲ್ಲೇ ಆಟವಾಡುತ್ತಿದ್ದ ಬಾಲಕಿಗೆ ಹೊಡೆದು, ಚಾಕುವಿನಿಂದ ಇರಿದಿದ್ದ. ಬಾಲಕಿ ಕುಸಿದು ಬೀಳುತ್ತಿದ್ದಂತೆ ತಾನೂ ಅದೇ ಚಾಕುವಿನಿಂದ ದೇಹದ ವಿವಿಧೆಡೆ ಇರಿದುಕೊಂಡಿದ್ದ. ಬಾಲಕಿ ಮೃತಪಟ್ಟಿದ್ದಳು. ಗಾಯಗೊಂಡ ನಂದಕಿಶೋರ್‌ನನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಕೆಲ ಗಂಟೆಗಳ ಬಳಿಕ ಆತನೂ ಮೃತಪಟ್ಟಿದ್ದಾನೆ’ ಎಂದೂ ಹೇಳಿವೆ.

ಶಾಪಿಂಗ್‌ಗೆ ಕರೆದೊಯ್ಯದಿದ್ದಕ್ಕೆ ಮುನಿಸು: ಬಾಲಕಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪೋಷಕರ ಜೊತೆ ಮುನಿಸಿಕೊಂಡು 5ನೇ ತರಗತಿ ವಿದ್ಯಾರ್ಥಿನಿಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಚಾಮರಾಜಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬಾಲಕಿಯ ತಂದೆ, ಪೇಂಟಿಂಗ್ ಕೆಲಸ ಮಾಡುತ್ತಿದ್ದಾರೆ. ತಾಯಿ, ಗೃಹಿಣಿ. ದಂಪತಿಗೆ ಮೂವರು ಮಕ್ಕಳಿದ್ದು, ಮೃತ ವಿದ್ಯಾರ್ಥಿನಿಯೇ ಹಿರಿಯವಳು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆಂಗ್ಲ ಮಾಧ್ಯಮ ಶಾಲೆಯಲ್ಲಿ ಓದುತ್ತಿದ್ದ ಬಾಲಕಿ, ವಿದ್ಯಾಭ್ಯಾಸದಲ್ಲಿ ಚುರುಕಿದ್ದಳು. ಶಾಲೆಯಲ್ಲಿ ಶನಿವಾರ ಪೋಷಕರ ಸಭೆ ಇತ್ತು. ಮಗಳ ಜೊತೆ ತಂದೆ ಸಭೆಗೆ ಹೋಗಿ ವಾಪಸು ಮನೆಗೆ ಬಂದಿದ್ದರು. ಊರ ಹಬ್ಬದ ನಿಮಿತ್ತವಾಗಿ ಮಗಳಿಗೆ ಇತ್ತೀಚೆಗಷ್ಟೇ ಹೊಸ ಬಟ್ಟೆ ಕೊಡಿಸಿದ್ದರು. ಆಕೆಯನ್ನು ಮನೆಯಲ್ಲೇ ಬಿಟ್ಟು ಉಳಿದ ಇಬ್ಬರು ಮಕ್ಕಳಿಗೆ ಹೊಸ ಬಟ್ಟೆ ಕೊಡಿಸಲೆಂದು ತಂದೆ ಮಾರುಕಟ್ಟೆಗೆ ಹೊರಡಲು ಸಜ್ಜಾಗಿದ್ದರು’ ಎನ್ನಲಾಗಿದೆ.

‘ತಾನೂ ಶಾಪಿಂಗ್‌ಗೆ ಬರುವುದಾಗಿ ಮಗಳು ಪಟ್ಟು ಹಿಡಿದಿದ್ದಳು. ಆಕೆಯನ್ನು ಮನೆಯಲ್ಲೇ ಇರುವಂತೆ ಹೇಳಿ ಪತ್ನಿ ಹಾಗೂ ಇನ್ನಿಬ್ಬರು ಮಕ್ಕಳ ಜೊತೆ ತಂದೆ ಮಾರುಕಟ್ಟೆಗೆ ಹೋಗಿದ್ದರು. ಶಾಪಿಂಗ್‌ಗೆ ಕರೆದುಕೊಂಡು ಹೋಗಲಿಲ್ಲವೆಂದು ನೊಂದ ಬಾಲಕಿ, ಮನೆ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಶಾಪಿಂಗ್ ಮುಗಿಸಿಕೊಂಡು ತಾಯಿ ಮನೆಗೆ ವಾಪಸು ಬಂದಾಗಲೇ ವಿಷಯ ಗೊತ್ತಾಗಿದೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕ್ವಾಲಿಸ್‌ಗೆ ಬೈಕ್ ಡಿಕ್ಕಿ: ಸವಾರ ಸಾವು

ಬೆಂಗಳೂರು: ಬಳ್ಳಾರಿ ರಸ್ತೆಯ ದೇವನಹಳ್ಳಿ ಜಂಕ್ಷನ್‌ನಲ್ಲಿ ಭಾನುವಾರ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಪ್ರತ್ಯುಕ್ಷ ಶರ್ಮಾ (25) ಮೃತಪಟ್ಟಿದ್ದಾರೆ.

‘ಖಾಸಗಿ ಕಂಪನಿ ಉದ್ಯೋಗಿ ಪ್ರತ್ಯುಕ್ಷ, ಸ್ನೇಹಿತ ರಾಜೀವ್ ಜೊತೆ ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಎನ್‌ಫೀಲ್ಡ್ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ದೇವನಹಳ್ಳಿ ಸಂಚಾರ ಪೊಲೀಸ್ ಮೂಲಗಳು ಹೇಳಿವೆ.

‘ಪ್ರತ್ಯುಕ್ಷ ಅವರು ಅತೀ ವೇಗವಾಗಿ ಬೈಕ್ ಚಲಾಯಿಸುತ್ತಿದ್ದರು. ದೇವನಹಳ್ಳಿ ಜಂಕ್ಷನ್‌ನಲ್ಲಿರುವ ಹಂಪ್ಸ್ ಗಮನಿಸಿರಲಿಲ್ಲ. ಅತೀ ವೇಗದಲ್ಲಿ ಹಂಪ್ಸ್ ದಾಟಿಸಲು ಹೋಗಿ ಬೈಕ್ ನಿಯಂತ್ರಣ ತಪ್ಪಿತ್ತು. ವಿಜಯಪುರದಿಂದ ದೊಡ್ಡಬಳ್ಳಾಪುರ ಕಡೆಗೆ ಹೊರಟಿದ್ದ ಕ್ವಾಲಿಸ್ ವಾಹನಕ್ಕೂ ಬೈಕ್‌ಗೂ ಪರಸ್ಪರ ಡಿಕ್ಕಿ ಆಗಿತ್ತು. ಬೈಕ್‌ನಲ್ಲಿದ್ದ ಇಬ್ಬರೂ ರಸ್ತೆಯಲ್ಲಿ ಬಿದ್ದಿದ್ದರು. ತೀವ್ರ ಗಾಯಗೊಂಡು ಪ್ರತ್ಯುಕ್ಷ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ನೇಹಿತ ರಾಜೀವ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿವೆ.

ಡಾನ್ಸ್ ಬಾರ್ ಮೇಲೆ ದಾಳಿ: 19 ಯುವತಿಯರ ರಕ್ಷಣೆ

ಬೆಂಗಳೂರು: ಕಬ್ಬನ್ ಪಾರ್ಕ್ ಠಾಣೆ ವ್ಯಾಪ್ತಿಯ ಬ್ರಿಗೇಡ್ ರಸ್ತೆಯಲ್ಲಿರುವ ಎಕ್ಸ್‌ಕ್ಯೂಸ್ ಬಾರ್ ಮೇಲೆ ಸಿಸಿಬಿ ಪೊಲೀಸರು ಶನಿವಾರ ದಾಳಿ ಮಾಡಿದ್ದು, ಅರೆನಗ್ನ ನೃತ್ಯ ಮಾಡಲು ಬಳಸಿಕೊಳ್ಳುತ್ತಿದ್ದ 19 ಯುವತಿಯರನ್ನು ರಕ್ಷಿಸಿದ್ದಾರೆ.

‘ಬಾರ್‌ನಲ್ಲಿ ಅಕ್ರಮವಾಗಿ ನೃತ್ಯ ಮಾಡಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಬಾರ್ ಮೇಲೆ ದಾಳಿ ಮಾಡಿ, ವ್ಯವಸ್ಥಾಪಕ ಸೇರಿ 7 ಆರೋಪಿಗಳನ್ನು ಬಂಧಿಸಲಾಗಿದೆ. 17 ಗ್ರಾಹಕರನ್ನೂ ವಶಕ್ಕೆ ಪಡೆಯಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು. ‘ಮಾಲೀಕ, ವ್ಯವಸ್ಥಾಪಕ ಸೇರಿದಂತೆ ಹಲವರ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದರು.

ಅಪಘಾತ: ಪತ್ನಿ ಸಾವು, ಪತಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಬಳಿಯ ಕಲ್ಯಾಣನಗರದಲ್ಲಿ ಲಾರಿ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಶ್ವೇತಾ (28) ಮೃತಪಟ್ಟಿದ್ದಾರೆ. ಅವರ ಪತಿ ಆನಂದ್ (30) ತೀವ್ರ ಗಾಯಗೊಂಡಿದ್ದಾರೆ.

‘ಖಾಸಗಿ ಕಂಪನಿ ಉದ್ಯೋಗಿ ಆನಂದ್ ಹಾಗೂ ಶ್ವೇತಾ, ಕೆಲ ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ಶನಿವಾರ ರಜೆ ಇದ್ದಿದ್ದರಿಂದ ಇಬ್ಬರೂ ಶಾಪಿಂಗ್‌ಗೆ ಹೋಗಿ ರಾತ್ರಿ ಸಿನಿಮಾ ನೋಡಿಕೊಂಡು ವಾಪಸು ಮನೆಗೆ ಹೋಗುವಾಗ ಅವಘಡ ಸಂಭವಿಸಿದೆ’ ಎಂದು ಬಾಣಸವಾಡಿ ಸಂಚಾರ ಪೊಲೀಸರು ಹೇಳಿದರು.

‘ಆನಂದ್ ಅವರು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಶ್ವೇತಾ ಕುಳಿತಿದ್ದರು. ಕಲ್ಯಾಣನಗರದ ಜಂಕ್ಷನ್‌ನಲ್ಲಿ ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲಿ ಬಿದ್ದ ಶ್ವೇತಾ ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದೂ ತಿಳಿಸಿದರು.

ಶ್ವೇತಾ

‘ಗಾಯಗೊಂಡಿರುವ ಆನಂದ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದು, ಅವರ ಆರೋಗ್ಯ ಸ್ಥಿತಿಯೂ ಚಿಂತಾಜನಕವಾಗಿದೆ. ತಮಿಳುನಾಡು ನೋಂದಣಿ ಸಂಖ್ಯೆಯ (ಟಿಎನ್ 29 ಬಿಕೆ 6211) ಲಾರಿಯಿಂದ ಅಪಘಾತ ಸಂಭವಿಸಿರುವುದು ಗೊತ್ತಾಗಿದೆ. ಪರಾರಿಯಾಗಿರುವ ಚಾಲಕನನ್ನು ಪತ್ತೆ ಮಾಡಲಾಗುತ್ತಿದೆ’ ಎಂದೂ ಹೇಳಿದರು.

ರಷ್ಯಾದ ಮಿಯರ್ ಡೆಬಿಟ್ ಕಾರ್ಡ್‌ಗೆ ಅನುಮತಿ?

ನವದೆಹಲಿ: ರಷ್ಯಾದ ಮಿಯರ್ ಡೆಬಿಟ್ ಕಾರ್ಡ್‌ಗಳನ್ನು ಬಳಸಿ ಭಾರತದ ಎಟಿಎಂಗಳಿಂದ ಹಣ ಹಿಂದಕ್ಕೆ ಪಡೆಯುವುದಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡುವ ಸಾಧ್ಯತೆ ಇದೆ. ಇದಲ್ಲದೆ, ರೂಪೆ ಕಾರ್ಡ್‌ಗಳನ್ನು ರಷ್ಯಾದಲ್ಲಿ ಬಳಕೆ ಮಾಡುವುದಕ್ಕೆ ಅಲ್ಲಿನ ಸರ್ಕಾರ ಒಪ್ಪುವ ಸಾಧ್ಯತೆಯೂ ಇದೆ.

ಭಾರತದಲ್ಲಿ ಮಿಯರ್ ಕಾರ್ಡ್‌ಗಳ ಬಳಕೆಗೆ, ರಷ್ಯಾದಲ್ಲಿ ರೂಪೆ ಕಾರ್ಡ್‌ಗಳ ಬಳಕೆಗೆ ಅವಕಾಶ ದೊರೆತರೆ, ಎರಡೂ ದೇಶಗಳ ಪ್ರವಾಸಿಗರಿಗೆ ಹೆಚ್ಚಿನ ಅನುಕೂಲ ಆಗಲಿದೆ. ಉಕ್ರೇನ್ ಮೇಲೆ ಸಮರ ಸಾರಿದ ರಷ್ಯಾ ವಿರುದ್ಧ ಅಮೆರಿಕ ಹಾಗೂ ಇತರ ಹಲವು ದೇಶಗಳು ನಿರ್ಬಂಧಗಳನ್ನು ಹೇರಿದವು. ಇದಾದ ನಂತರದಲ್ಲಿ ವೀಸಾ ಮತ್ತು ಮಾಸ್ಟರ್‌ಕಾರ್ಡ್ ಕಂಪನಿಗಳು ರಷ್ಯಾ ಮಾರುಕಟ್ಟೆಯಿಂದ ಹೊರನಡೆದಿವೆ. ಇದರ ಪರಿಣಾಮವಾಗಿ ಭಾರತದ ಪ್ರವಾಸಿಗರು ರಷ್ಯಾಕ್ಕೆ ತೆರಳಿದಾಗ ಮತ್ತು ರಷ್ಯಾ ಪ್ರವಾಸಿಗರು ಭಾರತಕ್ಕೆ ಬಂದಾಗ ಹಣ ಹಿಂಪಡೆಯುವುದಕ್ಕೆ ಹಾಗೂ ಕಾರ್ಡ್ ಬಳಸಿ ಪಾವತಿ ಮಾಡುವುದಕ್ಕೆ ತೊಂದರೆ ಆಗುತ್ತಿದೆ.

ಮಿಯರ್, ರೂಪೆ ಕಾರ್ಡ್‌ಗಳ ಬಳಕೆಗೆ ಅನುಮತಿ ಕೊಡುವ ಕುರಿತು ಎರಡೂ ದೇಶಗಳ ನಡುವೆ ಮಾತುಕತೆ ನಡೆದಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋಭಾಲ್ ಅವರು ಆಗಸ್ಟ್ 17, 18ರಂದು ರಷ್ಯಾಕ್ಕೆ ಭೇಟಿ ನೀಡಿದ್ದಾಗಲೂ ಈ ಬಗ್ಗೆ ಚರ್ಚೆ ನಡೆದಿದೆ ಎಂದು ಹೇಳಲಾಗಿದೆ.

ದ್ವಿಚಕ್ರ ವಾಹನಕ್ಕೆ ಡಿಕ್ಕಿ: ಮಾಜಿ ಕಾರ್ಪೋರೇಟರ್ ಮಗನ ಕಾರು ಜಪ್ತಿ

ಬೆಂಗಳೂರು: ಹೈಗ್ರೌಂಡ್ಸ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪಘಾತ ಸಂಭವಿಸಿದ್ದು, ಇಬ್ಬರು ಸವಾರರು ಗಾಯಗೊಂಡಿದ್ದಾರೆ. ಅಪಘಾತಕ್ಕೆ ಕಾರಣ ಎನ್ನಲಾದ ಮಾಜಿ ಕಾರ್ಪೊರೇಟರ್ ಮಗ ಜಾಹೀದ್ ಎಂಬುವರ ಕಾರನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

‘ಬಿಬಿಎಂಪಿ ಮನೋರಾಯನಪಾಳ್ಯ ವಾರ್ಡ್‌ನ ಮಾಜಿ ಕಾರ್ಪೊರೇಟರ್ ಅಬ್ದುಲ್ ವಾಜೀದ್ ಅವರ ಮಗ ಜಾಹೀದ್, ಅತೀ ವೇಗವಾಗಿ ಕಾರು ಚಲಾಯಿಸಿ ಅಪಘಾತವನ್ನುಂಟು ಮಾಡಿದ್ದಾರೆ. ಅವರ ಕಾರು ಜಪ್ತಿ ಮಾಡಲಾಗಿದ್ದು, ಗಾಯಾಳುಗಳ ಹೇಳಿಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪಘಾತದಿಂದ ಗಾಯಗೊಂಡಿರುವ ಸವಾರರಾದ ಯಶಗೌಡ ಹಾಗೂ ನಿಖಿತಾ ಅವರನ್ನು ವಿಕ್ರಮ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೋಷಕರ ಜೊತೆ ಮಾತನಾಡಿ ದೂರು ನೀಡುವುದಾಗಿ ಹೇಳಿದ್ದಾರೆ’ ಎಂದೂ ತಿಳಿಸಿವೆ.

ಡಿಕ್ಕಿ ರಭಸಕ್ಕೆ ಬೈಕ್ ಜಖಂ: ‘ಜಾಹೀದ್ ಅವರು ವಿಕ್ರಮ್ ಆಸ್ಪತ್ರೆ ಕಡೆಯಿಂದ ಅತೀ ವೇಗವಾಗಿ ಕಾರು ಚಲಾಯಿಸಿಕೊಂಡು ಅಲಿ ಅಸ್ಕರ್ ರಸ್ತೆಯತ್ತ ಹೊರಟಿದ್ದರು. ಸ್ನೇಹಿತರಾದ ಯಶಗೌಡ ಹಾಗೂ ನಿಖಿತಾ, ವಸಂತನಗರದಲ್ಲಿರುವ ಸಂಬಂಧಿಕರನ್ನು ಭೇಟಿ ಮಾಡಲೆಂದು ಅಲಿ ಅಸ್ಕರ್ ರಸ್ತೆ ಮೂಲಕ ಬೈಕ್‌ನಲ್ಲಿ ತೆರಳುತ್ತಿದ್ದರು.’ ‘ಅಲಿ ಅಸ್ಕರ್ ರಸ್ತೆ ತಿರುವಿನಲ್ಲಿ ಅತೀ ವೇಗವಾಗಿ ಹೊರಟ್ಟಿದ್ದ ಕಾರು, ಬೈಕ್‌ಗೆ ಡಿಕ್ಕಿ ಹೊಡೆದು, ಪಾದಚಾರಿ ಮಾರ್ಗದವರೆಗೂ ಬೈಕ್‌ನ್ನು ಕಾರು ಉಜ್ಜಿಕೊಂಡು ಹೋಗಿತ್ತು. ಪಾದಚಾರಿ ಮಾರ್ಗದಲ್ಲಿದ್ದ ಕಂಬಗಳಿಗೂ ಕಾರು ಗುದ್ದಿತ್ತು. ಅಪಘಾತಲ್ಲಿ ಬೈಕ್ ಭಾಗಶಃ ಜಖಂಗೊಂಡಿದೆ’ ಎಂದೂ ಹೇಳಲಾಗಿದೆ.

ಶಿಕ್ಷಣ

ಕಲಿಕೆಗೆ ಅನುಭವದ ಸ್ಪರ್ಶವಿರಲಿ

ಸಾಂದರ್ಭಿಕ ಚಿತ್ರ

ಆರ್.ಬಿ.ಗುರುಬಸವರಾಜ

ದಿನವೂ ತನ್ನ ತಂದೆ ಜೊತೆಗೆ ಕಿರಾಣಿ ಅಂಗಡಿಗೆ ಹೋಗುವ ಹತ್ತು ವರ್ಷದ ಅಕುಲ್ ಗ್ರಾಹಕರೊಂದಿಗೆ ಹಣದ ವಹಿವಾಟಿನ ಲೆಕ್ಕಾಚಾರವನ್ನು ತಪ್ಪಿಲ್ಲದಂತೆ ಮಾಡುತ್ತಾನೆ. ತಾಯಿಯ ಜೊತೆಗೆ ಆಗಾಗ ಅಡುಗೆ ಕೆಲಸದಲ್ಲಿ ಸಹಾಯ ಮಾಡುತ್ತಲೇ ಹನ್ನೆರಡರ ಹರೆಯದ ಶ್ವೇತ ಅಡುಗೆ ಕೆಲಸವನ್ನೂ ಕಲಿತೆ ಬಿಟ್ಟಳು. ಇದು ಕೇವಲ ಅಕುಲ್ ಮತ್ತು ಶ್ವೇತರ ಕಲಿಕೆಯಲ್ಲ. ಇಂತಹ ಅದೆಷ್ಟೋ ಮಕ್ಕಳು ದೈನಂದಿನ ಅನೌಪಚಾರಿಕ ಚಟುವಟಿಕೆಗಳ ಅನುಭವದ ಮೂಲಕ ಕಲಿಕೆಯನ್ನು ಗಟ್ಟಿಗೊಳಿಸಿಕೊಳ್ಳುತ್ತಾರೆ.

ಇಂದಿನ ಪ್ರಪಂಚವು ಹೆಚ್ಚು ಕ್ರಿಯಾತ್ಮಕ ಹಾಗೂ ಸಂಕೀರ್ಣ ಕಲಿಕೆಯನ್ನು ಬೆಂಬಲಿಸುತ್ತದೆ. ಮಕ್ಕಳು ಸದಾ ಕಲಿಕೆಯಲ್ಲಿರಬೇಕೆಂಬುದು ಬಹುತೇಕ ಪಾಲಕರ ಆಶಯವಾಗಿದೆ. ಮಕ್ಕಳು ಯಾವಾಗಲೂ ಅನುಭವದ ಮೂಲಕ ಕಲಿಯಲು ಇಷ್ಟಪಡುತ್ತಾರೆ. ಅಲ್ಲದೇ ಅನುಭವ ಜನ್ಯ ಕಲಿಕೆಯನ್ನು ಶಿಕ್ಷಣ ತಜ್ಞರು ಹಾಗೂ ಮಕ್ಕಳ ಮನಃಶಾಸ್ತ್ರಜ್ಞರೂ ಬೆಂಬಲಿಸುತ್ತಾರೆ. ಮಕ್ಕಳ ಉತ್ತಮ ಭವಿಷ್ಯಕ್ಕೆ ಅನುಭವ ಜನ್ಯ ಕಲಿಕೆ ಅಗತ್ಯ ಎಂಬುದನ್ನು ಎಲ್ಲಾ ಶಿಕ್ಷಣ ತಜ್ಞರು ತನ್ನ ಕಲಿಕಾ ಸಿದ್ಧಾಂತಗಳ ಮೂಲಕ ಸಾಬೀತುಪಡಿಸಿದ್ದಾರೆ.

ಅನುಭವ ಜನ್ಯ ಕಲಿಕೆ ಎಂದರೆ...

ಹೆಸರೇ ಸೂಚಿಸುವಂತೆ ಅನುಭವದ ಮೂಲಕ ಕಲಿಯುವ ಪ್ರಕ್ರಿಯೆ ಇದು. ಮನಃಶಾಸ್ತ್ರಜ್ಞರಾದ ಡೇವಿಡ್ ಕೋಲ್ಬ್ ಮೊದಲು ಈ ಸಿದ್ಧಾಂತ ಪ್ರತಿಪಾದಿಸಿದರು. 'ಅನುಭವವು ಜ್ಞಾನದ ರೂಪಾಂತರವಾಗಿ ಪರಿವರ್ತನೆ ಆಗುತ್ತದೆ. ಅನುಭವವನ್ನು ಗ್ರಹಿಸುವ ಹಾಗೂ ಪರಿವರ್ತಿಸುವ ಸಂಯೋಜನೆಯಿಂದ ಜ್ಞಾನ ದೊರೆಯುತ್ತದೆ' ಎಂದು ಡೇವಿಡ್ ಕೋಲ್ಬ್ ವ್ಯಾಖ್ಯಾನಿಸಿದ್ದಾರೆ. ಸಾಂಸ್ಕೃತಿಕ ವಿನಿಮಯ, ಹೊರಸಂಚಾರ, ವಸ್ತುಸಂಗ್ರಹಾಲಯಗಳ ಭೇಟಿ, ಪ್ರವಾಸಗಳು, ಪ್ರಯೋಗಗಳು, ಯೋಜನೆ ಆಧಾರಿತ ಕಲಿಕೆಯಂತಹ ಚಟುವಟಿಕೆಗಳು ಅನುಭವ ಜನ್ಯ ಕಲಿಕೆಯನ್ನು ಪ್ರೋತ್ಸಾಹಿಸುತ್ತವೆ.

ಪ್ರಯೋಜನಗಳು

- ನೈಜ ಜಗತ್ತಿನ ಅನುಭವಗಳೊಂದಿಗೆ ಪರಿಕಲ್ಪನೆಗಳನ್ನು ಮಕ್ಕಳಿಗೆ ಕಲಿಸಿದರೆ ಬೇಗನೆ ಅರ್ಥೈಸಿಕೊಳ್ಳುತ್ತಾರೆ. ಉದಾಹರಣೆಗೆ ಬ್ಯಾಂಕಿಂಗ್ ವ್ಯವಹಾರಗಳ ಬಗ್ಗೆ ಮಾಹಿತಿ ನೀಡುವುದಕ್ಕಿಂತ ಮಕ್ಕಳನ್ನೇ ಬ್ಯಾಂಕಿಂಗ್ ವ್ಯವಹಾರಗಳಿಗೆ ಕಳಿಸಬೇಕು. ಆಗ ಪರಿಕಲ್ಪನೆಗಳನ್ನು ಬಹುಬೇಗ ಅರ್ಥ ಮಾಡಿಕೊಳ್ಳುತ್ತಾರೆ.
- ಅನುಭವದ ಮೂಲಕ ಕಲಿಕೆಯುವುದರಿಂದ ಸಮಸ್ಯೆಗೆ ಪರಿಹಾರ ದೊರೆಯುತ್ತದೆ. ಸವಾಲುಗಳನ್ನು ಎದುರಿಸುವ ಕೌಶಲ ಗಳಿಸುತ್ತಾರೆ.
- ಅಮೂರ್ತ ಪರಿಕಲ್ಪನೆಗಳಿಗೆ ಪ್ರಾಯೋಗಿಕ ಅನುಭವ ಬೆರೆಯುವುದರಿಂದ ಕಲಿಕೆ ಸಕಾರಾತ್ಮಕವಾಗಿ ಪ್ರತಿಬಿಂಬಿತವಾಗುತ್ತದೆ. ವೈವಿಧ್ಯಮಯ ಅನುಭವಾತ್ಮಕ ಚಟುವಟಿಕೆಗಳು ಹೊಸ ಹೊಸ ಕಲಿಕೆಯನ್ನು ಉತ್ತೇಜಿಸುತ್ತವೆ.
- ವಿದ್ಯಾರ್ಥಿಗಳು ಕೈಗೆಟುಕುವ ಕಾರ್ಯಗಳಲ್ಲಿ ತೊಡಗುವುದರಿಂದ ಇತರರಿಗಿಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾರೆ. ಸಾಮಾನ್ಯ ತಪ್ಪುಗಳನ್ನು ಮೀರಿ ಬೆಳೆಯುವ ಉತ್ಸಾಹ ತೋರುತ್ತಾರೆ.
- ಜ್ಞಾನ ಮತ್ತು ಕೌಶಲಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಬಳಸುವುದರಿಂದ ಅವರ ವರ್ತನೆಗಳಲ್ಲೂ ಸುಧಾರಣೆಯಾಗುತ್ತದೆ. ಕಲಿಕಾ ಸಂತೃಪ್ತಿಯನ್ನು ಅನುಭವಿಸುತ್ತಾರೆ.

ಕಲಿಕೆಗೆ ಅನುಭವದ ಸಂಯೋಜನೆ ಹೇಗೆ?

- ಸ್ಥಳೀಯ ಕಲಾ ಮತ್ತು ಸಾಂಸ್ಕೃತಿಕ ವೇದಿಕೆಗಳಿಗೆ ಮಕ್ಕಳನ್ನು ಕರೆದೊಯ್ಯಿರಿ. ಅಲ್ಲಿ ಮಕ್ಕಳಿಗೆ ವಿಭಿನ್ನ ಸಂಸ್ಕೃತಿಗಳ ಪರಿಚಯವಾಗುತ್ತದೆ.
- ಮನೆಯೇ ಮಕ್ಕಳ ಕಲಿಕಾ ಪ್ರಯೋಗ ಶಾಲೆಯಾಗಲಿ.
- ಆಗಾಗ್ಗೆ ಕೈಗೊಳ್ಳುವ ಕೌಟುಂಬಿಕ ಪ್ರವಾಸಕ್ಕೆ ಮಕ್ಕಳನ್ನು ಕರೆದೊಯ್ಯಿರಿ. ಪ್ರವಾಸದಲ್ಲಿ ಅವರು ಕೇಳುವ ಪ್ರಶ್ನೆಗಳಿಗೆ ಆತ್ಮೀಯತೆಯಿಂದ ಉತ್ತರಿಸಿ.
- ಸಭೆ ಸಮಾರಂಭಗಳಿಗೂ ಮಕ್ಕಳನ್ನು ಕರೆದೊಯ್ಯಿರಿ. ವೈವಿಧ್ಯಮಯ ಸನ್ನಿವೇಶದಲ್ಲಿ ಸಂವಹನ ಹೇಗೆ ಎಂಬುದನ್ನು ಕಲಿಯುತ್ತಾರೆ.
- ಬೈಕ್/ವಾಹನ ಚಾಲನೆಗೆ ಸತತ ಅಭ್ಯಾಸ ಮತ್ತು ಪ್ರಾಯೋಗಿಕ ಅನುಭವ ಅಗತ್ಯ ಇರುವಂತೆ ಕೆಲವು ಕಲಿಕೆಗೆ ಸತತ ಅನುಭವ ಅಗತ್ಯ. ಉದಾಹರಣೆಗೆ ಗಣಿತದ ಕೆಲವು ಪರಿಕಲ್ಪನೆಗಳು ಶಾಶ್ವತವಾಗಿ ನೆನಪಿನಲ್ಲಿ ಉಳಿಯಲು ಸತತ ಅಭ್ಯಾಸ ಮತ್ತು ಪ್ರಾಯೋಗಿಕ ಅನುಭವ ಅಗತ್ಯ.
- ಮಕ್ಕಳು ಸಂಘಜೀವಿಗಳಾಗಲು ಸಾಮಾಜಿಕವಾಗಿ ಬೆರೆಯಬೇಕು. ಚಿಕ್ಕ ಚಿಕ್ಕ ಗುಂಪುಗಳಲ್ಲಿ ಮಕ್ಕಳನ್ನು ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು.
- ಚಿಕ್ಕ ಚಿಕ್ಕ ಕಲಿಕಾ ಅನುಭವಗಳ ಮೂಲಕ ಸಮಗ್ರ ಕಲಿಕೆಯನ್ನು ಉತ್ತೇಜಿಸಬೇಕು.
- ಪ್ರಾರಂಭದಲ್ಲಿ ನಿರ್ದಿಷ್ಟ ಪರಿಕಲ್ಪನೆಯ ಮೇಲೆ ಮಾತ್ರ ಮಕ್ಕಳು ಗಮನ ಕೇಂದ್ರೀಕರಿಸಿ ಕಲಿಯುವಂತೆ ಉತ್ತೇಜಿಸಿ. ಕ್ರಮೇಣ ಸಂಕೀರ್ಣ ಪರಿಕಲ್ಪನೆಯನ್ನು ಗ್ರಹಿಸಲು ಸಮರ್ಥರಾಗುತ್ತಾರೆ.
- ಯಾವುದೇ ಕಾರಣಕ್ಕೂ ಮಕ್ಕಳ ಕಲಿಕಾ ಚಟುವಟಿಕೆಯನ್ನು ನೀವೇ ಮಾಡಬೇಡಿ. ಮಕ್ಕಳೇ ಚಟುವಟಿಕೆ ಮೂಲಕ ಕಲಿಯಲು ಪ್ರೋತ್ಸಾಹಿಸಿ. ಉದಾಹರಣೆಗೆ, ಶಾಲೆಯಲ್ಲಿ ನೀಡುವ ಪ್ರಾಜೆಕ್ಟ್ ಕೆಲಸಗಳು.
- ಕಲಿಕೆಗೆ ಪೂರಕವಾದ ಚಾರ್ಟ್ಸ್, ಪೋಸ್ಟರ್, ಫ್ಲೋ ಚಾರ್ಟ್, ಫ್ಲಾಶ್ ಕಾರ್ಡ್ ಇತ್ಯಾದಿಗಳನ್ನು ತಯಾರಿಸಿಕೊಳ್ಳಲು ಮಾರ್ಗದರ್ಶನ ಮಾಡಿ. ಅದಕ್ಕೆ ಅಗತ್ಯ ಲೇಖನ ಸಾಮಗ್ರಿಗಳನ್ನು ಒದಗಿಸಿ.

ಕೊನೆಹನಿ : ಪಾಲಕರು ಮಕ್ಕಳ ಕಲಿಕಾ ಚಟುವಟಿಕೆಗೆ ಪೂರಕ ಅವಕಾಶ ಕಲ್ಪಿಸಬೇಕೇ ವಿನಹ ಮಕ್ಕಳ ಕಲಿಕಾ ಚಟುವಟಿಕೆಯನ್ನು ತಾವೇ ಪೂರೈಸಬಾರದು. ❖

‘ಸರಿ ಹೊಂದುವ ಕೋರ್ಸ್ ಆಯ್ಕೆ ಮಾಡಿಕೊಳ್ಳಿ’

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು ಬಿಕಾಂ ಪದವಿ ಮುಗಿಸಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ದೂರ ಶಿಕ್ಷಣದ ಮೂಲಕ ಸ್ನಾತಕೋತ್ತರ ಪದವಿಯನ್ನು ಓದುತ್ತಿದ್ದೇನೆ. ಈಗ ಐಬಿಪಿಎಸ್ ಬ್ಯಾಂಕ್ ಪರೀಕ್ಷೆ ಬರೆಯುವುದು ಸರಿಯೋ ಅಥವಾ ನಾಗರಿಕ ಸೇವಾ ಪರೀಕ್ಷೆ ತೆಗೆದುಕೊಳ್ಳುವುದು ಉತ್ತಮವೋ?

ರಾಜು, ಮಧುಗಿರಿ.

ಈ ಎರಡೂ ವೃತ್ತಿಗಳಿಗೆ ಉಜ್ವಲವಾದ ಭವಿಷ್ಯವಿದೆ. ಯಾವುದೇ ವೃತ್ತಿಯಲ್ಲಿ ಯಶಸ್ಸು ಗಳಿಸಲು ವೃತ್ತಿ ಜ್ಞಾನ ಮತ್ತು ಕೌಶಲಗಳ ಜೊತೆಗೆ ಸಕಾರಾತ್ಮಕ ಆಲೋಚನೆ, ನಿಷ್ಠೆ, ಪ್ರಾಮಾಣಿಕತೆ, ಸ್ವಯಂಪ್ರೇರಣೆ ಮತ್ತು ಆತ್ಮವಿಶ್ವಾಸವಿರಬೇಕು. ಇವನ್ನು ಬೆಳೆಸಿಕೊಂಡರೆ, ಸ್ವಾಭಾವಿಕವಾಗಿಯೇ ನಿಮ್ಮ ಕಾರ್ಯಾಚರಣೆ ನಿರೀಕ್ಷೆಯಂತಿರುತ್ತದೆ ಮತ್ತು ಕಾಲಕ್ರಮೇಣ ವೃತ್ತಿಯಲ್ಲಿ ಯಶಸ್ಸನ್ನು ಗಳಿಸಬಹುದು. ಹಾಗಾಗಿ, ನಿಮಗೆ ಹೆಚ್ಚು ಸರಿಹೊಂದುವ, ಇಷ್ಟಪಡುವ ವೃತ್ತಿಯನ್ನು ಗುರುತಿಸಿ, ಅದರಂತೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗಿ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareerConsultant

2. ನಾನು ಪ್ರೌಢಶಾಲೆಯಲ್ಲಿ ಕನ್ನಡ ಭಾಷೆಯ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ಎಂಎ (ಕನ್ನಡ) ಪದವಿ ಪಡೆದಿದ್ದೇನೆ. ಈಗ ಪತ್ರಿಕೋದ್ಯಮದಲ್ಲಿ ಆಸಕ್ತಿ ಇದೆ. ಹಾಗಾಗಿ ಒಂದು ವರ್ಷದ ಪತ್ರಿಕೋದ್ಯಮ ಪದವಿಯನ್ನು ಮಾಡಲಿಚ್ಛಿಸಿದ್ದೇನೆ. ಇದರಿಂದ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ವರದಿ ಮಾಡಲು ಅನುಕೂಲ ಆಗಬಹುದಾ? ವೃತ್ತಿಯ ಜೊತೆಗೆ ಈ ಪ್ರವೃತ್ತಿಯನ್ನು ಅನುಸರಿಸಬಹುದಾ?

ಹೆಸರು, ಊರು ತಿಳಿಸಿಲ್ಲ.

ನಿಮಗೆ ಪತ್ರಿಕೋದ್ಯಮದಲ್ಲಿ ಆಸಕ್ತಿ ಇರುವುದರಿಂದ ಪದವಿಯ ಜೊತೆಗೆ ಸಂವಹನ (ಓದುವುದು, ಬರವಣಿಗೆ, ಮಾತುಗಾರಿಕೆ, ನಿರೂಪಣೆ ಇತ್ಯಾದಿ), ವಿಶ್ಲೇಷಣಾತ್ಮಕ ಕೌಶಲ, ಸಮಯದ ನಿರ್ವಹಣೆ ಇತ್ಯಾದಿ ಕೌಶಲಗಳನ್ನೂ ಬೆಳೆಸಿಕೊಂಡರೆ, ನೀವು ಮಾಡಬೇಕೆಂದಿರುವ ಇನ್ನಿತರ ಚಟುವಟಿಕೆಗಳಿಗೆ ಸಹಾಯವಾಗುತ್ತದೆ. ವೃತ್ತಿ ಮತ್ತು ಪ್ರವೃತ್ತಿಗಳೆರಡೂ ಬದುಕಿಗೆ ಅವಶ್ಯಕ. ಆಸಕ್ತಿ, ಅಭಿರುಚಿಯಿರುವ ಪ್ರವೃತ್ತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಮುಂದೆ ಪ್ರವೃತ್ತಿಯನ್ನೇ ವೃತ್ತಿಯನ್ನಾಗಿಸಿಕೊಂಡು, ಬದುಕಿನಲ್ಲಿ ಯಶಸ್ಸುಗಳಿಸಿರುವ ಅನೇಕ ಉದಾಹರಣೆಗಳಿವೆ. ಶುಭಹಾರೈಕೆಗಳು.

3. ನಾನು ಬಿಎ (ಸಮಾಜಶಾಸ್ತ್ರ) ಓದುತ್ತಿದ್ದು, ಮುಂದೆ ಎಂಎಸ್‌ಡಬ್ಲ್ಯು ಮಾಡುವ ಆಸೆ ಇದೆ. ಇದನ್ನು ಮಾಡಿದರೆ ಯಾವ ಉದ್ಯೋಗಾವಕಾಶಗಳಿವೆ?

ಬಿ.ಸಿದ್ದರಾಮು, ಬಳ್ಳಾರಿ.

ಒಂದು ಸಂಸ್ಥೆಯ ಅಭಿವೃದ್ಧಿಗಾಗಿ, ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವ ಯೋಜನೆಗಳನ್ನು ರಚಿಸಿ, ಎಲ್ಲಾ ಪ್ರಯತ್ನಗಳನ್ನು ಕೇಂದ್ರೀಕರಿಸಿ, ಯೋಜನೆಗಳನ್ನು ನಿಷ್ಠೆಯಿಂದ ಕಾರ್ಯಗತಗೊಳಿಸುವುದೇ ಆಡಳಿತ ವರ್ಗದ ಮೂಲ ಉದ್ದೇಶ. ಈ ನಿಟ್ಟಿನಲ್ಲಿ, ಮಾನವ ಸಂಪನ್ಮೂಲದ ನಿರ್ವಹಣೆ ಸಂಸ್ಥೆಗಳ ಕಾರ್ಯಾಚರಣೆಯಲ್ಲಿ ಹೆಚ್ಚಿನ ಪ್ರಾಮುಖ್ಯ ಪಡೆದಿದೆ.

ಹಾಗಾಗಿ, ಎಂಎಸ್‌ಡಬ್ಲ್ಯು ಪದವೀಧರರಿಗೆ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ ಮತ್ತು ನಿರ್ವಹಣೆ, ಕಾರ್ಮಿಕ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಮುದಾಯದ ಅಭಿವೃದ್ಧಿ ಇತ್ಯಾದಿ ವಲಯಗಳಲ್ಲಿ ವ್ಯಾಪಕವಾದ ಉದ್ಯೋಗಾವಕಾಶಗಳಿವೆ.

4. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದರೆ ಸರ್ಕಾರಿ ಕೆಲಸಕ್ಕೆ ಅರ್ಜಿ ಸಲ್ಲಿಸಲು ಅರ್ಹರೇ? ಹಾಗೂ ಈ ವಿಶ್ವವಿದ್ಯಾಲಯದ ಮಾನ್ಯತೆ ಬಗ್ಗೆ ತಿಳಿಸಿ.

ಮೃತ್ಯುಂಜಯ ಕಬ್ಬೂರ, ಧಾರವಾಡ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗ (ಯುಜಿಸಿ) ನಿಯಮದ ಪ್ರಕಾರ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್), ಶ್ರೇಣಿಯ ಮಾನ್ಯತೆ ಪಡೆದಿರುವ ಎಲ್ಲ ವಿಶ್ವವಿದ್ಯಾಲಯಗಳಿಗೂ ದೂರ ಶಿಕ್ಷಣ ಕೋರ್ಸ್ ಆರಂಭಿಸಲು ಅನುಮತಿ ನೀಡುತ್ತದೆ ಮತ್ತು ಮಾನ್ಯತೆ ಪಡೆದ ಕೋರ್ಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಸರ್ಕಾರಿ ಉದ್ಯೋಗಗಳಿಗೆ ಅರ್ಹತೆ ಸಿಗುತ್ತದೆ. ಹಾಗಾಗಿ, ವಿಶ್ವವಿದ್ಯಾಲಯಗಳು ದೂರ ಶಿಕ್ಷಣ ಮತ್ತು ಆನ್‌ಲೈನ್ ಮೂಲಕ ನಡೆಸುವ ಕೋರ್ಸ್‌ಗಳಿಗೆ ದೂರ ಶಿಕ್ಷಣ ಬ್ಯೂರೊ, ಯುಜಿಸಿ ಮಾನ್ಯತೆಯನ್ನು ಪಡೆದಿರಬೇಕು.

ಪ್ರತಿ ಶೈಕ್ಷಣಿಕ ವರ್ಷಕ್ಕೆ ಅನುಗುಣವಾಗುವಂತೆ ಮಾನ್ಯತೆ ಪಡೆದಿರುವ ಕೋರ್ಸ್‌ಗಳ ಪಟ್ಟಿಯನ್ನು ದೂರ ಶಿಕ್ಷಣ ಬ್ಯೂರೊ, ಯುಜಿಸಿ ಸಂಸ್ಥೆಯ ಜಾಲತಾಣದಲ್ಲಿ ಪ್ರಕಟಿಸುತ್ತದೆ. ಈ ಜಾಲತಾಣದಲ್ಲಿ ಕಳೆದ ಹಲವು ವರ್ಷಗಳಿಗೆ ಅನ್ವಯವಾಗುವ ಮಾನ್ಯತೆ ಪಡೆದ ಕೋರ್ಸ್‌ಗಳ ಮಾಹಿತಿಯೂ ಲಭ್ಯ. ಉದಾಹರಣೆಗೆ 2022-23ನೇ ಶೈಕ್ಷಣಿಕ ವರ್ಷದಲ್ಲಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 9 ಪದವಿ ಕೋರ್ಸ್‌ಗಳಿಗೂ ಮತ್ತು 33 ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೂ ಮಾನ್ಯತೆ ನೀಡಲಾಗಿದೆ.

ಹಾಗಾಗಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಥವಾ ಯಾವುದೇ ವಿಶ್ವವಿದ್ಯಾಲಯದ ದೂರ ಶಿಕ್ಷಣ/ಆನ್‌ಲೈನ್ ಕೋರ್ಸ್ ಸೇರುವ ಮೊದಲು ಈ ಜಾಲತಾಣದಲ್ಲಿನ ಮಾಹಿತಿಯನ್ನು ಪರಾಮರ್ಶಿಸಿ: https://deb.ugc.ac.in/Search/preview?id = HEI-U-0228

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಚೀವ್ನಿಂಗ್ ಫೆಲೋಷಿಪ್, ಸ್ಕಾಲರ್‌ಷಿಪ್

- **ವಿವರ:** ಚೀವ್ನಿಂಗ್ ಫೆಲೋಷಿಪ್ ಮತ್ತು ಸ್ಕಾಲರ್‌ಷಿಪ್'. ಬ್ರಿಟನ್ (ಯುಕೆ) ಪ್ರಾಯೋಜಿತ ಜಾಗತಿಕ ಮಟ್ಟದ ಕಾರ್ಯಕ್ರಮ. ಭವಿಷ್ಯದ ರೂವಾರಿಗಳು, ಸಾಮಾಜಿಕ ಪರಿಣಾಮ ಬೀರುವ ವ್ಯಕ್ತಿತ್ವ ಹೊಂದಿರುವವರು, ನಿರ್ಣಾಯಕ ಹುದ್ದೆಗೇರಲು ಇಚ್ಛಿಸುವವರ ವೃತ್ತಿ ಕೌಶಲ ಹಾಗೂ ಶೈಕ್ಷಣಿಕ ಅರ್ಹತೆ ಹೆಚ್ಚಿಸುವ ನಿಟ್ಟಿನಲ್ಲಿ ಈ ಫೆಲೋಷಿಪ್ ರೂಪಿಸಲಾಗಿದೆ. ಯುಕೆಯೊಂದಿಗೆ ಸಕಾರಾತ್ಮಕ ಸಂಬಂಧ ಸ್ಥಾಪಿಸುವುದು ಇದರ ಉದ್ದೇಶ. ಭಾರತದಲ್ಲಿ ಪ್ರತಿ ವರ್ಷ 100 ವಿದ್ಯಾರ್ಥಿಗಳು ಈ ಫೆಲೋಷಿಪ್ ಫಲಾನುಭವಿಗಳಾಗುತ್ತಿದ್ದಾರೆ. ಮಾಹಿತಿಗೆ: https://www.chevening.org/scholarship/india ನೋಡಿ.
- **ಅರ್ಹತೆ:** ಪದವಿಯಲ್ಲಿ ಹೆಚ್ಚು ಅಂಕ ಪಡೆದಿರುವ, ಕನಿಷ್ಠ 2 ವರ್ಷ ಉದ್ಯೋಗದ ಅನುಭವವಿರುವವರು ಬ್ರಿಟನ್‌ನಲ್ಲಿ ಮಾನ್ಯತೆ ಪಡೆದ ಯಾವುದೇ ವಿ.ವಿಯಲ್ಲಿ 2023-24ನೇ ಸಾಲಿನ ಒಂದು ವರ್ಷದ ಸ್ನಾತಕೋತ್ತರ ಪದವಿ ಪಡೆಯಲು ಅರ್ಹರು.
- **ಆರ್ಥಿಕ ನೆರವು:** ಕೋರ್ಸ್‌ಗೆ ಅಗತ್ಯವಿರುವ ಹಣಕಾಸಿನ ನೆರವು
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** ನ. 1, 2022

ಫೆಲೋಷಿಪ್

ಚೀವ್ನಿಂಗ್ ಸೈಬರ್ ಸೆಕ್ಯುರಿಟಿ ಫೆಲೋಷಿಪ್

- **ವಿವರ:** ಯುಕೆಯ ಕ್ರಾನ್‌ಫೀಲ್ಡ್ ಯೂನಿವರ್ಸಿಟಿಯಲ್ಲಿ ನಡೆಯುವ ಹತ್ತು ವಾರದ ಅವಧಿಯ ಫೆಲೋಷಿಪ್ ಕಾರ್ಯಕ್ರಮ
- **ಅರ್ಹತೆ:** ಸೈಬರ್ ಸೆಕ್ಯುರಿಟಿ ಕ್ಷೇತ್ರದ ಮಹತ್ವಾಕಾಂಕ್ಷೆಯ, ನಾಯಕತ್ವವುಳ್ಳ ವೃತ್ತಿಪರರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಭಾರತೀಯರಾಗಿರಬೇಕು.
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** ಅಕ್ಟೋಬರ್ 12

ಚೀವ್ನಿಂಗ್ ರಿಸರ್ಚ್, ಸೈನ್ಸ್ ಆ್ಯಂಡ್ ಇನ್ನೋವೇಷನ್ ಲೀಡರ್‌ಷಿಪ್ ಫೆಲೋಷಿಪ್

- **ವಿವರ:** ಆಕ್ಸ್‌ಫರ್ಡ್ ಯೂನಿವರ್ಸಿಟಿಯ 10 ವಾರಗಳ ಫೆಲೋಷಿಪ್ ಕಾರ್ಯಕ್ರಮವಿದು.
- **ಅರ್ಹತೆ:** ಭಾರತೀಯ ಪ್ರಜೆಯಾಗಿರಬೇಕು. ಭಾರತ. ಶ್ರೀಲಂಕಾದಲ್ಲಿ ವಿಜ್ಞಾನ ಹಾಗೂ ಆವಿಷ್ಕಾರ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವೃತ್ತಿಪರರು ಅರ್ಜಿ ಸಲ್ಲಿಸಬಹುದು.
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** ಅ. 12, 2022

ಚೀವ್ನಿಂಗ್ ಸೌತ್ ಏಷ್ಯಾ ಜನರ್ಲಿಸಂ ಫೆಲೋಷಿಪ್

- **ವಿವರ:** ವೆಸ್ಟ್‌ಮಿನಿಸ್ಟರ್ ವಿವಿಯಲ್ಲಿ ಎಂಟು ವಾರಗಳ ಫೆಲೋಷಿಪ್
- **ಅರ್ಹತೆ:** ದಕ್ಷಿಣ ಏಷ್ಯಾ ಭಾಗದಲ್ಲಿ (ಭಾರತ, ಪಾಕಿಸ್ತಾನ, ಶ್ರೀಲಂಕಾ, ಮಾಲ್ಡಿವ್ಸ್ ಮತ್ತು ಬಾಂಗ್ಲಾದೇಶ) ಕಾರ್ಯನಿರ್ವಹಿಸುತ್ತಿರುವ ವೃತ್ತಿಪರ ಪತ್ರಕರ್ತರು ಅರ್ಜಿ ಸಲ್ಲಿಸಬಹುದು.
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** ಅಕ್ಟೋಬರ್ 12, 2022

RAJYA VOKKALIGARA SANGHA (R)

BANGALORE INSTITUTE OF TECHNOLOGY

K.R. Road, V.V. Pura, Bengaluru - 560 004 | www.bit-bangalore.edu.in

Recognised By All India Council for Technical Education (AICTE), New Delhi

Affiliated to Visvesvaraya Technological University (VTU), Belagavi

Accredited by National Board of Accreditation UG Programs (9)

NAAC A+

ADMISSIONS OPEN : 2022-2023

VTU RANKS

Year	Ranks
2020 - 2021	24
2019 - 2020	22
2018 - 2019	25

PROGRAMMES OFFERED

BACHELOR OF ENGINEERING (B.E.)
- Computer Science and Engineering
- Information Science and Engineering
- Artificial Intelligence and Machine Learning
- Computer Science and Engineering (Data Science)
- Computer Science and Engineering (IOT & Cyber Security including Blockchain Technology)
- Electronics and Communication Engineering
- Electronics Engineering (VLSI Design & Technology)
- Electronics and Telecommunication Engineering
- Electronics and Instrumentation Engineering
- Electrical and Electronics Engineering
- Mechanical Engineering
- Robotics and Artificial Intelligence
- Civil Engineering

POST GRADUATE PROGRAMMES
- Master of Computer Applications
- Master of Business Administration

MASTER OF TECHNOLOGY (M.Tech)
- Structural Engineering
- Machine Design
- VLSI Design and Embedded Systems
- Computer Science And Engineering

Ph.D. Programmes & M.Sc Engineering (By Research)
- 13 VTU approved Research Centers

CET CODE : E008 COMED-K : E019

PGCET CODE : MBA - B131

MCA - C411 M.Tech : T812

HIGHLIGHTS IN BIT
- 30+ Student Activity Clubs.
- Innovation & Entrepreneurship Cell to develop leadership qualities in students.
- MOU's with more than 150 companies.
- Excellent placement opportunities with more than 150 companies visiting BIT every year for campus recruitment.
- R&D and Center of Excellence in all the departments.
- Skill Development Lab .
- The Week-Hansa Research Survey-2022 accords, BIT - one among the Top 3 private engineering colleges in Bengaluru.
- Dynamic Professional Body Forum (PBF).
- State of the art infrastructure and highly qualified faculty.
- BIT IPR and Startup Cell.

Highly qualified, experienced and competent teaching faculty

Pioneer in Placements with outstanding track record

1216 Placement Offers during 2021-2022 Highest Salary of ₹ 37.5 LPA during 2022-23

Shri C.N. Balakrishna, President, RVS
Dr. Renukaprasad K.V., Vice President, RVS
Shri D. Hanumanthaiah, Vice President, RVS
Shri T. Konappa Reddy, General Secretary, RVS
Shri Raghavendra, Joint Secretary, RVS
Shri R. Prakash, Treasurer, RVS
Shri M. Puttaswamy, Chairman, GC, BIT
Dr. M.U. Aswath, Principal, BIT

For Admission Contact
+91 94485 12954, 94485 12984
Email : admissionsection@bit-bangalore.edu.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಾನು ಏನು ಮಾಡಬಹುದು ಎಂಬುದು ನನಗೆ ತಿಳಿದಿರುತ್ತದೆ. ಹೀಗಾಗಿ, ಪರಿಸ್ಥಿತಿಯ ಬಗ್ಗೆ ಇತರರು ಏನು ಯೋಚಿಸುತ್ತಾರೆ ಅಥವಾ ಅಭಿಪ್ರಾಯಪಡುತ್ತಾರೆ ಎಂಬುದರ ಬಗ್ಗೆ ನಾನು ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ.

-ಉಸೇನ್ ಬೋಲ್ಟ್

ಬಿಜೆಪಿಯಲ್ಲಿ ಸಂಘಟನಾತ್ಮಕ ಬದಲಾವಣೆ ಕೆಲವು ನೇಮಕ, ಹಲವು ಸಂದೇಶ

ಭಾರತೀಯ ಜನತಾ ಪಕ್ಷದ (ಬಿಜೆಪಿ) ಅತ್ಯುನ್ನತ ನೀತಿ ನಿರೂಪಣಾ ವ್ಯವಸ್ಥೆಗಳಲ್ಲಿ ಈಚೆಗೆ ತಂದಿರುವ ಬದಲಾವಣೆಗಳು ಕೆಲವು ರಾಜ್ಯಗಳನ್ನು ಕೇಂದ್ರವಾಗಿ ಇರಿಸಿಕೊಂಡಿವೆ. ಆ ಮೂಲಕ ಇಡೀ ಪಕ್ಷಕ್ಕೆ ಒಂದು ಸಂದೇಶ ರವಾನಿಸುವ ಉದ್ದೇಶ ಕೂಡ ಬದಲಾವಣೆಗಳ ಹಿಂದೆ ಇರುವಂತಿದೆ. ಸಂಸದೀಯ ಮಂಡಳಿ ಹಾಗೂ ಕೇಂದ್ರ ಚುನಾವಣಾ ಸಮಿತಿಯು ಬಿಜೆಪಿ ಪಾಲಿಗೆ ಅತ್ಯುನ್ನತ ನೀತಿ ನಿರೂಪಣಾ ವ್ಯವಸ್ಥೆಗಳು. ಪಕ್ಷದ ನಾಯಕತ್ವವು ಇವೆರಡನ್ನೂ ಪುನರ್‌ರಚನೆ ಮಾಡಿದೆ. ಪಕ್ಷದ ತಕ್ಷಣದ ಅಗತ್ಯಗಳಿಗೆ ಸ್ಪಂದಿಸುವುದು ಹಾಗೂ ಈಗಿನ ನಾಯಕತ್ವದ ಪ್ರಾಬಲ್ಯವನ್ನು ಮತ್ತೆ ಒತ್ತಿ ಹೇಳುವುದು ಬದಲಾವಣೆಗಳ ಹಿಂದೆ ಇರುವ ಉದ್ದೇಶ. ಒಂದು ವರ್ಷದ ಹಿಂದೆ ಕರ್ನಾಟಕದ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ್ದ ಬಿ.ಎಸ್. ಯಡಿಯೂರಪ್ಪ ಅವರನ್ನು ಸಂಸದೀಯ ಮಂಡಳಿಗೆ ಹಾಗೂ ಕೇಂದ್ರ ಚುನಾವಣಾ ಸಮಿತಿಗೆ ನೇಮಿಸಲಾಗಿದೆ. ಇದರ ಅರ್ಥ, ರಾಜ್ಯದಲ್ಲಿ ಇನ್ನೊಂದು ವರ್ಷದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಯಡಿಯೂರಪ್ಪ ಅವರನ್ನು ನೆಚ್ಚಿಕೊಳ್ಳಲಿದೆ ಎಂಬುದು. ಪ್ರಬಲ ಲಿಂಗಾಯತ ಸಮುದಾಯದ ಪ್ರಮುಖ ನಾಯಕ ಅನ್ನಿಸಿಕೊಂಡಿರುವ ಯಡಿಯೂರಪ್ಪ ಅವರ ಮುಂದಾಳತ್ವ ಇಲ್ಲದೆ ಚುನಾವಣೆಯನ್ನು ಎದುರಿಸುವುದು ಬಿಜೆಪಿ ಪಾಲಿಗೆ ಕಷ್ಟದ ಕೆಲಸ. ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿಯನ್ನಾಗಿಸಿದ ಪ್ರಯೋಗ ವಿಫಲವಾಗಿದೆ ಎಂಬ ಸೂಚನೆಯೂ ಇದರ ಹಿಂದಿದೆ. ಪಕ್ಷದ ರಾಜ್ಯದ ವ್ಯವಹಾರಗಳಲ್ಲಿ ಸಮತೋಲನ ಸಾಧಿಸುವ ಉದ್ದೇಶ ಕೂಡ ಇದರ ಹಿಂದಿರಬಹುದು.

ಪಕ್ಷದ ತಕ್ಷಣದ ಅಗತ್ಯಗಳಿಗೆ ಸ್ಪಂದಿಸುವುದು ಹಾಗೂ ಈಗಿನ ನಾಯಕತ್ವದ ಪ್ರಾಬಲ್ಯವನ್ನು ಮತ್ತೆ ಒತ್ತಿ ಹೇಳುವುದು ಈ ಬದಲಾವಣೆಗಳ ಹಿಂದೆ ಇರುವ ಉದ್ದೇಶ

ಬದಲಾವಣೆ ತರುವ ಸಂದರ್ಭದಲ್ಲಿ ಮಹಾರಾಷ್ಟ್ರ, ಮಧ್ಯಪ್ರದೇಶ, ಈಶಾನ್ಯ ರಾಜ್ಯಗಳ ಪ್ರದೇಶ ಮತ್ತು ತೆಲಂಗಾಣಕ್ಕೆ ವಿಶೇಷ ಆದ್ಯತೆ ದೊರೆತಿದೆ. ಈ ಪ್ರದೇಶಗಳಲ್ಲಿ ಪಕ್ಷಕ್ಕೆ ಈಗ ಇರುವ ಅಗತ್ಯಗಳ ಆಧಾರದಲ್ಲಿ ಬದಲಾವಣೆಗಳು ನಡೆದಿವೆ. ಮಹಾರಾಷ್ಟ್ರದಲ್ಲಿ ದೇವೇಂದ್ರ ಫಡಣವೀಸ್ ಅವರ ಹೆಸರನ್ನು ಗಟ್ಟಿಗೊಳಿಸುವ ಅಗತ್ಯ ಇದೆ. ಅದರಲ್ಲೂ ಮುಖ್ಯವಾಗಿ ಪ್ರಭಾವಿ ಮುಖಂಡ ಹಾಗೂ ಆರ್‌ಎಸ್‌ಎಸ್‌ಗೆ ಹತ್ತಿರದವರು ಎನ್ನಲಾಗುವ ಸಚಿವ ನಿತಿನ್ ಗಡ್ಕರಿ ಅವರನ್ನು ಸಂಸದೀಯ ಮಂಡಳಿಯಿಂದ ಕೈಬಿಟ್ಟ ಕಾರಣಕ್ಕೆ ಕೂಡ ಫಡಣವೀಸ್ ಅವರನ್ನು ಚುನಾವಣಾ ಸಮಿತಿಗೆ ನೇಮಕ ಮಾಡಿರುವುದು ಮಹತ್ವ ಪಡೆಯುತ್ತದೆ. ಶಿವರಾಜ್ ಸಿಂಗ್ ಚೌಹಾಣ್ ಅವರನ್ನೂ ಸಂಸದೀಯ ಮಂಡಳಿಯಿಂದ ಕೈಬಿಡಲಾಗಿದೆ. ನರೇಂದ್ರ ಮೋದಿ ಅವರು ಪಕ್ಷದಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರವರ್ಧಮಾನಕ್ಕೆ ಬರುವ ಮೊದಲಿನಿಂದಲೂ ಚೌಹಾಣ್ ಅವರು ಪ್ರಮುಖ ಸ್ಥಾನ ಹೊಂದಿದ್ದವರು. ಮಧ್ಯಪ್ರದೇಶದಲ್ಲಿ ಮುಂದಿನ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬೇರೊಬ್ಬ ನಾಯಕನನ್ನು ಮುನ್ನೆಲೆಗೆ ತರಬೇಕಾಗಬಹುದು. ಬುಡಕಟ್ಟು ಸಮುದಾಯದ ನಾಯಕ ಸರ್ವಾನಂದ ಸೋನೋವಾಲ್ ಅವರಿಗೆ ಪ್ರಮುಖ ಹುದ್ದೆ ನೀಡಿರುವುದರ ಹಿಂದೆ ಬುಡಕಟ್ಟು ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಈಶಾನ್ಯ ರಾಜ್ಯಗಳಲ್ಲಿ ಪಕ್ಷದ ವರ್ಚಸ್ಸು ವೃದ್ಧಿಯ ಲೆಕ್ಕಾಚಾರ ಇದೆ. ದಕ್ಷಿಣ ಭಾರತದಲ್ಲಿ ಮುಂದಿನ ಹಂತದಲ್ಲಿ ಬಿಜೆಪಿಯು ತೆಲಂಗಾಣ ರಾಜ್ಯದ ಮೇಲೆ ಕಣ್ಣಿಟ್ಟಿದ್ದು, ಆ ರಾಜ್ಯದ ಕೆ. ಲಕ್ಷ್ಮಣ್ ಅವರಿಗೆ ಪ್ರಮುಖ ಸ್ಥಾನ ನೀಡಿದೆ. ಪಕ್ಷದ ಪ್ರಮುಖ ಮಂಡಳಿ, ಸಮಿತಿಗಳಲ್ಲಿ ಈಗ ಹಿಂದುಳಿದ ಸಮುದಾಯಗಳಿಗೆ ಸೇರಿದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದು ಕೂಡ ಬಿಜೆಪಿಯ ಕಾರ್ಯತಂತ್ರವನ್ನು ಸೂಚಿಸುತ್ತಿದೆ. ಸಾಮಾಜಿಕ ವಾಸ್ತವಗಳು ಹಾಗೂ ಚುನಾವಣಾ ಅಗತ್ಯಗಳನ್ನು ಪಕ್ಷವು ಗುರುತಿಸಿದೆ. ಅಷ್ಟೇ ಅಲ್ಲ, ಬದಲಾಗುತ್ತಿರುವ ಅಗತ್ಯಗಳಿಗೆ ತಕ್ಕಂತೆ ತನ್ನ ಕಾರ್ಯತಂತ್ರವನ್ನು ಕೂಡ ಅದು ಬದಲಿಸಿಕೊಳ್ಳುತ್ತಿದೆ.

ಈಗ ತಂದಿರುವ ಸಂಘಟನಾತ್ಮಕ ಬದಲಾವಣೆಗಳಲ್ಲಿ ಇರುವ ಅತಿ ಮಹತ್ವದ ಸಂದೇಶ ಎಂದರೆ, ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಪ್ರಾಬಲ್ಯವು ಪಕ್ಷದೊಳಗೆ ಮುಂದುವರಿಯಲಿದೆ ಎಂಬುದು. ಸಚಿವರಾಗಿ ದಕ್ಷ ಎಂದು ಕರೆಸಿಕೊಂಡಿರುವ ಗಡ್ಕರಿ ಅವರನ್ನು ಹಾಗೂ ಚೌಹಾಣ್ ಅವರನ್ನು ಕೈಬಿಟ್ಟಿರುವುದು ಇದಕ್ಕೆ ಸಾಕ್ಷಿ. ಇವರಿಬ್ಬರೂ ತಾವು ಈಗ ಹೊಂದಿರುವ ಸ್ಥಾನದ ಆಚೆಗೂ ಮಹತ್ವಾಕಾಂಕ್ಷೆ ಬೆಳೆಸಿಕೊಂಡಿದ್ದರು ಎಂಬ ಮಾತು ಇದೆ. ಕಟ್ಟರ್ ಹಿಂದುತ್ವವಾದಿಗಳ ಪೈಕಿ ಹಲವರು 'ಹಿಂದೂ ಹೃದಯ ಸಾಮ್ರಾಟ' ಎಂದು ಭಾವಿಸಿರುವ, ಮುಂದೊಂದು ದಿನ ಪ್ರಧಾನಿ ಆಗುವ ನಾಯಕ ಎಂದು ಬಿಂಬಿತವಾಗಿರುವ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಸ್ಥಾನ ಕಲ್ಪಿಸದಿರುವುದರ ಹಿಂದೆಯೂ ಒಂದು ಸಂದೇಶ ಇದೆ. ಈಗ ಹಾಗೂ ಸದ್ಯೋಭವಿಷ್ಯತ್ತಿನಲ್ಲಿ ಅತ್ಯುನ್ನತ ಹುದ್ದೆ ಇತರರಿಗೆ ಇಲ್ಲ ಎಂಬುದು ಆ ಸಂದೇಶ.

ದಿನದ ಟ್ವೀಟ್

ಸ್ಪರ್ಧೆ ಮಾಡಿ

ಹಣಕಾಸಿನ ಸ್ವಾತಂತ್ರ್ಯ ಬೇಗ ಸಿಗಬೇಕು ಎಂದಾದರೆ, ಉಳಿತಾಯದ ವಿಚಾರದಲ್ಲಿ ಇತರರ ಜೊತೆ ಸ್ಪರ್ಧೆ ಮಾಡಿ; ಖರ್ಚು ಮಾಡುವ ವಿಚಾರದಲ್ಲಿ ಅಲ್ಲ.

ಡಿ.ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ

ಆದಾಯಕ್ಕೆ ತೆರಿಗೆ ವಿಧಿಸಲಾಗುತ್ತದೆ. ವೆಚ್ಚಕ್ಕೆ ತೆರಿಗೆ ವಿಧಿಸಲಾಗುತ್ತದೆ, ಉಳಿತಾಯದ ಮೇಲಿನ ಬಡ್ಡಿಗೆ ತೆರಿಗೆ ವಿಧಿಸಲಾಗುತ್ತದೆ (ಒಂದು ಮಿತಿಯನ್ನು ದಾಟಿದ ಮೊತ್ತಕ್ಕೆ), ಆರೋಗ್ಯ ವಿಮಾ ಕಂತುಗಳಿಗೆ ತೆರಿಗೆ ವಿಧಿಸಲಾಗುತ್ತದೆ, ಅಕ್ಕಿ, ಮೊಸರು, ಬೇಳೆಕಾಳುಗಳಿಗೆ ತೆರಿಗೆ ವಿಧಿಸಲಾಗುತ್ತದೆ, ಹೂಡಿಕೆಯ ಮೇಲಿನ ಆದಾಯಕ್ಕೆ ತೆರಿಗೆ ವಿಧಿಸಲಾಗುತ್ತದೆ. ಈಗ, ಯುಪಿಐ ವಹಿವಾಟುಗಳಿಗೂ ತೆರಿಗೆ ವಿಧಿಸಲು ನೀವು ಯೋಜಿಸುತ್ತಿರುವಿರಾ? ಖರೀದಿಸುವ ವಸ್ತುಗಳಿಗೆ ನಾವು ಜಿಎಸ್‌ಟಿ ಕಟ್ಟುವುದಿಲ್ಲವೇ?

ಅಕ್ಷಯ್ ಕಶ್ಯಪ್, ನಾಗರಿಕ

25 ವರ್ಷಗಳ ಹಿಂದೆ

ಶುಕ್ರವಾರ, 22-8-1997

• ದಳ ಹಿತಕ್ಕಾಗಿ ಎಪಿಎಂಸಿ ನಾಮಕರಣ– ಪಟೇಲ್

ಬೆಂಗಳೂರು, ಆಗಸ್ಟ್ 21– ಜನತಾದಳದ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದಲೇ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮೂವರು ಸದಸ್ಯರನ್ನು ನಾಮಕರಣ ಮಾಡುವ ಸಂಬಂಧ ಸುಗ್ರೀವಾಜ್ಞೆ ಹೊರಡಿಸಿದ್ದು ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಇಂದು ವಿಧಾನಸಭೆಯಲ್ಲಿ ಒಪ್ಪಿಕೊಂಡರು.

'ನಾಮಕರಣ ವಿಷಯದ ಸಂಬಂಧ ವಿರೋಧಪಕ್ಷದ ನಾಯಕರು ಹಾಗೂ ಸದಸ್ಯರು ಹೇಳಿದ ತತ್ವಕ್ಕೆ ನಾನು ಬದ್ಧ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾಮಕರಣ ಅಪಸ್ವರ. ಆದರೆ ಸರ್ಕಾರ ಒಂದು ರಾಜಕೀಯ ಪಕ್ಷದ್ದು, ಆಡಳಿತದ ಚುಕ್ಕಾಣಿ ಹಿಡಿದಿರುವ ಜನತಾದಳ ಪಕ್ಷದ ಮುಖಂಡನಾಗಿ ಆ ಪಕ್ಷದ ಹಿತಾಸಕ್ತಿಯನ್ನು ಕಾಪಾಡಲು ನಾನು ಬದ್ಧನಾಗಿದ್ದೇನೆ' ಎಂದು ಹೇಳಿದರು.

ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂದು ಮುಖ್ಯಮಂತ್ರಿಗಳು ಖಡಾಖಂಡಿತವಾಗಿ ನಿರಾಕರಿಸಿದ ನಂತರ ನಿನ್ನೆಯಿಂದ ಆರಂಭಿಸಿದ ಧರಣಿಯನ್ನು ಕಾಂಗ್ರೆಸ್ ಸದಸ್ಯರು ಅಸಮಾಧಾನದಿಂದಲೇ ವಾಪಸು ಪಡೆದರು.

'ರೈತರಿಗಾಗಿ ಕೆಲಸ ಮಾಡಲು ನಾವು ನಮಗೆ ಬೇಕಾದವರನ್ನು ಆರಿಸಿಕೊಳ್ಳುತ್ತೇವೆ. ಆಡಳಿತ ನಡೆಸುತ್ತಿರುವ ನಮ್ಮ ಮೇಲೆ ಒತ್ತಡವಿದೆ. ಪಕ್ಷದ ಹಿತರಕ್ಷಣೆಗಾಗಿ ಈ ಕ್ರಮ ತೆಗೆದುಕೊಂಡಿದ್ದೇವೆ' ಎಂದು ಪಟೇಲ್ ಸಮರ್ಥಿಸಿಕೊಂಡರು.

• ಉಪರಾಷ್ಟ್ರಪತಿ ಕೃಷ್ಣಕಾಂತ್ ಪ್ರಮಾಣವಚನ

ನವದೆಹಲಿ, ಆಗಸ್ಟ್ 21 (ಪಿಟಿಐ): ಹಿರಿಯ ಸ್ವಾತಂತ್ರ್ಯಯೋಧ ಹಾಗೂ ಸಮಾಜವಾದಿ ಚಿಂತನೆಯ ಕೃಷ್ಣಕಾಂತ್ (70) ಅವರು ರಾಷ್ಟ್ರದ 10ನೇ ಉಪರಾಷ್ಟ್ರಪತಿಯಾಗಿ ಇಂದು ಪ್ರಮಾಣವಚನ ಸ್ವೀಕರಿಸಿದರು.

ಕಳೆದ ಏಳು ವರ್ಷಗಳಿಗೂ ಹೆಚ್ಚು ಕಾಲದಿಂದ ಆಂಧ್ರಪ್ರದೇಶದ ರಾಜ್ಯಪಾಲರಾಗಿದ್ದ ಕೃಷ್ಣಕಾಂತ್ ಅವರಿಗೆ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಪ್ರಮಾಣ ವಚನ ಬೋಧಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 22-8-1972

• ಹರಿಜನ, ಕೃಷಿ ಕಾರ್ಮಿಕರಿಗೆ ಉಚಿತ ನಿವೇಶನಕ್ಕಾಗಿ ಹತ್ತು ವರ್ಷದ ಭಾರಿ ಯೋಜನೆ

ನವದೆಹಲಿ, ಆಗಸ್ಟ್ 21– ಮೂವತ್ತು ಲಕ್ಷ ಮಂದಿ ಭೂರಹಿತ ಹರಿಜನ–ಗಿರಿಜನರಿಗೆ ಹಾಗೂ ಇತರ 20 ಲಕ್ಷ ಮಂದಿ ಭೂರಹಿತ ಕೃಷಿ ಕಾರ್ಮಿಕರಿಗೆ ಬರುವ ಹತ್ತು ವರ್ಷಗಳಲ್ಲಿ ನಿವೇಶನ ಒದಗಿಸಲು 375 ಕೋಟಿ ರೂ. ವೆಚ್ಚದ ಯೋಜನೆ ಕೈಗೊಳ್ಳಬೇಕೆಂದು ರಾಷ್ಟ್ರೀಯ ಕೃಷಿ ಆಯೋಗ ಶಿಫಾರಸು ಮಾಡಿದೆ.

ಇಂದು ಸರ್ಕಾರಕ್ಕೆ ಸಲ್ಲಿಸಲಾದ ಆಯೋಗದ ಮಧ್ಯಂತರ ವರದಿಯಲ್ಲಿ ಪ್ರತೀ ವರ್ಷವೂ ಮೂರು ಲಕ್ಷ ಹರಿಜನ–ಗಿರಿಜನ ಸಂಸಾರಗಳಿಗೆ, ಭೂರಹಿತ ಕೃಷಿ ಕಾರ್ಮಿಕರ 2 ಲಕ್ಷ ಸಂಸಾರಗಳಿಗೆ ಮನೆ ಕಟ್ಟಲು ನಿವೇಶನ ಒದಗಿಸಬೇಕೆಂದು ತಿಳಿಸಿದೆ.

ಹರಿಜನ–ಗಿರಿಜನ ಸಂಸಾರಗಳಿಗೆ 22 ಕೋಟಿ 50 ಲಕ್ಷ ರೂ. ಗಳು, ಇತರ ಕೃಷಿಕಾರ್ಮಿಕ ಸಂಸಾರಗಳಿಗೆ 15 ಕೋಟಿ ರೂ.ಗಳು ವಾರ್ಷಿಕವಾಗಿ ವೆಚ್ಚ ತಗುಲಬಹುದೆಂದು ಆಯೋಗ ಅಂದಾಜು ಮಾಡಿದೆ. ಬಡಜನತೆಗೆ ಉಚಿತ ನಿವೇಶನ ಯೋಜನೆ ಜತೆಗೆ ಅರಣ್ಯ ಸಂಪನ್ಮೂಲದ ಸೂಕ್ತ ಬಳಕೆ, ಮಣ್ಣಿನ ಗುಣ ತಿಳಿಸುವ ಭಾರತ ಭೂಪಟ ತಯಾರಿಕೆ ಹಾಗೂ ಆಲೂಗಡ್ಡೆ ಬೀಜೋತ್ಪಾದನೆ ಕುರಿತ ಯೋಜನೆಗಳು ಆಯೋಗದ ವರದಿಯಲ್ಲಿವೆ.

ಗ್ರಾಮ ಪಂಚಾಯಿತಿಗಳಿಗೆ ವೇಗದ ಇಂಟರ್‌ನೆಟ್ ಸೌಲಭ್ಯ ಕಲ್ಪಿಸುವ ಯೋಜನೆಯ ವೇಗ ಆಮೆಗತಿಯದು!

ತೆವಳುತ್ತಿದೆ 'ಭಾರತ್‌ನೆಟ್' ಸಂಪರ್ಕ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ದೇಶದ ಪ್ರತೀ ಹಳ್ಳಿಯನ್ನು ಇಂಟರ್‌ನೆಟ್ ಸಂಪರ್ಕದಲ್ಲಿ ಇರಿಸಬೇಕೆಂಬ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ನಿರೀಕ್ಷಿಸಿದಷ್ಟು ಪ್ರಗತಿ ಕಂಡಿಲ್ಲ. ಎರಡೂವರೆ ಲಕ್ಷಕ್ಕೂ ಹೆಚ್ಚು ಪಂಚಾಯಿತಿಗಳ ಮೂಲಕ ದೇಶದ ಆರು ಲಕ್ಷ ಹಳ್ಳಿಗಳನ್ನು ಇಂಟರ್‌ನೆಟ್ ಜಾಲಕ್ಕೆ ತರುವ ಕೇಂದ್ರ ಸರ್ಕಾರದ ಪ್ರಯತ್ನ ಮೊದಲು 2011ರಲ್ಲಿ ನ್ಯಾಷನಲ್ ಆಪ್ಟಿಕಲ್ ಫೈಬರ್ ನೆಟ್‌ವರ್ಕ್ (ಎನ್‌ಒಎಫ್‌ಎನ್) ಹೆಸರಿನಲ್ಲಿ ಪ್ರಾರಂಭವಾಯಿತು.

ಗ್ರಾಮೀಣ ಆರ್ಥಿಕತೆಯನ್ನು ಬಲಗೊಳಿಸಲು, ಉದ್ಯೋಗ ಸೃಷ್ಟಿಸಲು ಮತ್ತು ಹಳ್ಳಿಯ ಜನ ನಗರಗಳಿಗೆ ವಲಸೆ ಬರುವುದನ್ನು ತಡೆಯಲು ರೂಪಿಸಿದ ಯೋಜನೆ ಇದಾಗಿತ್ತು. 2012ರಲ್ಲಿ ಭಾರತ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ಲಿಮಿಟೆಡ್ (ಬಿಬಿಎನ್‌ಎಲ್) ಎಂಬ ಸರ್ಕಾರಿ ಸ್ವಾಮ್ಯದ ಕಂಪನಿಯನ್ನು ಪ್ರಾರಂಭಿಸಿದ ಕೇಂದ್ರ ಸರ್ಕಾರವು ದೇಶದ ಎಲ್ಲ ಪಂಚಾಯಿತಿಗಳಿಗೆ 2013ರ ವೇಳೆಗೆ ಇಂಟರ್‌ನೆಟ್ ಸಂಪರ್ಕ ಕಲ್ಪಿಸುವ ನೀಲನಕ್ಷೆ ತಯಾರಿಸಿತ್ತು.

ಅತ್ಯಂತ ಉತ್ಸಾಹದಿಂದ ಶುರುವಾದ ಕೆಲಸದ ಫಲವಾಗಿ ಒಂದು ವರ್ಷದ ಅವಧಿಯಲ್ಲಿ ಒಂದು ಲಕ್ಷ ಪಂಚಾಯಿತಿಗಳು ಇಂಟರ್‌ನೆಟ್ ಸಂಪರ್ಕ ಪಡೆದವು. ನಂತರ ಅದೇ ವೇಗ ಉಳಿಯಲಿಲ್ಲ. 2014ರಲ್ಲಿ ಅಧಿಕಾರಕ್ಕೆ ಬಂದ ಎನ್‌ಡಿಎ ನೇತೃತ್ವದ ಸರ್ಕಾರವು ನ್ಯಾಷನಲ್ ಆಪ್ಟಿಕಲ್ ಫೈಬರ್ ನೆಟ್‌ವರ್ಕ್ ಅನ್ನು 'ಭಾರತ್‌ನೆಟ್' ಎಂದು ಕರೆದು, ನ್ಯಾಷನಲ್ ಡಿಜಿಟಲ್ ಕಮ್ಯುನಿಕೇಷನ್ ಪಾಲಿಸಿಯಂತೆ ಪ್ರತೀ ಗ್ರಾಮ ಪಂಚಾಯಿತಿಗೆ ಪ್ರತೀ ಸೆಕೆಂಡಿಗೆ 1 ಜಿಬಿ ಮಾಹಿತಿ ರವಾನಿಸುವ ಇಲ್ಲವೇ ಪಡೆಯುವ ವೇಗದ ಇಂಟರ್‌ನೆಟ್ ಕೊಡಬೇಕೆಂದು ಯೋಜನೆ ರೂಪಿಸಿತು. ಗ್ರಾಮ ಪಂಚಾಯಿತಿಗಳಿಗೆ ವೇಗದ ಇಂಟರ್‌ನೆಟ್ ಕಲ್ಪಿಸುವ ಯೋಜನೆ ಅನುಷ್ಠಾನಕ್ಕೆ ಈ ಹಿಂದಿನ ಯುಪಿಎ ನೇತೃತ್ವದ ಸರ್ಕಾರ ಹಾಗೂ ಇಂದಿನ ಎನ್‌ಡಿಎ ನೇತೃತ್ವದ ಸರ್ಕಾರವು ಅದೆಷ್ಟೇ ಪ್ರಯತ್ನಿಸಿದರೂ ಆಗಿರುವ ಕೆಲಸ ಶೇ 55ರಷ್ಟು ಮಾತ್ರ.

ಯೋಜನೆ ಪ್ರಾರಂಭವಾದಾಗ ಅಂದಾಜುವೆಚ್ಚ ₹ 20,100 ಕೋಟಿ ಇತ್ತು. ಈಗ ಅದು ₹ 60,100 ಕೋಟಿಗೆ ತಲುಪಿದೆ. ಬಿಬಿಎನ್‌ಎಲ್‌ನ ಅಸಮರ್ಥ ಕಾರ್ಯವೈಖರಿಯಿಂದಾಗಿ ವೆಚ್ಚ ಮೂರು ಪಟ್ಟು ಹೆಚ್ಚಾಗಿದ್ದು, ಜನರ ತೆರಿಗೆಯ ಹಣ ಅನವಶ್ಯಕವಾಗಿ ಖರ್ಚಾಗುತ್ತಿದೆ. ಈಗಾಗಲೇ ಏಳು ಗಡುವುಗಳನ್ನು ನೀಡಲಾಗಿದ್ದರೂ ಕೆಲಸ ಪೂರ್ತಿಯಾಗಿಲ್ಲ. ಆರ್ಥಿಕತೆಯ ಜೊತೆಗೆ ಗ್ರಾಮೀಣ ವಿದ್ಯಾರ್ಥಿಗಳ ಶಿಕ್ಷಣಕ್ಕೂ ಇದರಿಂದ ಭಾರಿ ಹಿನ್ನಡೆಯಾಗಿದೆ.

ಕೋವಿಡ್ ಉಲ್ಬಣಿಸಿದ ಸಂದರ್ಭದಲ್ಲಿ ದೇಶದ 24.7 ಕೋಟಿ ಮಕ್ಕಳು ಆನ್‌ಲೈನ್ ಪಾಠ ಕೇಳಿಸಿಕೊಳ್ಳಲು, ನೋಡಲು ಪಡಬಾರದ ಪಾಡುಪಟ್ಟರು. ಜನವರಿ ತಿಂಗಳಿನಲ್ಲಿ ಯುನಿಸೆಫ್ ಬಿಡುಗಡೆ ಮಾಡಿದ ವರದಿಯ ಪ್ರಕಾರ, ಗ್ರಾಮೀಣ ಪ್ರದೇಶಗಳ ಶೇ 76ರಷ್ಟು ಮನೆಗಳಿಗೆ ಇಂಟರ್‌ನೆಟ್ ಸಂಪರ್ಕ ಇರಲಿಲ್ಲ. ಅಂಥ ಮನೆಗಳ ಮಕ್ಕಳೆಲ್ಲ ಯಾವುದೇ ಶಿಕ್ಷಣ ಇಲ್ಲದೆ ಕಾಲ ದೂಡುವಂತಾಗಿತ್ತು. ಇಂಟರ್‌ನೆಟ್ ಸಂಪರ್ಕವಿರದ ಹಳ್ಳಿಗಳಿಗೆ ಕೋವಿಡ್ ಲಸಿಕೆ ವಿತರಣೆಯ ಕೆಲಸಕ್ಕೂ ಅಡ್ಡಿಯಾಗಿತ್ತು. ಫೆಬ್ರುವರಿಯಲ್ಲಿ ಬಜೆಟ್ ಮಂಡಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇದನ್ನು ಲೋಕಸಭೆಗೆ ತಿಳಿಸಿದ್ದರು. ಹಳ್ಳಿಯ ಮಕ್ಕಳಿಗೆ ಇಂಟರ್‌ನೆಟ್ ಆಧಾರಿತ ಶಿಕ್ಷಣ ಮತ್ತು ಎಲ್ಲ ಗ್ರಾಮ ಪಂಚಾಯಿತಿಗಳ ಡಿಜಿಟಲೀಕರಣ ಯಶಸ್ವಿಯಾಗದಿರುವುದು ಸರ್ಕಾರಕ್ಕೆ ಆತಂಕ ಮೂಡಿಸಿದೆ.

ಮೊದಲ ಹಂತದಲ್ಲಿ ದೇಶದ 2,64,176 ಗ್ರಾಮ ಪಂಚಾಯಿತಿ ಹಾಗೂ ಬ್ಲಾಕ್‌ಲೆವೆಲ್ ವಿತರಣಾ ಕೇಂದ್ರಗಳ ನಡುವೆ ನೆಲದಡಿ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಹಾಕಬೇಕಿತ್ತು. ಇದುವರೆಗೂ 1,70,463 ಗ್ರಾಮ ಪಂಚಾಯಿತಿಗಳು ಸೌಲಭ್ಯ ಪಡೆದುಕೊಳ್ಳಲು ಯಶಸ್ವಿಯಾಗಿವೆಯಾದರೂ ಪೂರ್ಣ ಪ್ರಮಾಣದ ಕಾರ್ಯ ಚಟುವಟಿಕೆ ನಡೆಯುತ್ತಿಲ್ಲ. ಮಾಹಿತಿ ತಂತ್ರಜ್ಞಾನ ಮತ್ತು ಸಂಪರ್ಕ ಕುರಿತಾದ 29ನೇ ಸ್ಥಾಯಿ ಸಮಿತಿಯ ವರದಿ ಸಹ ಭಾರತ್‌ನೆಟ್‌ನ ಕೆಲಸದ ವೇಗವು ಅಂದುಕೊಂಡ ಗುರಿ ಸಾಧನೆಗೆ ಸಾಲದು ಎಂದು ಹೇಳಿರುವುದಲ್ಲದೆ, 65,000 ಗ್ರಾಮ ಪಂಚಾಯಿತಿಗಳ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳೇ ವಹಿಸಿಕೊಂಡಿರುವುದು ಮತ್ತೊಂದು ಅಡ್ಡಿ ಎಂದಿದೆ.

ಶೇ 55ರಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಇಂಟರ್‌ನೆಟ್ ಸೌಲಭ್ಯ ಸರಿಯಾಗಿ ಕೆಲಸ ಮಾಡುತ್ತಿದೆ ಎಂದು ಬಿಬಿಎನ್‌ಎಲ್ ವರದಿ ಹೇಳುತ್ತದೆ. ಆದರೆ ವಾಸ್ತವ ಬೇರೆಯೇ ಇದೆ ಎಂದು ಫಲಾನುಭವಿಗಳು ಹೇಳುತ್ತಾರೆ. ಸಿಕ್ಕಿಂ, ಮೇಘಾಲಯ, ಮಿಜೊರಾಂ, ನಾಗಾಲ್ಯಾಂಡ್, ಮಣಿಪುರ ಮತ್ತು ಅರುಣಾಚಲ ಪ್ರದೇಶದಲ್ಲಿ ಅತೀ ಕಡಿಮೆ ಸಂಖ್ಯೆಯ ಗ್ರಾಮ ಪಂಚಾಯಿತಿಗಳಲ್ಲಿ ಕ್ರಿಯಾತ್ಮಕ ಇಂಟರ್‌ನೆಟ್ ಸೇವಾ ಸೌಲಭ್ಯವಿದೆ. ಉತ್ತರಪ್ರದೇಶದ ಪ್ರತೀ ನಾಲ್ಕು ಪಂಚಾಯಿತಿಗಳ ಪೈಕಿ ಮೂರರಲ್ಲಿ ಕ್ರಿಯಾತ್ಮಕ ಇಂಟರ್‌ನೆಟ್ ಸೌಲಭ್ಯ ಇಲ್ಲ. ದೇಶದ 12 ರಾಜ್ಯಗಳಲ್ಲಿ ಅರ್ಧದಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಇದೇ ಪರಿಸ್ಥಿತಿ ಇದೆ. ನೀಡಲಾದ ಮೂಲ ಸೌಕರ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಪಂಚಾಯಿತಿಗಳು ಶ್ರಮವಹಿಸಬೇಕು ಎಂಬ ಅಭಿಪ್ರಾಯ ಸ್ಥಾಯಿ ಸಮಿತಿಯ ವರದಿಯಲ್ಲಿ ವ್ಯಕ್ತವಾಗಿದೆ.

ಭಾರತ್‌ನೆಟ್ ಪ್ರಾರಂಭವಾದ ವರ್ಷ ವಿಶ್ವಬ್ಯಾಂಕ್ ತನ್ನ ವರದಿಯಲ್ಲಿ, ಇಂಟರ್‌ನೆಟ್ ಬಳಸುವವರ ಸಂಖ್ಯೆ ಶೇ 10ರಷ್ಟು ಹೆಚ್ಚಾದರೆ ದೇಶದ ಜಿಡಿಪಿ ಶೇ 1.5ರಷ್ಟು ಹೆಚ್ಚುತ್ತದೆ ಎಂದಿತ್ತು. ಅಂದುಕೊಂಡ ಗುರಿ ಸಾಧನೆಯಾಗದ ಕಾರಣ ಯೋಜನೆಯ ಗಡುವನ್ನು ಮತ್ತೊಮ್ಮೆ, ಮಗದೊಮ್ಮೆ, ಇನ್ನೊಮ್ಮೆ ಎಂದು ಏಳು ಬಾರಿ ವಿಸ್ತರಿಸಲಾಗಿದೆ. 2025ಕ್ಕೆ ಕೆಲಸ ಮುಗಿಸಲೇಬೇಕು, ಎಲ್ಲ ಗ್ರಾಮ ಪಂಚಾಯಿತಿಗಳಲ್ಲೂ ಪ್ರತೀ ಸೆಕೆಂಡಿಗೆ 10 ಜಿಬಿ ವೇಗದ ಇಂಟರ್‌ನೆಟ್ ಇರಲೇಬೇಕು ಎಂಬ ಕಟ್ಟುನಿಟ್ಟಿನ ಆದೇಶವೂ ಹೊರಬಿದ್ದಿದೆ.

ಯೋಜನೆಯ ಅನುಷ್ಠಾನವು ಬಿಬಿಎನ್‌ಎಲ್ ಒಂದರಿಂದಲೇ ಸಾಧ್ಯವಿಲ್ಲ ಎಂದು ಅರಿತ ಕೇಂದ್ರ, ಬಿಬಿಎನ್‌ಎಲ್ ಅನ್ನು ಬಿಎಸ್‌ಎನ್‌ಎಲ್ ನೊಂದಿಗೆ ವಿಲೀನಗೊಳಿಸಲಾಗುವುದು ಎಂದು ಮಾರ್ಚ್ ತಿಂಗಳಲ್ಲಿ ಪ್ರಕಟಿಸಿತು. ಇದರಿಂದ ಕ್ರಾಂತಿಕಾರಕ ಬದಲಾವಣೆಯೇನೂ ಆಗದು ಎಂಬ ಅಭಿಪ್ರಾಯ ತಜ್ಞರದ್ದು. ಸ್ಥಾಯಿ ಸಮಿತಿ ಸಹ ಇದರಿಂದ ಹೆಚ್ಚಿನ ಸಾಧನೆಯೇನೂ ಆಗದು, ಬಿಎಸ್‌ಎನ್‌ಎಲ್‌ನ ಇದುವರೆಗಿನ ಕಾರ್ಯವೈಖರಿಯಿಂದ ಇದು ನಮಗೆ ತಿಳಿದಿದೆ ಎಂದು ಹೇಳಿರುವುದು ಸರ್ಕಾರಕ್ಕೆ ಮುಜುಗರ ಉಂಟು ಮಾಡಿದೆ.

ಭಾರತ್‌ನೆಟ್‌ನ ಸೇವಾ ಗುಣಮಟ್ಟದ ಕುರಿತು ದೇಶದಾದ್ಯಂತ ದೂರುಗಳು ಕೇಳಿಬಂದಿವೆ. ಸಂಪರ್ಕ ಕಡಿತ, ದೂರುಗಳನ್ನು ಬಗೆಹರಿಸದಿರುವುದು, ರಿಪೇರಿ ಕೆಲಸ ಸರಿಯಾದ ಸಮಯದಲ್ಲಿ ಆಗದಿರುವುದು ಪಂಚಾಯಿತಿಗಳ ನೆಮ್ಮದಿ ಕೆಡಿಸಿದೆ. ಪ್ರತೀ ಕೆಲಸಕ್ಕೂ ಖಾಸಗಿ ಕಂಪನಿಗಳನ್ನು ನೆನಪು ಮಾಡಿಕೊಳ್ಳುತ್ತಿದ್ದ ಸರ್ಕಾರ, ಹಲವರನ್ನು ಸಂಪರ್ಕಿಸಿತ್ತು. ಈಗಾಗಲೇ ಬಿಬಿಎನ್‌ಎಲ್ ಮಾಡಿರುವ ಅರ್ಧ ಕೆಲಸವನ್ನು ಮುಂದುವರಿಸಲು ಇಷ್ಟಪಡದ ಕಂಪನಿಗಳು ಟೆಂಡರ್‌ಗೆ ಪ್ರತಿಕ್ರಿಯೆಯನ್ನೇ ನೀಡಲಿಲ್ಲ.

ಬಿಎಸ್‌ಎನ್‌ಎಲ್ ಮತ್ತು ಬಿಬಿಎನ್‌ಎಲ್ ಜೊತೆಯಾಗಿ ಕೆಲಸ ಮಾಡುತ್ತಿರುವುದು ಇದೇ ಮೊದಲೇನಲ್ಲ. ಆದರೆ ಪರಿಣಾಮಕಾರಿ ಕೆಲಸ ಮಾಡಿದ ಪುರಾವೆಗಳಿಲ್ಲ. ಒಂದು ಲಕ್ಷಕ್ಕೂ ಹೆಚ್ಚು ಪಂಚಾಯಿತಿಗಳಿಗೆ ಒಎಫ್‌ಸಿ ಹಾಕಿಕೊಡುವ ಕೆಲಸವನ್ನು ಬಿಎಸ್‌ಎನ್‌ಎಲ್‌ಗೆ ಒಪ್ಪಿಸಿದ್ದ ಬಿಬಿಎನ್‌ಎಲ್, ಬಿಎಸ್‌ಎನ್‌ಎಲ್‌ನ ನಿಧಾನಗತಿಯ ಕಾರ್ಯವೈಖರಿಯಿಂದ ಬೇಸತ್ತು ಗುತ್ತಿಗೆಯನ್ನು ಹಿಂಪಡೆದಿತ್ತು. ನಿಧಾನವಾದರೂ ಈಗಾಗಲೇ 20 ಲಕ್ಷ ಗ್ರಾಹಕರಿಗೆ ಎಫ್‌ಟಿಟಿಎಚ್ (ಫೈಬರ್ ಟು ದ ಹೋಮ್) ಇಂಟರ್‌ನೆಟ್ ಸೇವೆ ನೀಡುತ್ತಿರುವ ಬಿಎಸ್‌ಎನ್‌ಎಲ್, ಭಾರತ್‌ನೆಟ್ ಅನ್ನು ಹಳ್ಳಿಹಳ್ಳಿಗೂ ತಲುಪಿಸಬಹುದು ಎಂಬ ಆಶಾಭಾವದಿಂದ ಮತ್ತೆ ಎರಡನ್ನೂ ಸೇರಿಸಲಾಗಿದೆ.

ಭಾರತದ ಆರ್ಥಿಕತೆಗೆ ಮುಳುವಾಗಿರುವ ಐದು ಪ್ರಮುಖ ಅಂಶಗಳ ಪೈಕಿ ಡಿಜಿಟಲ್ ಅಸಮಾನತೆ ಮತ್ತು ಡಿಜಿಟಲ್ ಆಡಳಿತ ಕೊರತೆಗಳೂ ಪ್ರಮುಖವಾಗಿವೆ ಎಂಬ ಅಂಶ 'ವರ್ಲ್ಡ್ ಎಕನಾಮಿಕ್ ಫೋರಂ'ನ ಈ ವರ್ಷದ ಗ್ಲೋಬಲ್ ರಿಸ್ಕ್ ರಿಪೋರ್ಟ್‌ನಲ್ಲಿ ಇದೆ. 2025ರ ವೇಳೆಗೆ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಗುರಿ ಸಾಧನೆಗೆ ಇದು ದೊಡ್ಡ ಅಡ್ಡಿಯಾಗಲಿದೆ ಎಂಬ ಮಾತು ದೇಶದ ಆರ್ಥಿಕ ತಜ್ಞರ ಚರ್ಚೆಗಳಲ್ಲಿ ಕೇಳಿಬರುತ್ತಿದೆ.

ಚುರುಮುರಿ

ಮೊಟ್ಟೆ ನಮ್ಮದಲ್ಲ!

• ಸುಮಂಗಲಾ

ಬೆಕ್ಕಣ್ಣ ಬೆಳಗ್ಗೆಯೇ ಮೊಬೈಲು ಹಿಡಿದು ಕಮಲಕ್ಕನ ಮನೆ ಕೋಳಿಗಳಿಗೆ ಕರೆ ಮಾಡಿ ವಿಚಾರಣೆಯಲ್ಲಿ ತೊಡಗಿತ್ತು.

'ಏನವ್ವಾ... ಸಿದ್ದಣ್ಣನ ಮ್ಯಾಗೆ ಎಸೆದ ಮೊಟ್ಟೆ ನಿಮ್ಮ ಕೋಳಿಗೂಡಿನದಂತೆ...'

ಬೆಕ್ಕಣ್ಣನ ಮಾತು ಮುಗಿಯುವ ಮೊದಲೇ ಕಮಲಕ್ಕನ ಮನೆ ಕೋಳಿಗಳ ಕೊಕ್ಕೋಕ್ಕೋ ಅಳು ಕೇಳಿತು.

'ಇಲ್ಲ ಬೆಕ್ಕಣ್ಣ, ಆ ಮೊಟ್ಟೆ ನಮ್ಮ ಗೂಡಿಂದಲ್ಲ... ಕೈಮನೆಯವ್ರ ಕೋಳಿ ಗೂಡಿಂದಲೇ ಎತ್ತಿಕೊಂಡು, ಅವರ ಕಡೆಯವರೇ ಯಾರೋ ಬೇಕಂತಲೇ ಸಿದ್ದಣ್ಣನ ಮ್ಯಾಗೆ ಬಿಸಾಕವ್ರೆ'.

ಬೆಕ್ಕಣ್ಣನ ಮುಂದಿನ ಕರೆ ಕೈಮನೆಯ ಕೋಳಿಗಳಿಗೆ.

'ಆಣೆ ಮಾಡಿ ಹೇಳ್ತೀವಿ, ಆ ಮೊಟ್ಟೆ ನಮ್ಮ ಗೂಡಿಂದಲ್ಲ. ಅದು ಕಮಲಕ್ಕನ ಮನೆ ಕೋಳಿ ಗೂಡಿಂದೇ. ನಮ್ ಕೋಳಿಗೂಡಿನ ಮೊಟ್ಟೇನ ನಮ್ ಸಿದ್ದಣ್ಣಂಗೆ ತಿನ್ನಾಕೆ ಕೊಡ್ತೀವೇ ಹೊರತು ಮೈಮ್ಯಾಗೆ ಬಿಸಾಕಾಕೆ ಯಾಕೆ ಕೊಡ್ತೀವಿ?' ಕೈಮನೆಯ ಕೋಳಿಗಳು ವದರಿದವು.

ಬೆಕ್ಕಣ್ಣನ ತಲೆ ಕೆಟ್ಟುಹೋಯಿತು. ಎರಡೂ ಬಣದ ಕೋಳಿಗಳಿಗೆ ಸಂಜೆ ಒಂದು ಆನ್‌ಲೈನ್ ವಿಚಾರಣೆ ಇಟ್ಟುಕೊಂಡಿತು.

'ಅಲ್ಲ... ಸಿದ್ದಣ್ಣನ ಮ್ಯಾಗೆ ಎಸೆದಿದ್ದ ಮೊಟ್ಟೆ ನಮ್ಮ ಗೂಡಿಂದಲ್ಲ ಅಂತ ನೀವಿಬ್ಬರೂ ವಾದಿಸ್ತೀರಿ. ಹಂಗಾರೆ ಅದೇನು ಮೇಡ್ ಇನ್ ಚೈನಾ ಮೊಟ್ಟೆನಾ ಅಥವಾ ಯಾವುದೋ ಬ್ಯಾರೆ ಗ್ರಹದಿಂದ ಉದುರಿತಾ?' ಎರಡೂ ಬಣದ ಕೋಳಿಗಳು ಕಕಮಕ ನೋಡಿದವು.

'ಮೊಟ್ಟೆ ಎಸೆದೋನು ನಾ ಕೈಕಾರ್ಯಕರ್ತ ಅಂತ ಹೇಳ್ಯಾನೆ, ಹಿಂಗಾಗಿ ಅದು ಕೈಕೋಳಿ ಗೂಡಿಂದೇ ಮೊಟ್ಟೆ' ಕಮಲಕ್ಕನ ಗೂಡಿನ ಕೋಳಿಗಳ ವಾದ.

'ಮೊಟ್ಟೆ ಎಸೆದವನನ್ನ ನಿಮ್ಮವ್ರು ಯಾಕೆ ರಾತ್ರೋರಾತ್ರಿ ಜೈಲಿಂದ ಬಿಡಿಸಿಕೊಂಡು ಬಂದವ್ರೆ? ಮೊಟ್ಟೆ ನಿಮ್ ಕೋಳಿಗೂಡಿಂದೇ' ಕೈ ಕೋಳಿಗಳು ಇನ್ನಷ್ಟು ಜೋರಾಗಿ ವಾದಿಸಿದವು.

'ನೀವ್ಯಾಕೆ ಮೈಮೇಲೆ ಎಸೆಯುವಂಥ ಮೊಟ್ಟೆ ಇಡ್ತೀರಲೇ... ಇನ್ನು ಮ್ಯಾಗೆ ಮೊಟ್ಟೆನೇ ಇಡದೆ ನೇರ ಮರಿ ಮಾಡಕ್ಕೆ ಶುರು ಮಾಡಿ' ವಾದ ಕೇಳಿ ಬೇಸತ್ತ ಬೆಕ್ಕಣ್ಣನ ಸಲಹೆ.

ಎರಡೂ ಬಣದ ಕೋಳಿಗಳು ಮುಖಮುಖ ನೋಡಿಕೊಂಡು ಕೊಕ್ ಕೊಕ್ ಎಂದು ನಕ್ಕವು!

ಸಂಗತ

ಜಾನಪದಕ್ಕೊಂದು ದಿನವೇ?

ಜನಪದ ಆಕರಗಳಿಂದ ಕಲಬೆರಕೆ ಆಕರಗಳನ್ನು ಬೇರ್ಪಡಿಸಲು ಮತ್ತು ಜನಪದ ಕುರಿತ ತಿಳಿವಳಿಕೆಯ ವಿಸ್ತರಣೆಗಾಗಿ ವಿಶ್ವ ಜಾನಪದ ದಿನದ ಅಗತ್ಯವಿದೆ

• ಅರುಣ್ ಜೋಳದಕೂಡ್ಲಿಗಿ

ಆಗಸ್ಟ್ 22, ಜಗತ್ತಿನ ಜನಪದ ವಿದ್ವಾಂಸರಿಗೆ ಒಂದು ಅವಿಸ್ಮರಣೀಯ ದಿನ. ಕಾರಣ, ವಿಲಿಯಂ ಜಾನ್ ಥಾಮ್ಸ್ ಎಂಬ ಬ್ರಿಟಿಷ್ ಪ್ರಾಚೀನ ಅನ್ವೇಷಕ ಅಂಬ್ರೋಸ್ ಮೆರ್ಟಾನ್ ಎನ್ನುವ ಗುಪ್ತ ನಾಮದಲ್ಲಿ 1846ರ ಆಗಸ್ಟ್ 12ರಂದು 'ದಿ ಅಥೇನಿಯಂ' ಎನ್ನುವ ಪತ್ರಿಕೆಗೆ ಒಂದು ಪತ್ರ ಬರೆಯುತ್ತಾನೆ. ಈ ಪತ್ರ ಅದೇ ತಿಂಗಳ 22ರಂದು ಪ್ರಕಟವಾಗುತ್ತದೆ. ಪತ್ರದಲ್ಲಿ 'ದಾಸ್ ವೋಕ್' ಮತ್ತು 'ಜನಪ್ರಿಯ ಪಳೆಯುಳಿಕೆ' ಎಂದು ಕರೆಯುತ್ತಿದ್ದ ಜನರ ಪರಂಪರೆಯ ಸಂಗತಿಗಳ ಅಧ್ಯಯನಕ್ಕೆ 'ಫೋಕ್‌ಲೋರ್' ಎಂದು ಕರೆಯಬಹುದೆಂದು ಸೂಚಿಸಿದ. 'ಫೋಕ್' ಎಂದರೆ ಜನ, 'ಲೋರ್' ಎಂದರೆ ಆ ಜನರ ಜ್ಞಾನ ಅಥವಾ ತಿಳಿವಳಿಕೆ ಎಂದು ವಿವರಿಸುತ್ತಾನೆ.

ಆಗ ಮೊದಲ ಬಾರಿಗೆ 'FOLKLORE' ಎನ್ನುವ ಪದವು ಮುದ್ರಿತ ರೂಪದಲ್ಲಿ ಅಕಡೆಮಿಕ್ ವಲಯದ ಬಳಕೆಗೆ ಬರುತ್ತದೆ. ಈ ಚಾರಿತ್ರಿಕ ದಿನದ ನೆನಪಿಗಾಗಿ ಆ ದಿನವನ್ನು ವಿಶ್ವ ಜಾನಪದ ದಿನವನ್ನಾಗಿ ಆಚರಿಸುತ್ತಾ ಬರಲಾಗಿದೆ. ಇಂದಿಗೆ 'ಫೋಕ್‌ಲೋರ್' ಪದವು ಬಳಕೆಗೆ ಬಂದು 176 ವರ್ಷಗಳಾದವು.

ಹಾಗಾದರೆ ಜಾನಪದಕ್ಕೊಂದು ದಿನ ಬೇಕೇ ಎನ್ನುವ ಪ್ರಶ್ನೆ ಮೂಡುತ್ತದೆ. ಜಾನಪದ ಎಂದರೆ ಎಲ್ಲೋ ಹೊರಗಿರುವ ಜನಪದ ಕತೆ, ಗೀತೆ, ಕಲಾ ಪ್ರಕಾರಗಳು ಮಾತ್ರವಲ್ಲ, ಕ್ಷಣ ಕ್ಷಣವೂ ಲೋಕವನ್ನು ನೋಡುವ ನೋಟಕ್ರಮವನ್ನು ನಿರ್ದೇಶಿಸುತ್ತಲೇ ಬಹುಸಂಖ್ಯಾತ ಜನರಲ್ಲಿ ಅಡಗಿ ಕೂತ ಪರಂಪರೆಯ ಬೇರುಗಳ ಮೊತ್ತ ಎಂದು ಕರೆಯಬಹುದು. ಹಾಗಾಗಿ ಸಾಂಕೇತಿಕವಾಗಿ ಜಾನಪದಕ್ಕೆ ಒಂದು ದಿನ ಇರಬಹುದು. ಆದರೆ ಜಾನಪದದ ಬೇರುಗಳು ಕ್ಷಣಕ್ಷಣವೂ ಬಹುಜನರಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿರುತ್ತವೆ. ಹಾಗಿದ್ದೂ ವಿಶ್ವ ಜಾನಪದ ಎಂದು ನೋಡುವಾಗ, ಅಧಿಕಾರರಹಿತ ಸಾಮಾನ್ಯ ತಳವರ್ಗದ ಬಹುಸಂಖ್ಯಾತ ಜನರ ಅಭಿವ್ಯಕ್ತಿ ಮಾಧ್ಯಮ ಎಂದು ಗುರುತಿಸಬಹುದು.

ಕಣ್ಣಿಗೆ ಕಾಣುವ, ಸ್ಪರ್ಶಕ್ಕೆ ಸಿಗುವ, ಕೇಳಿಸಿಕೊಳ್ಳಲು ಸಾಧ್ಯವಾಗುವ, ದಿನದ ಬದುಕಿಗೆ ನೆರವಾಗುವ ವಿದ್ಯಮಾನಗಳನ್ನು ಆದಿಮ ಜನರು ಕೃತಜ್ಞತೆಯಿಂದ ಆರಾಧಿಸತೊಡಗಿದರು. ಅಂತೆಯೇ ಯಾವುದು ತಿಳಿವಿಗೆ ನಿಲುಕುವುದಿಲ್ಲವೋ ಯಾವುದು ನಿಗೂಢವೋ ಅಂಥವುಗಳ ಬಗೆಗೆ ಭಯಮಿಶ್ರಿತ ಅತಿಮಾನುಷ ಕಥನಗಳನ್ನು ಕಟ್ಟಿಕೊಂಡರು. ನಿಸರ್ಗಾರಾಧನೆ ರೂಪುಗೊಂಡದ್ದು ಹೀಗೆ. ಈ ಎಲ್ಲದರ ಒಳಗೂ ಇರುವ ಸಾಮಾನ್ಯ ಎಳೆ ಎಂದರೆ ನಿಸರ್ಗಸತ್ಯವನ್ನು ಕತೆ, ಗೀತೆ, ಗಾದೆ, ಒಗಟು, ಕಲೆ ಮುಂತಾಗಿ ಕಟ್ಟಿಕೊಂಡದ್ದು.

ಇದೇ ಜನರ ಮಾಧ್ಯಮವಾದ ಜನಪದದಲ್ಲಿ ಆಳುವ ವರ್ಗಗಳು, ಪ್ರಬಲ ಜಾತಿಗಳು, ಪ್ರಭಾವಿ ಶಕ್ತಿಗಳು ತಮಗೆ ಬೇಕಾದ ಒಪ್ಪಿಗೆಯನ್ನು ಪಡೆಯಲು ಸುಳ್ಳುಕಥನ, ಪುರಾಣ, ವಿಧಿನಿಷೇಧಗಳನ್ನು ಬೆರೆಸಿದವು. ಹಾಗಾಗಿ ನಮಗೆ ಲಭ್ಯವಿರುವ ಜಾನಪದ ಆಕರಗಳು ಜನರ ನಿಸರ್ಗಸತ್ಯ ಮತ್ತು ಆಳುವ ವರ್ಗಗಳು ಈ ಜನಪದ ಮಾಧ್ಯಮದಲ್ಲಿ ತುರುಕಿದ ಸುಳ್ಳುಗಳ ಮಿಶ್ರಣವಾಗಿದ್ದು ಒಂದರೊಳಗೊಂದು ಬೆರೆತಿವೆ. ಹಾಗಾಗಿಯೇ ಜನಪದವೆಂದರೆ, ಬಹುಪಾಲು ಯಥಾಸ್ಥಿತಿಯನ್ನು ಮುಂದುವರಿಸುವ ಪ್ರಭಾವಿ ವಾಹಕವಾಗಿದೆ.

ಅಂತೆಯೇ ಜಾತಿ, ಲಿಂಗ, ವರ್ಗ, ವರ್ಣಭೇದಗಳು ವಾರ್ಷಿಕವಾಗಿ ಜಾತ್ರೆ, ತೇರು, ಫೆಸ್ಟಿವಲ್‌ಗಳ ಹೆಸರಲ್ಲಿ ಪುನರ್ ನವೀಕರಣಗೊಳ್ಳುತ್ತವೆ. ಆದರೆ ಬಹುಪಾಲು ಸಂಸ್ಕೃತಿ ಚಿಂತಕರು, ಅಧ್ಯಯನಕಾರರು, ವಿಶ್ಲೇಷಕರು ಈ ಕಲಬೆರಕೆ ಆಕರಗಳನ್ನು ಸ್ವತಃ ಜನರೇ ಕಟ್ಟಿದ್ದಾರೆ ಎಂದು ಮೈದುಂಬಿ ವರ್ಣಿಸಿರುವುದು ಹೆಚ್ಚು. ಕುವೆಂಪು ಹೇಳುವಂತೆ, ಜನಪದ ಆಕರಗಳನ್ನು ಸೋಸಿ ಕಸ, ಕಡ್ಡಿ, ಕಲ್ಲು ಮಣ್ಣನ್ನು ಬೇರ್ಪಡಿಸಬೇಕಿದೆ. ಇಂತಹ ತಿಳಿವಳಿಕೆಯ ವಿಸ್ತರಣೆಗಾಗಿ ವಿಶ್ವ ಜಾನಪದ ದಿನದ ಅಗತ್ಯವಿದೆ.



ಬ್ರೆಜಿಲ್ ಸರ್ಕಾರವು ಆಗಸ್ಟ್ 22 ಅನ್ನು 'ಫೋಕ್‌ಲೋರ್ ಡೇ' ಎಂದು 1965ರ ಆಗಸ್ಟ್ 17ರಂದು ಅಧಿಕೃತವಾಗಿ ಘೋಷಿಸಿತು. ಅಲ್ಲಿ ಪ್ರತಿವರ್ಷ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಭಾರತದಲ್ಲಿ ಕೇರಳ, ತಮಿಳುನಾಡು, ಕರ್ನಾಟಕ ಒಳಗೊಂಡಂತೆ ಕೆಲವು ರಾಜ್ಯಗಳು 2015ರ ನಂತರ ವಿಶ್ವ ಜಾನಪದ ದಿನವನ್ನು ಆಚರಿಸುತ್ತಿವೆ. ಆದರೆ ಈತನಕ ವಿಶ್ವಸಂಸ್ಥೆಯಾಗಲೀ ಅದರ ಅಂಗಸಂಸ್ಥೆ ಯುನೆಸ್ಕೊ ಆಗಲೀ ವಿಶ್ವ ಜಾನಪದ ದಿನಕ್ಕೆ ಮಾನ್ಯತೆ ನೀಡಿಲ್ಲ. ಇದೀಗ ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ ಇಂತಹದ್ದೊಂದು ಸುವರ್ಣಾವಕಾಶ ಇದೆ. ವಿಶ್ವ ಜಾನಪದ ದಿನದ ಅಧಿಕೃತ ಆಚರಣೆಗಾಗಿ ವಿಶ್ವವಿದ್ಯಾಲಯವು ರಾಜ್ಯ ಮತ್ತು ಕೇಂದ್ರ ಸರ್ಕಾರದ ಮೂಲಕ ಯುನೆಸ್ಕೊ ಮತ್ತು ವಿಶ್ವಸಂಸ್ಥೆಗೆ 'ವಿಶ್ವ ಜಾನಪದ ದಿನ'ವನ್ನು ಅಧಿಕೃತವಾಗಿ ಘೋಷಿಸಲು ವಿಶ್ವಜನರ ಪರವಾಗಿ ಹಕ್ಕೊತ್ತಾಯ ಮಂಡಿಸಬಹುದಾಗಿದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ವಾಚಕರ ವಾಣಿ

ರಾಜಕೀಯ ಅಸ್ತ್ರ: ಎಚ್ಚೆತ್ತುಕೊಳ್ಳುವ ಅನಿವಾರ್ಯ

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿಯ ಸರ್ಕಾರಿ ಉರ್ದು ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸಿ ಸಂಭ್ರಮಪಟ್ಟಿರುವ ಕುರಿತ ವರದಿ (ಪ್ರ.ವಾ., ಆ. 20) ಓದಿ ಕಣ್ತುಂಬಿ ಬಂತು. ಇತ್ತ ಜನಸಾಮಾನ್ಯರು ಯಾವುದೇ ಧರ್ಮದ ಬಂಧನವಿಲ್ಲದೆ ಒಟ್ಟಾಗಿ ಹಬ್ಬದ ಸಂಭ್ರಮಾಚರಣೆ ಮಾಡುತ್ತಿರುವಾಗ, ರಾಜಕೀಯ ವ್ಯಕ್ತಿಗಳು ಜನರಲ್ಲಿ ವಿಷಬೀಜ ಬಿತ್ತಿ, ಎರಡೂ ಧರ್ಮದವರು ಪರಸ್ಪರ ಸಂದೇಹದಿಂದ ನೋಡುವಂತೆ ಮಾಡುತ್ತಿದ್ದಾರೆ.

ಯಾರೋ ಕಿಡಿಗೇಡಿಗಳು ವಿಕೃತಿ ಮೆರೆದು ಸಮಾಜದ ಶಾಂತಿ ಕೆಡಿಸುವ ಕೆಲಸ ಮಾಡಿದಾಗ, ರಾಜಕೀಯ ಪಕ್ಷಗಳು ಅದನ್ನೇ ಬಂಡವಾಳ ಮಾಡಿಕೊಳ್ಳಲು ಪ್ರಯತ್ನಿಸುವುದು ಇತ್ತೀಚೆಗೆ ಹೊಸ ಅಸ್ತ್ರವಾಗಿ ಪರಿಣಮಿಸಿರುವುದೂ ಸತ್ಯ. ಜನಸಾಮಾನ್ಯರು ಈಗ ಎಚ್ಚೆತ್ತುಕೊಳ್ಳುವುದು ಅನಿವಾರ್ಯ.

ಪ್ರಸನ್ನ ಗಣಪತಿ ಎ.ಎಚ್., ಬೆಂಗಳೂರು

ಹೋದಲ್ಲೆಲ್ಲಾ ಪ್ರತಿಭಟನೆ: ಚರ್ಚೆಗೆ ಒಳಪಡಲಿ

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಳೆಹಾನಿ ಪ್ರದೇಶಗಳ ವೀಕ್ಷಣೆಗೆ ಹೋದಲ್ಲೆಲ್ಲಾ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿರುವುದನ್ನು ನೋಡಿದರೆ, ನಾವು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಇದ್ದೇವೆಯೋ ಅಥವಾ ಸರ್ವಾಧಿಕಾರಿ ಆಡಳಿತದ ಅಡಿಯಲ್ಲಿಯೋ ಎಂಬ ಅನುಮಾನ ಮೂಡುತ್ತದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಮೊನ್ನೆಯಷ್ಟೇ ಆಚರಿಸಿ, ಪ್ರತೀ ಮನೆಯ ಮೇಲೆ ತ್ರಿವರ್ಣ ಧ್ವಜ ಹಾರಿಸಿದ್ದೇವೆ. ಹಾಗಾದರೆ ಸಂವಿಧಾನ ನಮಗೆ ಕೊಟ್ಟಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಅಡಿಯಲ್ಲಿ ನಮಗೆ ನಮ್ಮ ಅಭಿಪ್ರಾಯವನ್ನು ಮಂಡಿಸುವ ಸ್ವಾತಂತ್ರ್ಯ ಇಲ್ಲವೇ?! ಸಾವರ್ಕರ್ ಅವರ ಬಗ್ಗೆ ಸಿದ್ದರಾಮಯ್ಯ ಅವರು ಆಡಿದ ಮಾತುಗಳು ಏನೇ ಇರಬಹುದು. ಅದು ಅವರ ಅಭಿಪ್ರಾಯ. ಅದನ್ನು ಬೇರೆಯವರು ಒಪ್ಪಲೇಬೇಕು ಎಂದೇನಿಲ್ಲ. ಅದರ ಬಗ್ಗೆ ವಿರೋಧ ದಾಖಲಿಸಲು ಬೇರೆ ಮಾರ್ಗಗಳಿವೆ, ಅವಕಾಶ ಇದೆ. ಅದು ಬಿಟ್ಟು ವಿರೋಧ ಪಕ್ಷದ ನಾಯಕ ಹೋದಲ್ಲೆಲ್ಲಾ ಈ ರೀತಿ ಪ್ರತಿಭಟನೆ ನಡೆಸುವುದು ಎಷ್ಟು ಸರಿ ಎಂಬುದರ ಬಗ್ಗೆ ಚರ್ಚೆ ಆಗಲಿ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಶಾಲಾ ಸ್ಥಿರಾಸ್ತಿ ಅಕ್ರಮಕ್ಕೆ ಕೊನೆಯುಂಟೇ?

ಸರ್ಕಾರಿ ಕನ್ನಡ ಶಾಲೆಗಳ ಕುಸಿಯುತ್ತಿರುವ ಕಟ್ಟಡಗಳನ್ನು ಕುಸಿಯಲು ಬಿಟ್ಟು, ಒಳಗಣ ಮತ್ತು ಸುತ್ತಲಿನ ಅಮೂಲ್ಯ ಮೈದಾನಗಳನ್ನು ಕಬಳಿಸಲು ಬಿಟ್ಟು, 'ನಮ್ಮ ಶಾಲೆಗಳಿಗೆ ಮಕ್ಕಳು ಬರುತ್ತಿಲ್ಲ' ಎಂದು ಸಬೂಬು ಹೇಳುತ್ತಿರುವ ಸರ್ಕಾರವು ಕರ್ನಾಟಕದ ಇಂದಿನ ಮತ್ತು ಮುಂದಿನ ಹಿತವನ್ನು ಸಂಪೂರ್ಣವಾಗಿ ಮರೆತಂತಿದೆ. ಕನ್ನಡ ಮಾಧ್ಯಮ ಶಾಲೆಗಳ ಗುಣಮಟ್ಟವನ್ನು ಬಹಳ ವ್ಯವಸ್ಥಿತವಾಗಿ ಕುಸಿಯುವಂತೆ ಮಾಡಿರುವ ಮತ್ತು ಮಹಾರಾಜರ ಕಾಲದ ಶಾಲಾ ಸ್ಥಿರಾಸ್ತಿಗಳನ್ನು ಕಳೆಯುತ್ತಿರುವ ಸರ್ಕಾರಿ ಮತ್ತು ಖಾಸಗಿ ಅಕ್ರಮಗಳಿಗೆ ಕೊನೆಯುಂಟೇ?

ಶ್ರೀಕಂಠ, ಬೆಂಗಳೂರು

ಯಾವುದು ಅಂತಿಮ ಸತ್ಯ?!

'ಚರಿತ್ರೆ ಸೃಷ್ಟಿಸೋ ಅವಕಾಶ' ಕಳೆದುಕೊಂಡ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಚರಿತ್ರೆ ಬದಲಿಸಿದರು' ಎಂಬ ವೈ.ಗ.ಜಗದೀಶ್ ಅವರ ಪ್ರತಿಪಾದನೆಯನ್ನು (ಪ್ರ.ವಾ., ಆ. 16) ಪೂರ್ಣವಾಗಿ ಒಪ್ಪುವುದು ಕಷ್ಟ. ಸತ್ಯವನ್ನು ಸಮಾಧಿಯೊಳಗೆ ಮುಚ್ಚಿಡಲಾಗದು ಎಂಬುದೇನೋ ಸರಿ. ಆದರೆ ಇತಿಹಾಸದ ಸತ್ಯ ಅನ್ನುವುದು ನೋಡುಗರ ನೆಲೆಯನ್ನು ಅವಲಂಬಿಸಿ ಗೋಚರಿಸುವಂತಹದು.

ಇಲ್ಲಿ ಆರ್‌ಎಸ್‌ಎಸ್ ನೋಟಕ್ಕೆ ದಕ್ಕುವ ಐತಿಹಾಸಿಕ ಸತ್ಯ, ಕಾಂಗ್ರೆಸ್ ದೃಷ್ಟಿಕೋನದಲ್ಲಿ ತಿರುಚಿದ ಸತ್ಯವಾಗಿ ತೋರಬಹುದು. ಹಾಗಾದರೆ ಯಾವುದು ಅಂತಿಮ ಸತ್ಯ? ಅದನ್ನು ನಿರ್ಧರಿಸುವವರು ಯಾರು? ಲೇಖಕರು ತಮ್ಮ ವಾದದ ಸಮರ್ಥನೆಗೆ ಇನ್ನಷ್ಟು ಸ್ಪಷ್ಟತೆ, ಗಾಂಭೀರ್ಯ, ಸಮಚಿತ್ತ ಹೊಂದುವ ಅಗತ್ಯವಿತ್ತು.

ಪ್ರಜ್ಞಾನಂ, ಬೆಂಗಳೂರು

ಉಚಿತ ಪ್ರಯಾಣದ ಕೊಡುಗೆ: ಸ್ಪಷ್ಟತೆ ಸಿಗಲಿ

ಸ್ವಾತಂತ್ರ್ಯೋತ್ಸವದ ದಿನ ಬೆಂಗಳೂರಿನ ಬಿಎಂಟಿಸಿ ಬಸ್ಸಿನಲ್ಲಿ 61.47 ಲಕ್ಷ ಜನ ಪ್ರಯಾಣಿಸಿದ್ದಾರೆಂದು ಸಂಸ್ಥೆಯು ಹೇಳಿಕೊಂಡಿದೆ. ಆ ದಿನ ಉಚಿತ ಪ್ರಯಾಣದ ಕೊಡುಗೆ ಇದ್ದ ಕಾರಣ ಎಷ್ಟು ಟಿಕೆಟ್ ವಿತರಿಸಿದ್ದಾರೆಂದು ಲೆಕ್ಕ ಇಲ್ಲದುದರಿಂದ ಕರಾರುವಾಕ್ಕಾಗಿ ಅಷ್ಟೇ ಜನ ಈ ವಿನಾಯಿತಿಯ ಪ್ರಯೋಜನ ಪಡೆದುಕೊಂಡಿದ್ದಾರೆಂದು ತಿಳಿದುಕೊಳ್ಳಲು ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿತ್ತೇ?

ಆ ದಿನ ಸುಭಾಷ್ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಹೆಚ್ಚಿನೆಲ್ಲ ಪ್ಲಾಟ್‌ಫಾರಂಗಳಲ್ಲಿ ಬಸ್ಸುಗಳೇ ಇರದೆ ನನ್ನಂತೆ ಸಾವಿರಾರು ಪ್ರಯಾಣಿಕರು ಸುಮಾರು ಹೊತ್ತು ಚಾತಕಪಕ್ಷಿಗಳಂತೆ ಕಾಯುತ್ತಲೇ ಇದ್ದೆವು. ರಸ್ತೆಗಳಲ್ಲೂ ಮಾಮೂಲಿನಷ್ಟು ಬಸ್ಸುಗಳು ಇರದ ಕಾರಣ ಸಂಸ್ಥೆಯೇ ಹೇಳಿಕೊಂಡ ಸಾಮಾನ್ಯ ದಿನಗಳಿಗಿಂತ ಹೆಚ್ಚುವರಿ 500 ಬಸ್ಸುಗಳೂ ಸೇರಿ ಒಟ್ಟಾರೆ 5,300 ಬಸ್ಸುಗಳು ಹೊರಟದ್ದೆಲ್ಲಿಂದ, ಹೋಗಿದ್ದೆಲ್ಲಿಗೆ?

ಬಿ.ಎನ್.ಭರತ್, ಬೆಂಗಳೂರು

ಪುಸ್ತಕ ಪ್ರಕಾಶನ ಉದ್ಯಮವಾಗಿ ಬೆಳೆಯಲಿ

'ಪುಸ್ತಕ: ಕೈ ಸುಟ್ಟೀತು' ಎಂಬ ಲೇಖನವು (ಸಂಗತ, ಆ. 19) ಪುಸ್ತಕ ಪ್ರಕಾಶನದ ಸಮಸ್ಯೆಗಳನ್ನು ವಿವರಿಸುವುದರ ಜೊತೆಗೆ ಕೆಲವು ಪರಿಹಾರಗಳನ್ನು ಸೂಚಿಸಿರುವುದು ಸ್ವಾಗತಾರ್ಹ. ಆದರೆ ಎಲ್ಲಾ ಸಮಸ್ಯೆಗಳಿಗೆ ಸರ್ಕಾರ, ಜಿಎಸ್‌ಟಿ ಎಂದು ರೋದಿಸುವುದರ ಬದಲಿಗೆ, ಪುಸ್ತಕ ಪ್ರಕಾಶನವನ್ನು ಒಂದು ಉದ್ಯಮವಾಗಿ ಬೆಳೆಸುವ ಪ್ರಯತ್ನವಾಗಬೇಕು.

ಇತ್ತೀಚೆಗೆ ನಾನು ಕೊಂಡುಕೊಂಡ ಕೆಲವು ಕನ್ನಡ ಪುಸ್ತಕಗಳು ಅತಿ ಕಳಪೆ ದರ್ಜೆಯ ಕಾಗದದಲ್ಲಿ ಮುದ್ರಣವಾಗಿದ್ದರೆ, ಇನ್ನು ಕೆಲವು ಜೆರಾಕ್ಸ್ ಪ್ರತಿಗಳನ್ನು ಹೋಲುವಂತಿದ್ದವು. ಪುಸ್ತಕಗಳ ಗುಣಮಟ್ಟ, ಬರವಣಿಗೆ ಮೌಲ್ಯಯುತವಾಗಿದ್ದರೆ, ಯಾವುದೇ ಓದುಗರು ಬೆಲೆಯ ಕಾರಣದಿಂದ ಕೊಂಡುಕೊಳ್ಳದೇ ಸುಮ್ಮನಿರಲಾರರು. ಹಾಗಾಗಿ ಪ್ರಕಾಶಕರು ಈ ವಿಷಯಗಳ ಕಡೆ ಗಮನ ಹರಿಸುವುದು ಸೂಕ್ತ.

ಜಯಮಹದೇವ ಸ್ವಾಮಿ, ರಾಮನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿದೇಶ ಪ್ರಯಾಣಿಕರ ಮೇಲೆ ಕಣ್ಗಾವಲು

ಪಿಎನ್‌ಆರ್ ಮಾಹಿತಿ ಸಲ್ಲಿಕೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ವಿಮಾನಗಳ ಮೂಲಕ ವಿದೇಶ ಪ್ರಯಾಣ ಕೈಗೊಳ್ಳುವ ಎಲ್ಲಾ ಪ್ರಯಾಣಿಕರ ಪಿಎನ್‌ಆರ್ (ಪ್ಯಾಸೆಂಜರ್ ನೇಮ್ ರೆಕಾರ್ಡ್) ವಿವರಗಳನ್ನು, ವಿಮಾನಯಾನ ಸಂಸ್ಥೆಗಳು ಕೇಂದ್ರ ಸರ್ಕಾರಕ್ಕೆ ಕಡ್ಡಾಯವಾಗಿ ನೀಡಬೇಕು ಎಂದು ಕೇಂದ್ರ ಸರ್ಕಾರವು ಹೇಳಿದೆ. ಅಪರಾಧಿಗಳು, ಆರ್ಥಿಕ ಅಪರಾಧಿಗಳು ದೇಶದಿಂದ ಪರಾರಿಯಾಗುವುದನ್ನು ತಡೆಗಟ್ಟಲು ಈ ನಿಯಮಗಳನ್ನು ಜಾರಿಗೆ ತರಲಾಗುತ್ತಿದೆ ಎಂದು ಸರ್ಕಾರವು ಹೇಳಿದೆ. ಇದಕ್ಕಾಗಿ 'ಪಿಎನ್‌ಆರ್ ಮಾಹಿತಿ ನಿಯಮಗಳು–2022' ಅನ್ನು ಇದೇ 8ರಂದು ಜಾರಿಗೆ ತರಲಾಗಿದೆ.

ಅಪರಾಧಿಗಳು, ಆರ್ಥಿಕ ಅಪರಾಧಿಗಳು ದೇಶದಿಂದ ಪರಾರಿಯಾಗುವುದನ್ನು ತಡೆಯುವುದು ಈ ನಿಯಮಗಳ ಉದ್ದೇಶ ಎಂದು ಸರ್ಕಾರ ಹೇಳಿದೆ. ಆದರೆ, ಈ ಉದ್ದೇಶಕ್ಕಾಗಿ 'ಲುಕ್‌ಔಟ್ ನೋಟಿಸ್' ನೀಡುವ ಒಂದು ವ್ಯವಸ್ಥೆ ಈಗಾಗಲೇ ಜಾರಿಯಲ್ಲಿದೆ. ಅಪರಾಧಿಗಳು ದೇಶಬಿಟ್ಟು ಪರಾರಿಯಾಗುವುದನ್ನು ತಡೆಯುವ ಉದ್ದೇಶದಿಂದ ಕೇಂದ್ರ ಗೃಹ ಸಚಿವಾಲಯವು ಲುಕ್‌ಔಟ್ ನೋಟಿಸ್ ನೀಡುತ್ತದೆ. ಈ ನೋಟಿಸ್ ಜಾರಿಯಾದ ನಂತರ, ಸಂಬಂಧಿತ ವ್ಯಕ್ತಿಯು ವಿಮಾನ ನಿಲ್ದಾಣದಲ್ಲಿ, ಬಂದರುಗಳಲ್ಲಿ ಪತ್ತೆಯಾದ ತಕ್ಷಣ ಅವರನ್ನು ಬಂಧಿಸಲಾಗುತ್ತದೆ. ಲುಕ್‌ಔಟ್ ನೋಟಿಸ್‌ನ ಅವಧಿ ಗರಿಷ್ಠ ಒಂದು ವರ್ಷ.

ಈ ಸ್ವರೂಪದ ಒಂದು ವ್ಯವಸ್ಥೆ ಜಾರಿಯಲ್ಲಿದ್ದರೂ, ಒಂದೇ ಉದ್ದೇಶಕ್ಕೆ ಇನ್ನೊಂದು ವ್ಯವಸ್ಥೆಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದೆ. ಲುಕ್‌ಔಟ್ ನೋಟಿಸ್ ನೀಡಿದಾಗ, ಸಂಬಂಧಿತ ವ್ಯಕ್ತಿಯ ಮಾಹಿತಿಯನ್ನಷ್ಟೇ ಹಂಚಿಕೊಳ್ಳಲಾಗುತ್ತಿತ್ತು. ಆದರೆ, ಪ್ರತಿಯೊಬ್ಬ ಪ್ರಯಾಣಿಕರ ಸಂಪೂರ್ಣ ವಿವರಗಳನ್ನು ಸರ್ಕಾರಕ್ಕೆ ಕಡ್ಡಾಯವಾಗಿ ನೀಡಲೇಬೇಕು ಎನ್ನುತ್ತದೆ ಹೊಸ ನಿಯಮ. ಅಂದರೆ ವಿದೇಶಕ್ಕೆ ಪ್ರಯಾಣ ಬೆಳೆಸುವ ಪ್ರತಿಯೊಬ್ಬ ವ್ಯಕ್ತಿಯ ಮಾಹಿತಿಯೂ ಸರ್ಕಾರಕ್ಕೆ ಲಭ್ಯವಾಗುತ್ತದೆ.

ಪಿಎನ್‌ಆರ್ ಅಡಿ ಒಟ್ಟು 19 ಸ್ವರೂಪದ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ. ಇದರಲ್ಲಿ ಪ್ರಯಾಣಿಕರ ಪ್ರಯಾಣದ ಉದ್ದೇಶ, ಟಿಕೆಟ್ ಖರೀದಿಗೆ ಹಣ ಪಾವತಿಸಿದ ವಿವರ, ಲಗೇಜು ವಿವರ, ಜನ್ಮ ದಿನಾಂಕದಂತಹ ಮಾಹಿತಿಗಳನ್ನೂ ಸಂಗ್ರಹಿಸಲಾಗುತ್ತದೆ.

ವಿಶ್ವದ 60 ದೇಶಗಳು ವಿದೇಶಕ್ಕೆ ಪ್ರಯಾಣ ಹೊರಡುವವರ ಪಿಎನ್‌ಆರ್ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತವೆ. ಆದರೆ, ಅಪರಾಧಿಗಳು ಪರಾರಿಯಾಗುವುದನ್ನು ತಡೆಗಟ್ಟುವ ಉದ್ದೇಶದಿಂದ ಪಿಎನ್‌ಆರ್ ಸಂಗ್ರಹಿಸುತ್ತಿಲ್ಲ. ಅಂತಹ ಪ್ರಯತ್ನ ಇದೇ ಮೊದಲು ಎನ್ನಲಾಗಿದೆ.

ಸರ್ಕಾರಕ್ಕೆ ಪಿಎನ್‌ಆರ್ ಮಾಹಿತಿಯನ್ನು ನೀಡುವುದನ್ನು ಈ ನಿಯಮ ಕಡ್ಡಾಯಗೊಳಿಸಿದೆ. ಯಾವುದೇ ವಿಮಾನ ದೇಶದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಡುವ (ಡಿಪಾರ್ಚರ್) 24 ಗಂಟೆಗೂ ಮುನ್ನ ವಿಮಾನಯಾನ ಸಂಸ್ಥೆಗಳು, ಕೇಂದ್ರ ನೇರ ತೆರಿಗೆ ಮತ್ತು ಸುಂಕ ಮಂಡಳಿಯ ಅಧೀನ ಸಂಸ್ಥೆಗೆ ಈ ಮಾಹಿತಿಯನ್ನು ನೀಡಬೇಕಾಗುತ್ತದೆ. ಮಾಹಿತಿ ನೀಡಲು ವಿಫಲವಾಗುವ ವಿಮಾನಯಾನ ಕಂಪನಿಗೆ ₹25,000ದಿಂದ ₹50,000ರದವರೆಗೆ ದಂಡ ವಿಧಿಸಲು ಅವಕಾಶವಿದೆ.

ಎಲ್ಲಾ ಇಲಾಖೆಗಳಿಗೂ ಮಾಹಿತಿ ಅಧಿಕಾರ

ಈ ನಿಯಮಗಳ ಅಡಿಯಲ್ಲಿ ಈ ದತ್ತಾಂಶಗಳನ್ನು ಯಾರು ನಿರ್ವಹಣೆ ಮಾಡಬೇಕು ಎಂಬುದನ್ನು 3ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಯಾರೆಲ್ಲಾ ಈ ದತ್ತಾಂಶಗಳನ್ನು ಪಡೆದುಕೊಳ್ಳುವ ಅಧಿಕಾರ ಹೊಂದಿದ್ದಾರೆ ಎಂಬುದನ್ನು ಈ ನಿಯಮಗಳ 10ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಈ ನೂತನ ನಿಯಮಗಳ ಅಡಿ ವಿದೇಶಕ್ಕೆ ಹೊರಡುವ ಪ್ರಯಾಣಿಕರ ಪಿಎನ್‌ಆರ್ ವಿವರವನ್ನು ಸಂಗ್ರಹಿಸುವ ಮತ್ತು ನಿರ್ವಹಣೆ ಮಾಡುವ ಹೊಣೆ 'ನ್ಯಾಷನಲ್ ಕಸ್ಟಮ್ಸ್ ಟಾರ್ಗೆಟಿಂಗ್ ಸೆಂಟರ್–ಪ್ಯಾಸೆಂಜರ್ (ಎನ್‌ಸಿಟಿಸಿ–ಪಿ)' ಘಟಕದ್ದು. ವಿಮಾನಯಾನ ಸಂಸ್ಥೆಗಳು ನೀಡುವ ಪಿಎನ್‌ಆರ್ ಮಾಹಿತಿಯನ್ನು ಎನ್‌ಸಿಟಿಸಿ–ಪಿ ಸಂಗ್ರಹಿಸುತ್ತದೆ. ಈ ಘಟಕದ ಉನ್ನತ ಅಧಿಕಾರಿಗಳಿಗೆ ಮಾತ್ರವೇ ಈ ದತ್ತಾಂಶವು ಲಭ್ಯವಿರುತ್ತದೆ.

ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಗಳು ಪಿಎನ್‌ಆರ್ ವಿವರವನ್ನು ಕೋರಿ ಎನ್‌ಸಿಟಿಸಿ–ಪಿಗೆ ಮನವಿ ಸಲ್ಲಿಸಬೇಕು. ಹೀಗೆ ಸಲ್ಲಿಸಿದ ಮನವಿಗಳಿಗೆ ಪೂರಕವಾದ ಮಾಹಿತಿ/ದತ್ತಾಂಶಗಳನ್ನು ಎನ್‌ಸಿಟಿಸಿ–ಪಿಯು ನೀಡಬೇಕಾಗುತ್ತದೆ. ಯಾವ ಯಾವ ತನಿಖಾ ಸಂಸ್ಥೆಗಳು ಈ ಮಾಹಿತಿಯನ್ನು ಕೋರಿ ಮನವಿ ಸಲ್ಲಿಸಬಹುದು ಎಂಬುದರ ವಿವರ ನೂತನ ನಿಯಮಗಳಲ್ಲಿ ಇಲ್ಲ. ಆದರೆ, ಕೇಂದ್ರ ಸರ್ಕಾರದ ಇಲಾಖೆಗಳು ಮತ್ತು ತನಿಖಾ ಸಂಸ್ಥೆಗಳು ಎಂದು ಉಲ್ಲೇಖಿಸಲಾಗಿದೆ. ಈ ಪ್ರಕಾರ ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಈ ಮಾಹಿತಿಯನ್ನು ಪಡೆದುಕೊಳ್ಳುವ ಅಧಿಕಾರವಿದೆ.

ಹೀಗೆ ಪಡೆದುಕೊಳ್ಳಲಾದ ಮಾಹಿತಿಯನ್ನು ಖಾಸಗಿತನ ರಕ್ಷಣೆ ಕಾನೂನುಗಳಿಗೆ ಬದ್ಧವಾಗಿಯೇ ಬಳಸಿಕೊಳ್ಳಬೇಕು. ಮಾಹಿತಿಯನ್ನು ಯಾವ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತದೆ ಎಂಬ ವಿವರವನ್ನೂ ಎನ್‌ಸಿಟಿಸಿ–ಪಿಗೆ ಒದಗಿಸಬೇಕು ಎಂದು ನಿಯಮಗಳಲ್ಲಿ ವಿವರಿಸಲಾಗಿದೆ.

ಮಾಹಿತಿಯನ್ನು ನಿರಾಕರಿಸುವ ಅಧಿಕಾರ ಎನ್‌ಸಿಟಿಸಿ–ಪಿಗೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಈ ನಿಯಮಗಳಲ್ಲಿ ಸ್ಪಷ್ಟವಾಗಿ ವಿವರಿಸಿಲ್ಲ. 'ಎನ್‌ಸಿಟಿಸಿ–ಪಿಯು ಮಾಹಿತಿಯನ್ನು ನೀಡಬಹುದು' ಎಂದಷ್ಟೇ ಹೇಳಲಾಗಿದೆ.

ಪಿಎನ್‌ಆರ್ ಅಡಿ ಸಂಗ್ರಹಿಸಲಾಗುವ ಮಾಹಿತಿ

1. ಪಿಎನ್‌ಆರ್ ರೆಕಾರ್ಡ್ ಲೊಕೇಟರ್ ಕೋಡ್
2. ಟಿಕೆಟ್ ಕಾಯ್ದಿರಿಸುವಿಕೆ/ನೀಡಿದ ದಿನಾಂಕ
3. ಉದ್ದೇಶಿತ ಪ್ರಯಾಣದ ದಿನಾಂಕ
4. ಪ್ರಯಾಣಿಕರ ಹೆಸರು
5. ಉಚಿತ ಪ್ರಯಾಣ, ರಿಯಾಯಿತಿ, ಉಚಿತ ಸೇವೆಗಳಿಗೆ ಸಂಬಂಧಿಸಿದ ಮಾಹಿತಿ
6. ಒಂದೇ ಪಿಎನ್‌ಆರ್‌ನಲ್ಲಿ ಪ್ರಯಾಣಿಸುತ್ತಿರುವ ಇತರ ಪ್ರಯಾಣಿಕರ ಹೆಸರು
7. ಸಂಪರ್ಕ ಮಾಹಿತಿ (ಇ–ಮೇಲ್ ವಿಳಾಸ, ದೂರವಾಣಿ ಸಂಖ್ಯೆ, ಮೊಬೈಲ್ ಸಂಖ್ಯೆ)
8. ಟಿಕೆಟ್ ಶುಲ್ಕ ಪಾವತಿ ವಿವರ (ಕ್ರೆಡಿಟ್/ಡೆಬಿಟ್ ಕಾರ್ಡ್ ವಿವರ ಇತ್ಯಾದಿ)
9. ಉದ್ದೇಶಿತ ಪ್ರಯಾಣದ ಸಂಪೂರ್ಣ ವಿವರ
10. ಟ್ರಾವೆಲ್ ಏಜೆನ್ಸಿ/ಏಜೆಂಟ್ ಹೆಸರು
11. ಕೋಡ್ ಶೇರ್ ಮಾಹಿತಿ (ಒಂದು ವಿಮಾನಯಾನ ಸಂಸ್ಥೆಯು, ಬೇರೊಂದು ವಿಮಾನಯಾನ ಸಂಸ್ಥೆಗಾಗಿ ಟಿಕೆಟ್ ಬುಕಿಂಗ್ ಸೇವೆ ನೀಡಿದ್ದರೆ ಮಾತ್ರ ಅನ್ವಯ)
12. ಪ್ರಯಾಣಿಕರ ಪ್ರಯಾಣದ ಸ್ಥಿತಿಗತಿ ಮಾಹಿತಿ (ಪ್ರಯಾಣ ದೃಢ, ಚೆಕ್ ಇನ್ ಮಾಹಿತಿ ಇತ್ಯಾದಿ)
13. ಟಿಕೆಟ್ ಮಾಹಿತಿ: ಟಿಕೆಟ್ ಸಂಖ್ಯೆ, ಏಕಮುಖ ಅಥವಾ ವಾಪಸಾತಿ ಪ್ರಯಾಣದ ಟಿಕೆಟ್ ಮಾಹಿತಿ (ಲಭ್ಯವಿದ್ದರೆ)
14. ಬ್ಯಾಗ್‌ಗಳ ವಿವರ
15. ಆಸನ ಸಂಖ್ಯೆ ವಿವರ
16. ವಿಶೇಷ ಸವಲತ್ತುಗಳು, ಪೂರಕ ಸವಲತ್ತುಗಳ ಮಾಹಿತಿ
17. ಪಾಸ್‌ಪೋರ್ಟ್ ವಿವರ, ಜನ್ಮ ದಿನಾಂಕ ಮತ್ತು ಲಿಂಗದ ಮಾಹಿತಿ ಒಳಗೊಂಡ ಅಡ್ವಾನ್ಸ್ಡ್ ಪ್ಯಾಸೆಂಜರ್ ಇನ್ಫರ್ಮೇಷನ್
18. ಪಿಎನ್‌ಆರ್‌ನಲ್ಲಿ ಆದ ಯಾವುದೇ ರೀತಿಯ ಬದಲಾವಣೆಗಳ ವಿವರ
19. ಸಂಯುಕ್ತ ಪಿಎನ್‌ಆರ್ ವಿವರ (ಎರಡು ಪಿಎನ್‌ಆರ್ ಸಂಖ್ಯೆಗಳಿರುವ ಸಂದರ್ಭದಲ್ಲಿ ಅನ್ವಯ)

ಖಾಸಗಿತನ ರಕ್ಷಣೆಯ ಮಾತು

ವ್ಯಕ್ತಿಗಳ ಖಾಸಗಿ ಮಾಹಿತಿಯನ್ನು ಸಂರಕ್ಷಿಸುವುದಕ್ಕಾಗಿ ಕಠಿಣ ಸ್ವರೂಪದ ಕಾನೂನುಗಳು ದೇಶದಲ್ಲಿ ಜಾರಿಯಲ್ಲಿವೆ. ಸಂಗ್ರಹಿಸಲಾದ ಪಿಎನ್‌ಆರ್ ಮಾಹಿತಿಯನ್ನು ಈ ಕಾನೂನುಗಳ ಪ್ರಕಾರ ರಕ್ಷಿಸುವ ಬದ್ಧತೆಯನ್ನು ನಿಯಮಾವಳಿಗಳು ಉಲ್ಲೇಖಿಸಿವೆ. ಪ್ರಾದೇಶಿಕ ಜನಾಂಗೀಯತೆ, ರಾಜಕೀಯ ಅಭಿಪ್ರಾಯಗಳು, ಧಾರ್ಮಿಕ ನಂಬುಗೆಗಳು, ವ್ಯಾಪಾರ ಸಂಘಟನೆ ಸದಸ್ಯತ್ವ, ಆರೋಗ್ಯ, ಲೈಂಗಿಕ ಜೀವನ ಮೊದಲಾದ ಮಾಹಿತಿಗಳನ್ನು ಸಂಗ್ರಹಿಸಲು ಅವಕಾಶವಿಲ್ಲ ಎಂದು ಇಲ್ಲಿ ಸ್ಪಷ್ಟಪಡಿಸಲಾಗಿದೆ. ಈ ಸುರಕ್ಷಿತ ವ್ಯವಸ್ಥೆಯಲ್ಲಿ ಪ್ರಯಾಣಿಕರ ಮಾಹಿತಿಯನ್ನು ಸ್ವೀಕರಿಸಲು, ಸಂಗ್ರಹಿಸಲು, ಹಂಚಿಕೊಳ್ಳಲು ಅವಕಾಶವಿದೆ.

ಮಾಹಿತಿ ಎಷ್ಟು ವರ್ಷ ಇಟ್ಟುಕೊಳ್ಳಬಹುದು?

ಪ್ರಯಾಣಿಕರ ಮಾಹಿತಿ ಸಂಗ್ರಹ ವ್ಯವಸ್ಥೆಯಡಿ ಸಂಗ್ರಹಿಸಲಾದ ಮಾಹಿತಿಯನ್ನು, ಅದನ್ನು ಸ್ವೀಕರಿಸಿದ ದಿನದಿಂದ ಗರಿಷ್ಠ ಐದು ವರ್ಷಗಳವರೆಗೆ ಇಟ್ಟುಕೊಳ್ಳಲು ಅವಕಾಶವಿದೆ. ವಿಚಾರಣೆ, ತನಿಖೆ ಅಥವಾ ಕೋರ್ಟ್ ಪ್ರಕರಣ ಎದುರಿಸುತ್ತಿರುವವರ ಮಾಹಿತಿ ಸಂಗ್ರಹವು ಗರಿಷ್ಠ ಅವಧಿಯ ಸಂಗ್ರಹ ಮಿತಿ ನಿಯಮಕ್ಕೆ ಅನ್ವಯವಾಗುವುದಿಲ್ಲ. ಐದು ವರ್ಷಗಳ ಬಳಿಕ ಈ ಮಾಹಿತಿಯನ್ನು ಅನಾಮಧೇಯ ಸ್ವರೂಪದಲ್ಲಿ ವಿಲೇವಾರಿ ಮಾಡಬಹುದು. ಒಂದು ವೇಳೆ, ಐದು ವರ್ಷಗಳ ನಂತರ ಬೆದರಿಕೆ, ಅಪಾಯದ ಸಂದರ್ಭಗಳು ಎದುರಾದಾಗ, ಅನಾಮಧೇಯ ಅಥವಾ ಮರೆಮಾಚಿದ ಸ್ವರೂಪದಲ್ಲಿ ಇರಿಸಲಾಗಿರುವ ಪ್ರಯಾಣಿಕರ ಮಾಹಿತಿಯನ್ನು ಪುನಃ ಕಾಣಿಸುವಂತೆ ಮಾಡಲು ಅವಕಾಶವಿರುತ್ತದೆ. ಎನ್‌ಸಿಟಿಸಿ–ಪಿ ಪ್ರಧಾನ ಹೆಚ್ಚುವರಿ ಮಹಾನಿರ್ದೇಶಕ ಅಥವಾ ಹೆಚ್ಚುವರಿ ಮಹಾನಿರ್ದೇಶಕರ ಶ್ರೇಣಿಗಿಂತ ಕಡಿಮೆಯಿಲ್ಲದ ಅಧಿಕಾರಿ ಮಾತ್ರವೇ ಈ ಮಾಹಿತಿಯನ್ನು ಹೆಚ್ಚುವರಿ ಅಧ್ಯಯನ ಅಥವಾ ವಿಶ್ಲೇಷಣೆಗೆ ಒಳಪಡಿಸಬಹುದಾಗಿದೆ.

ವರ್ಷಕ್ಕೊಮ್ಮೆ ಭದ್ರತೆ ಪರಿಶೀಲನೆ

ವ್ಯವಸ್ಥೆಯ ಪರಿಶೋಧನೆ ಮತ್ತು ಭದ್ರತಾ ಪರಿಶೋಧನೆಯನ್ನು (ಆಡಿಟ್) ವರ್ಷಕ್ಕೊಮ್ಮೆ ಸ್ವತಂತ್ರವಾಗಿ ನಡೆಸಲಾಗುತ್ತದೆ. ಎನ್‌ಸಿಟಿಸಿ–ಪಿ ಪ್ರಧಾನ ಹೆಚ್ಚುವರಿ ಮಹಾನಿರ್ದೇಶಕ ಅಥವಾ ಹೆಚ್ಚುವರಿ ಮಹಾನಿರ್ದೇಶಕ ಪ್ರಯಾಣಿಕರ ಮಾಹಿತಿಯನ್ನು ದುರುಪಯೋಗ ಮಾಡಿಕೊಂಡಿದ್ದಾರೆಯೇ ಎಂದು ಆಡಿಟ್ ಮೂಲಕ ಪರಿಶೀಲಿಸಲಾಗುತ್ತದೆ. ಈ ಇಬ್ಬರೂ ಅಧಿಕಾರಿಗಳಿಗೆ ಪರಿಶೋಧನೆ ಮಾಡುವ ಅಧಿಕಾರ ಇರುವುದಿಲ್ಲ ಎಂದು ನಿಯಮಾವಳಿಗಳಲ್ಲಿ ವಿವರಿಸಲಾಗಿದೆ.

ಆಧಾರ: ಪಿಎನ್‌ಆರ್ ಮಾಹಿತಿ ನಿಯಮಗಳು–2022, ಪಿಐಬಿ, ಕೇಂದ್ರ ಗೃಹ ಸಚಿವಾಲಯದ ಲುಕ್‌ಔಟ್ ನೋಟಿಸ್ ನಿಯಮಗಳು, ಪಿಟಿಐ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 205

ಹಿಮಾಲಯದಲ್ಲಿ ತಪಸ್ಸಿಗೆ ಕುಳಿತ ಶಿವ

ಅತ್ತ ಹಿಮವಂತನ ಮನೆಯಲ್ಲಿ ಜನಿಸಿದ ಆದಿಶಕ್ತಿಯ ಅವತಾರವಾದ ಪಾರ್ವತಿಯು ಬೆಳೆಯುತ್ತಾ ಎಂಟು ವರ್ಷದ ಕನ್ಯೆಯಾದರೆ, ಇತ್ತ ಸತೀದೇವಿಯು ಹಿಮವಂತನ ಮನೆಯಲ್ಲಿ ಜನಿಸಿದುದನ್ನು ತಿಳಿದು ವಿರಹದಿಂದ ದುಃಖಿತನಾಗಿದ್ದ ಶಂಕರ ತುಂಬಾ ಹರ್ಷಗೊಂಡ. ಇದೇ ಸಮಯದಲ್ಲಿ ಶಂಕರನು ತಪಸ್ಸು ಮಾಡಲು ಇಚ್ಛಿಸಿ, ಹಿಮಾಲಯದ ತಪ್ಪಲಿಗೆ ಬಂದ. ಸಚ್ಚಿದಾನಂದರೂಪವೂ ಸ್ವಯಂಪ್ರಕಾಶವೂ, ಭೇದವಿಲ್ಲದುದು, ನಿತ್ಯವೂ ಮತ್ತು ಜಗದ್ರೂಪವೂ ಆದಂತಹ ತನ್ನ ಸ್ವರೂಪವನ್ನು ಚಿಂತಿಸುತ್ತಾ, ತಪೋಮಗ್ನನಾದ. ಹಾಗೆ ಧ್ಯಾನಪರನಾದಾಗ, ಆತನನ್ನುಸರಿಸಿ ಕೆಲವು ಪ್ರಮಥಗಣಗಳು ಸಹ ಧ್ಯಾನವನ್ನು ಮಾಡತೊಡಗಿದವು. ಇನ್ನೂ ಕೆಲವು ಗಣಗಳು ಶಂಕರನನ್ನು ಸೇವಿಸತೊಡಗಿದವು. ಹಲವು ಗಣಗಳು ರಕ್ಷಣಾ ದಳಗಳಾದವು.

ಔಷಧಿಪ್ರಸ್ಥಕ್ಕೆ ಶಂಕರ ಬಂದಿರುವ ವಿಷಯ ಹಿಮವಂತನಿಗೆ ತಿಳಿಯಿತು. ತಕ್ಷಣವೆ ಹಿಮವಂತ ತನ್ನ ಪರಿವಾರದೊಡನೆ ಶಂಕರನ ಬಳಿಗೆ ಬಂದು, ಅವನನ್ನ ಪೂಜಿಸಿ, ಭಕ್ತಿಯಿಂದ ಸ್ತುತಿಸಿದ. 'ಜಗದೊಡೆಯನಾದ ಓ ಮಹಾದೇವನೇ, ನೀನು ಈಗ ಯೋಗಿಯಾಗಿ ತಪವನ್ನಾಚರಿಸುತ್ತಿರುವೆ. ವಸ್ತುತಃ ನಿನಗೆ ಯಾವ ಗುಣಗಳು ಇಲ್ಲ. ಆದರೆ ಮಾಯೆಯಿಂದ ಸಗುಣನಾಗಿ ವಿಹರಿಸುತ್ತಿರುವೆ. ಕೈಲಾಸವಾಸಿಯಾದರೂ ನೀನು ಎಲ್ಲ ಲೋಕಗಳನ್ನೂ ಸಂಚರಿಸುವ ಮಹಾವ್ಯಾಪಕನು. ಇಂತಹ ಲೀಲಾಮಯನಾದ ನಿನಗೆ ನಮಸ್ಕಾರ. ನೀನು ಪರಿಪೂರ್ಣಸ್ವರೂಪನು. ವಿಕಾರಗಳಿಲ್ಲದವನು, ನಿಸ್ಪೃಹನು, ವ್ಯಾಪಕನು, ಧೀರನು, ಪರಮಾತ್ಮನು. ನೀನು ಬಾಹ್ಯವಾದ ಅನಿತ್ಯ ವಿಷಯಸುಖಗಳಲ್ಲಿ ಅಪೇಕ್ಷೆಯಿಲ್ಲದವನು. ಸತ್ವರಜಸ್ತಮೋ ಗುಣಗಳಿಗೆ ಒಡೆಯನು. ಮಾಯೆಯನ್ನೂ ತನ್ನ ಅಧೀನದಲ್ಲಿಟ್ಟಿರುವವನು. ವಿಷ್ಣು ಬ್ರಹ್ಮ ಮೊದಲಾದವರ ಸ್ವರೂಪದಿಂದ ಆಯಾಯ ಕಾರ್ಯಗಳನ್ನು ಮಾಡುವವನು ನೀನೇ. ವಿಷ್ಣು ಬ್ರಹ್ಮ ಪದವಿಗಳನ್ನು ಕೊಡುವವನೂ ನೀನೇ. ನನ್ನ ಭಾಗ್ಯದಿಂದಲೇ ನೀನು ಇಲ್ಲಿಗೆ ಬಂದಿರುವೆ. ನಾನು ಸನಾಥನಾದೆ. ನಿನ್ನ ಆಗಮನದಿಂದ ಧನ್ಯನಾದೆ. ನನ್ನ ಜನ್ಮ ಸಾರ್ಥಕವಾಯಿತು. ನಿನ್ನಂಥ ಮಹಾತಪಸ್ವಿ ನನ್ನ ತಪ್ಪಲಲ್ಲಿ ತಪಸ್ಸಿಗೆ ಬಂದಿರುವುದು ನನ್ನ ಸುಕೃತದ ಫಲ. ತಪಸ್ಸಿಗೆ ಆಶ್ರಯವನ್ನು ಮತ್ತು ತಪಸ್ಸಿಗೆ ಫಲವನ್ನು ಕೊಡುವವನಾದ ಶಿವನೇ. ನಾನು ನಿನ್ನ ಚರಣದಾಸನೆಂದು ತಿಳಿದು ಅಪ್ಪಣೆಮಾಡು. ನಿನ್ನ ಸೇವೆಯನ್ನು ಮಹಾಭಕ್ತಿಯಿಂದ ಮಾಡುವೆ' ಎಂದ.

ಹಿಮವಂತನ ಮಾತನ್ನು ಕೇಳಿ ಸಮಾಧಿಯಲ್ಲಿ ಕುಳಿತಿದ್ದ ಮಹೇಶ್ವರ ಸ್ವಲ್ಪ ಕಣ್ಣನ್ನು ತೆರೆದು ಪರ್ವತರಾಜನನ್ನು ನೋಡಿ ಮಂದಹಾಸ ಬೀರಿದ. 'ಎಲೈ ಪರ್ವತರಾಜನೆ, ನಿನ್ನ ತಪ್ಪಲಲ್ಲಿ ರಹಸ್ಯವಾಗಿ ತಪವನ್ನಾಚರಿಸಲು ಬಂದಿರುವೆ. ನನ್ನ ಬಳಿಗೆ ಯಾರೂ ಬರದಂತೆ ಮಾಡು. ಗಂಗೆಯು ಇಳಿದುಬಂದಿರುವ ಈ ಔಷಧಿಪ್ರಸ್ಥದಲ್ಲಿ ತಪವನ್ನಾಚರಿಸುವೆ. ನನ್ನ ತಪವು ನಿರ್ವಿಘ್ನವಾಗಿ ನೆರವೇರುವಂತೆ ನೋಡಿಕೋ. ಇದೇ ನನಗಾಗಬೇಕಾದ ಸೇವೆ' ಎಂದ.

'ಓ ಮಹಾದೇವ, ನನ್ನ ತಪ್ಪಲಲ್ಲಿ ಯಥೇಚ್ಛೆಯಿಂದ ತಪವನ್ನ ಆಚರಿಸು. ನಿನ್ನ ತಪಸ್ಸಿಗೆ ವಿಘ್ನ ಬಾರದಂತೆ ಎಚ್ಚರ ವಹಿಸುವೆ. ನಾನು ಸದಾ ನಿನ್ನ ಸೇವಕ' ಎಂದು ಹೇಳಿದ ಹಿಮವಂತ ಮನೆಗೆ ಬಂದು, ನಡೆದ ವೃತ್ತಾಂತವನ್ನು ತನ್ನ ಪ್ರಿಯಪತ್ನಿಗೆ ಹೇಳಿದ. ನಂತರ ತನ್ನ ಪರಿವಾರದವರನ್ನೆಲ್ಲಾ ಕರೆಸಿ 'ಎಲೈ ಚಾರರೇ ಮತ್ತು ಪರಿವಾರದವರೇ, ಈಗಿನಿಂದ ನೀವಾರೂ ಗಂಗಾವತಾರ ಎಂಬ ತಪ್ಪಲಿಗೆ ಹೋಗಕೂಡದು. ನನ್ನ ಅಪ್ಪಣೆಯನ್ನು ಮೀರಿಹೋದರೆ ಅಂತಹ ಮೂರ್ಖನನ್ನು ಶಿಕ್ಷಿಸುವೆ' ಎಂದು ಅಪ್ಪಣೆ ಮಾಡಿದ ಎಂಬಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ದೆಹಲಿಯ ಎಎಪಿ ಸರ್ಕಾರವು ಖಾಸಗಿ ಶಾಲೆಯ ಚಿತ್ರವನ್ನು, ಸರ್ಕಾರಿ ಶಾಲೆಯದ್ದೆಂದು ಹೇಳಿಕೊಳ್ಳುತ್ತಿದೆ. ದೆಹಲಿಯ ಮದರ್ ಮೇರಿಸ್ ಖಾಸಗಿ ಶಾಲೆಯ ಚಿತ್ರವನ್ನು ನ್ಯೂಯಾರ್ಕ್ ಟೈಮ್ಸ್ ಮತ್ತು ಖಲೀಜ್ ಟೈಮ್ಸ್‌ನ ಲೇಖನದಲ್ಲಿ ಬಳಸಲಾಗಿದೆ. ಅರವಿಂದ ಕೇಜ್ರಿವಾಲ್ ಮತ್ತು ಮನೀಷ್ ಸಿಸೋಡಿಯಾ ಇಂತಹ ಸುಳ್ಳನ್ನು ದೇಶ ಮತ್ತು ವಿದೇಶದಲ್ಲೂ ಬಿಕರಿಗಿಟ್ಟಿದ್ದಾರೆ' ಎಂದು ಬಿಜೆಪಿ ನಾಯಕ ಕಪಿಲ್ ಮಿಶ್ರಾ ಟ್ವೀಟ್ ಮಾಡಿದ್ದಾರೆ. ಜತೆಗೆ, ದೆಹಲಿಯ ಮಯೂರ್ ವಿಹಾರ್‌ನಲ್ಲಿರುವ ಮದರ್ ಮೇರಿಸ್ ಶಾಲೆಯ ವಿದ್ಯಾರ್ಥಿನಿಯರ ಚಿತ್ರವನ್ನು ಹಂಚಿಕೊಂಡಿದ್ದಾರೆ. ಬಿಜೆಪಿಯ ಹಲವು ನಾಯಕರು ಇದನ್ನು ಮರುಟ್ವೀಟ್ ಮಾಡಿದ್ದಾರೆ ಮತ್ತು ಎಎಪಿ ಸರ್ಕಾರವನ್ನು ಟೀಕಿಸಿದ್ದಾರೆ.

ಇದು ಸುಳ್ಳು ಸುದ್ದಿ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಮದರ್ ಮೇರಿಸ್ ಶಾಲೆಯು ಬಾಲಕಿಯರ ಶಾಲೆ. ಆದರೆ ನ್ಯೂಯಾರ್ಕ್ ಟೈಮ್ಸ್ ಮತ್ತು ಖಲೀಜ್ ಟೈಮ್ಸ್‌ನಲ್ಲಿ ಪ್ರಕಟವಾಗಿರುವ ಚಿತ್ರದಲ್ಲಿ ವಿದ್ಯಾರ್ಥಿನಿಯರ ಜತೆ ವಿದ್ಯಾರ್ಥಿಗಳೂ ಇದ್ದಾರೆ. ಅಲ್ಲದೆ, ಮದರ್ ಮೇರಿಸ್ ಶಾಲೆಯ ವಿದ್ಯಾರ್ಥಿನಿಯರ ಸಮವಸ್ತ್ರದ ಕಾಲರ್ ಕಡು ನೇರಳೆ ಬಣ್ಣದ್ದು. ಆದರೆ, ಪತ್ರಿಕೆಗಳಲ್ಲಿ ಪ್ರಕಟವಾದ ಚಿತ್ರದಲ್ಲಿ ವಿದ್ಯಾರ್ಥಿನಿಯರು ಧರಿಸಿರುವ ಸಮವಸ್ತ್ರದ ಕಾಲರ್ ತಿಳಿ ನೇರಳೆ ಬಣ್ಣದ್ದು. ಬಿಜೆಪಿ ನಾಯಕರು ಬೇರೆ ಶಾಲೆಯ ಚಿತ್ರಗಳನ್ನು ಬಳಸಿಕೊಂಡು, ಸುಳ್ಳು ಮಾಹಿತಿ ಹಂಚಿಕೊಂಡಿದ್ದಾರೆ' ಎಂದು ಆಲ್ಟ್ ನ್ಯೂಸ್ ವಿವರಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಆಗಸ್ಟ್ 22, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಏಕಾದಶಿ ಅಹೋರಾತ್ರ ನಕ್ಷತ್ರ: ಮೃಗಶಿರ ಗಂ. 07-41 ಯೋಗ: ವಜ್ರ ಗಂ. 23-40, ಕರಣ: ಬವ ಗಂ. 16-52, ಸಿಂಹ ಮಾಸದ 05 ನೇ ದಿನ.

ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-22 ಸೂರ್ಯಾಸ್ತ : 06-45

ಮುಸ್ಲಿಂ ದಿನಾಂಕ : 23 ಮೊಹರಮ್

ದಿನ ವಿಶೇಷ : ಶ್ರಾವಣ ಸೋಮವಾರ

ಅದೃಷ್ಟ ಸಂಖ್ಯೆ : 3, 11

ಮೇಷ: ನಿಮ್ಮ ಪ್ರಯತ್ನಗಳು ಕೈಗೂಡಲು ತಾಳ್ಮೆ ವಹಿಸುವುದು ಸೂಕ್ತ. ಮನಸ್ಸಿಗೆ ನೆಮ್ಮದಿ ನೀಡುವ ಸುದ್ದಿ ಕೇಳುವಿರಿ. ಕಾರ್ಮಿಕರ ಬದಲಾವಣೆಯಂತಹ ವಿಷಯಗಳಿಂದ ಉದ್ಯಮಿಗಳಿಗೆ ಹಲವು ರೀತಿಯಲ್ಲಿ ನಷ್ಟ.

ವೃಷಭ: ಹಿತಶತ್ರುಗಳ ಕಾಟದಿಂದ ತಪ್ಪಿಸಿಕೊಳ್ಳಲು ನಿಮ್ಮ ಬುದ್ಧಿವಂತಿಕೆಯನ್ನು ಉಪಯೋಗಿಸಿ. ವಿಮಾ ಯೋಜನೆಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ. ಷೇರು ವ್ಯವಹಾರ, ಸಿನೆಮಾ ತಯಾರಿಕೆಯಂತಹ ಕಾರ್ಯವು ಲಾಭ ತರಲಿದೆ.

ಮಿಥುನ: ವೃತ್ತಿರಂಗದಲ್ಲಿ ಅನಾವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವ ಸಾಧ್ಯತೆ. ಗೃಹ ತಾಪತ್ರಯಗಳಿಂದ ಮುಕ್ತಿ ನಿಶ್ಚಿಂತತೆ. ತಾಯಿಯ ಆರೋಗ್ಯ ಅದರಲ್ಲೂ ಹೆಚ್ಚಾಗಿ ಕಣ್ಣಿನ ದೃಷ್ಟಿಗೆ ಸಂಬಂಧಿಸಿದಂತೆ ಕಾಳಜಿ ಇರಲಿ.

ಕರ್ಕಾಟಕ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿಯಿರುವವರಿಗೆ ಉತ್ತಮ ಅವಕಾಶಗಳು ಸಿಗಲಿವೆ. ಸರ್ಕಾರಿ ಸಂಸ್ಥೆಯ ಕೆಲಸಗಾರರಿಗೆ ಮೇಲಧಿಕಾರಿಗಳಿಂದ ಒತ್ತಡ. ಅನೇಕ ದಿನದಿಂದ ಕಾಡುತ್ತಿರುವ ಆರೋಗ್ಯ ಸಮಸ್ಯೆ ಉಪಶಮನವಾಗಲಿದೆ.

ಸಿಂಹ: ಮಗಳ ಉದ್ಯೋಗದಲ್ಲಿನ ಪ್ರಗತಿಯಿಂದ ಸಂತೋಷ. ವ್ಯಾಪಾರದ ಅಭಿವೃದ್ಧಿಗೆ ಬೇಕಾದ ಆರ್ಥಿಕ ಬಲದ ಜೊತೆಯಲ್ಲಿ ಕೆಲವು ವ್ಯಾಪಾರದ ಉಪಾಯಗಳನ್ನು ಬಳಸುವುದು ಒಳ್ಳೆಯದು. ಧಾರ್ಮಿಕ ಶ್ರದ್ಧೆ ಬೆಳೆಸಿಕೊಳ್ಳಿ.

ಕನ್ಯಾ: ಮನೆಯಲ್ಲಿ ಆನಂದದ ವಾತಾವರಣ. ಹಾಗೆ ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ. ಕುಟುಂಬದಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆಯನ್ನು ಕಳೆದುಕೊಳ್ಳಬೇಡಿ, ಸಮಾಧಾನ ಇರಲಿ.

ತುಲಾ: ಮಗಳ ಜೀವನದ ಬಗ್ಗೆ ಮಹತ್ವದ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ. ನಿಮ್ಮ ಅಧಿಕ ಶ್ರಮದಿಂದ ನಿಮ್ಮ ಕನಸಿನ ದೀರ್ಘಕಾಲಿಕ ಕಾರ್ಯಗಳು ಚಾಲನೆಗೊಂಡು ಸಂತಸ ವೃದ್ಧಿಯಾಗುವುದು.

ವೃಶ್ಚಿಕ: ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ. ವ್ಯಾಪಾರದಲ್ಲಿ ಸಾಧಾರಣ ಲಾಭ. ನೆರೆಯವರ ಸಹಾಯ ಸಹಕಾರ ಕೇಳುವ ಸಂದರ್ಭ ಬರಲಿದೆ. ಸ್ವಯಂ ಸಾಮರ್ಥ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವಿರಿ.

ಧನು: ಸಾರ್ವಜನಿಕರಲ್ಲಿ ಹೆಚ್ಚಾಗಿ ಬೆರೆಯುವ ಸಂದರ್ಭವಿರುವುದರಿಂದ ಆರೋಗ್ಯದಲ್ಲಿ ವಿಶೇಷ ಗಮನ ಇರಲಿ. ಮಕ್ಕಳ ಓದಿಗೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಗಲಿದೆ. ಕ್ರೀಡಾ ಚಟುವಟಿಕೆಗಳು ಹೆಚ್ಚುವುದು.

ಮಕರ: ಕೋರ್ಟು ಕಚೇರಿ ವ್ಯವಹಾರದಲ್ಲಿ ಜಯ ಪಡೆಯುವ ಬಗ್ಗೆ ಅಧಿಕವಾದ ಪ್ರಯತ್ನವಿರಲಿ. ನೂತನ ಕಾರ್ಯ ಅಥವಾ ಗೃಹ ನಿರ್ಮಾಣದಂತಹ ಕೆಲಸಗಳಿಗಾಗಿ ಕುಟುಂಬದಲ್ಲಿ ಚರ್ಚೆ, ಅದಕ್ಕಾಗಿ ಹೆಚ್ಚಿನ ಸಮಯ ವಿನಿಯೋಗ.

ಕುಂಭ: ರಕ್ತದೊತ್ತಡ ನಿಯಂತ್ರಣಕ್ಕೆ ಬಂದು ಮನಸ್ಸಿಗೆ ಸಮಾಧಾನ ಆಗುವುದು. ಭೂಮಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಊರಿನ ಹಿರಿಯರು ಕೊಡುವ ಸಲಹೆಯಿಂದ ನಿಮಗೆ ಅನುಕೂಲ ಸನ್ನಿವೇಶ ಒದಗಿ ಬರಲಿದೆ.

ಮೀನ: ಎಂಜಿನಿಯರ್‌ಗಳ ನಿರುದ್ಯೋಗದ ಸಮಸ್ಯೆ ಸ್ನೇಹಿತನ ಪ್ರಯತ್ನದಿಂದ ದೂರವಾಗಲಿದೆ. ಮನೆಯಲ್ಲಿ ವಿವಾಹ ವಿಷಯಗಳ ಚರ್ಚೆ. ಕುಟುಂಬದ ಅಭಿವೃದ್ಧಿಯಲ್ಲಿ ನಿಮ್ಮ ಅವಿರತ ಪ್ರಯತ್ನ ಫಲಕಾರಿಯಾಗುವುದು.

ಮತಿ ನೀತಿಯ ನಡೆ ಕಷ್ಟ

ಎಡವದೆಯೆ, ಮೈಗಾಯವಡೆಯದೆಯೆ,
ಮಗುವಾರು |
ನಡೆಯ ಕಲಿತವನು? ಮತಿನೀತಿಗತಿಯಂತು ||
ತಡವರಿಸಿ ಮುಗ್ಗರಿಸಿ ಬಿದ್ದು ಮತ್ತೆದ್ದು ಮೈ - |
ದಡವಿಕೊಳುವವರೆಲ್ಲ – ಮಂಕುತಿಮ್ಮ || 698 ||

ಪದ-ಅರ್ಥ: ಮೈಗಾಯವಡೆಯದೆಯೆ = ಮೈಗಾಯವ + ಅಡೆಯದೆಯೆ(ಪಡೆಯದೆಯೆ), ಮಗುವಾರು = ಮಗುವು + ಆರು, ಮತಿನೀತಿಗತಿಯಂತು = ಮತಿನೀತಿಗತಿಯು + ಅಂತು, ಮೈದಡವಿಕೊಳುವವರೆಲ್ಲ = ಮೈದಡವಿಕೊಳುವವರು + ಎಲ್ಲ.ವಾಚ್ಯಾರ್ಥ: ಎಡವಲಾರದೆ, ಬಿದ್ದು ಮೈಗಾಯಮಾಡಿಕೊಳ್ಳದೆ ಯಾವ ಮಗು ನಡೆಯನ್ನು ಕಲಿಯುತ್ತದೆ? ಅದರಂತೆಯೆ ಬುದ್ಧಿ, ಧರ್ಮಮಾರ್ಗದಲ್ಲಿ ನಡೆಯುವ ಗತಿ. ಎಲ್ಲರೂ ತಡವರಿಸಿ, ಮುಗ್ಗರಿಸಿ ಬಿದ್ದು, ಮತ್ತೆ ಮೇಲೆದ್ದು ಮೈಕೊಡವಿಕೊಂಡವರೆ.

ವಿವರಣೆ: ಹನ್ನೊಂದು ತಿಂಗಳು, ಒಂದು ವರ್ಷದ ಮಗು ಹೆಜ್ಜೆ ಇಡಲು ಪ್ರಾರಂಭಿಸುತ್ತದೆ. ಇಡೀ ದೇಹದ ಭಾರವನ್ನು ಎರಡೇ ಪುಟ್ಟ ಪಾದಗಳ ಮೇಲೆ ಹಾಕಿ ತೂಗಿಸುವುದು ಸುಲಭದ ಕೆಲಸವಲ್ಲ. ನಮಗೆ ಈಗ ನಡೆದು, ನಡೆದು, ಆಗ ಪಟ್ಟ ಶ್ರಮ, ದಕ್ಕಿದಾಗ ಆದ ಸಂತೋಷ ಮರೆತು ಹೋಗಿದೆ. ಮಗುವಿಗೆ ಕುತೂಹಲ, ಆಶ್ಚರ್ಯ. ಪಾದಗಳ ಮೇಲೆ ತೂಗಿ ನಿಂತಾಗ ಆದ ಸಂಭ್ರಮ, ಹೆಜ್ಜೆ ಮುಂದಿಟ್ಟಾಗ ಆಗಲಿಲ್ಲ, ಮಗು ಧೊಪ್ಪನೆ ಬೀಳುತ್ತದೆ. ಅಳುತ್ತದೆ. ಆದರೆ ಪ್ರಯತ್ನ ಬಿಡುವುದಿಲ್ಲ. ಹಗಲು-ರಾತ್ರಿ ಅದರದೇ ಧ್ಯಾನ, ಸಂಧಾನ. ಹೀಗೆ ಮಾಡುವಾಗ, ನಡಿಗೆಯನ್ನು ಕಲಿಯುವಾಗ ಅದೆಷ್ಟು ಬಾರಿ ಮಗು ಬಿತ್ತೋ, ಎಷ್ಟು ಪೆಟ್ಟುಮಾಡಿಕೊಂಡಿತೋ, ಲೆಕ್ಕವಿಟ್ಟವರಾರು?

ಇದೊಂದು ಬಹುಸುಂದರ ಸಾದೃಶ್ಯ. ಕಗ್ಗ ಹೇಳುತ್ತದೆ, ಶುದ್ಧಬುದ್ಧಿಯ, ನೀತಿಯ ಮಾರ್ಗದ ನಡೆಯೂ ಇಂಥದ್ದೇ. ಸುಲಭದ್ದಲ್ಲ. ಯಾರೂ ಈ ಮತಿ, ನೀತಿಯ ಎತ್ತರವನ್ನು ಯಾವ ಅಡೆತಡೆಯೂ ಇಲ್ಲದೆ ಮುಟ್ಟಿದ್ದೇನೆಂದು ಹೇಳುವುದು ಸಾಧ್ಯವಿಲ್ಲ. ಪ್ರತಿಯೊಬ್ಬರಿಗೂ ಪರೀಕ್ಷೆಗಳು ಎದುರಾಗಿವೆ. ಕೆಲವೊಮ್ಮೆ ಅಸಫಲತೆ ಬಂದಿದೆ. ಕೆಲವೊಮ್ಮೆ ಮನಸ್ಸು ಕುಸಿದಿದೆ. ಒಮ್ಮೊಮ್ಮೆ ಶ್ರದ್ಧೆ ಕರಗಿದೆ. ಪೆಟ್ಟು ಬಿದ್ದಿದೆ. ಆದರೆ ಇವುಗಳನ್ನೆಲ್ಲ ಛಲದಿಂದ ಎದುರಿಸಿ ನಿಂತವರು ಲೋಕಕ್ಕೆ ಮಾದರಿಗಳಾಗಿದ್ದಾರೆ. ಮಹಾಭಾರತದ ಧರ್ಮರಾಜ, ಧರ್ಮದ ಪ್ರತಿಮೂರ್ತಿ. ಆಚಾರ್ಯ ದ್ರೋಣರಿಗೆ ಅವನ ಧರ್ಮಪ್ರಜ್ಞೆಯ ಮೇಲೆ ಅಸಾಧ್ಯ ಭರವಸೆ. ಆದರೆ ಯುದ್ಧಭೂಮಿಯಲ್ಲಿ ಪರೀಕ್ಷೆಯೊಂದು ಇದಿರಾಯಿತು. ಅದರಲ್ಲಿ ಧರ್ಮರಾಜ ಸೋತ. ತಾನು ಹೇಳುವುದು ಸುಳ್ಳು ಎಂದು ತಿಳಿದೂ ಅರ್ಧಸತ್ಯ ಹೇಳಿದಂತೆ ಮಾಡಿದ. ಭೀಮನ ಗದೆ, ಅರ್ಜುನನ ಬಿಲ್ಲು ಮಾಡದ್ದನ್ನು ಧರ್ಮರಾಜನ ಸುಳ್ಳು ಸಾಧಿಸಿತ್ತು, ತನ್ನನ್ನು ಅಪಾರವಾಗಿ ನಂಬಿದ್ದ ಗುರುವಿನ ಪ್ರಾಣ ತೆಗೆದಿತ್ತು. ಅದು ಧರ್ಮರಾಜನನ್ನು ಬಹುಕಾಲ ಕಾಡಿತ್ತು. ಜೂಜು ಕೆಟ್ಟದ್ದೆಂದು ಧರ್ಮರಾಜನಿಗೆ ತಿಳಿಯದೆ? ಆದರೂ ಅದು ಸೆಳೆಯಿತು. ಒಂದಲ್ಲ, ಎರಡು ಬಾರಿ. ಆ ಸೆಳೆತ ರಾಜ್ಯವನ್ನು ಕಿತ್ತೊಗೆಯಿತು, ಕಾಡಿಗೆ ತಳ್ಳಿತು.

ಇಂಥ ಪರೀಕ್ಷೆಗಳು ಮತ್ತು ಸೋಲುಗಳು ಕೇವಲ ಧರ್ಮರಾಜನಿಗೆ ಮಾತ್ರವಲ್ಲ, ಈ ದಾರಿಯಲ್ಲಿ ನಡೆದ ಅನೇಕರಿಗೆ ಬಂದಿದ್ದವು. ಹರಿಶ್ಚಂದ್ರನಿಗೆ, ವಿಶ್ವಾಮಿತ್ರನಿಗೆ, ವೇಮನನಿಗೆ, ಗಾಂಧೀಜಿಗೆ ಇಂತಹ ಆತಂಕಗಳು ಬಂದಿದ್ದರೂ, ಅವರಿಗೆ ತಾತ್ಕಾಲಿಕ ತಡೆಗಳನ್ನು ಮಾಡಿದ್ದರೂ, ಕೊನೆಗೆ ಅವರಿಗೆ ಅಮರತ್ವವನ್ನು ದಯಪಾಲಿಸಿದವು. ಮತ, ನೀತಿಗಳ ನಡೆ ಕೂಡ ಮಗುವಿನ ಮೊದಲ ನಡೆಯಷ್ಟು ಕಠಿಣವಾದದ್ದೇ.

ಪದಬಂಧ 5057

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇತರರಿಗೆ ವಹಿಸಿ ಕೊಡುವುದು (4)
5.ಸಪೂರವಾದ ಸೊಂಟ (4)
7.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
9.ಮಣ ಭಾರದ ಹೆಣವನ್ನು ಸಾಗಿಸಿದ ಜಾಗ (3)
10.ದಾಯಾದಿ ಜಗಳವಿದು (5)
11.ಪರಿಶುದ್ಧವಾದುದನ್ನು ಹೀಗೆನ್ನಿ (3)
12.ವೇಗ ಅಥವಾ ಶೀಘ್ರತೆ (3)
14.ಪಾರಿತೋಷ ಸಿಕ್ಕಿರುವುದಕ್ಕೇ ಅತ್ಯಂತ ಆನಂದ! (4)
13.ಶುಭಕಾರ್ಯಗಳಲ್ಲಿ ಹಾಕುವ ಪೀಠ (4)

ಮೇಲಿಂದ ಕೆಳಕ್ಕೆ

1.ಅತಿಯಾದ ದುಃಖ (4)
2.ಕಣ್ಣಿನ ಎವೆ (2)
3.ಪ್ರತಿರೂಪ ಇಲ್ಲಿದೆ (2)
4.ಈತ ಅತ್ಯಂತ ಬುದ್ಧಿವಂತ (4)
6.ಎಲ್ಲರನ್ನೂ ಒಂದುಗೂಡಿಸುವುದು (5)
8.ವಿಶೇಷವಾದ ಜ್ಞಾನ (3)
9.ಹಿರಿಮೆಯನ್ನು ಹೇಳುವ ಘನತೆ (3)
11.ಮೇಲ್ವಿಚಾರಣೆಯನ್ನು ಹೀಗೆನ್ನಿ (4)
13.ಬರಿದಾಗದ ಬತ್ತಳಿಕೆ (4)
15.ಪಕ್ಷದ ಆರನೆಯ ದಿನ (2)
16.ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)

1			2	■	3	■	■	4
	■	■		■	5			
	■	■	■	6	■	■	■	
7		8	■		■	9		
■	■	10					■	■
11			■		■	12		13
	■	■	■		■	■	■	
14			15	■	16	■	■	
	■	■		■	17			

5056ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರವಾಹ 3.ತಪರಾಕಿ
5.ವಿಷ 6.ಕರ್ಮಾಂತರ
7.ನದೀಮುಖಜಭೂಮಿ
10.ತಳವಾರ 11.ಹನಿ
13.ಗುಡಿಕಾರ 14.ಗೆದ್ದಲು

ಮೇಲಿಂದ ಕೆಳಕ್ಕೆ:
1.ಪ್ರಭೆ 2.ಹರುಷ
4.ಕಿನ್ನರ 5.ವಿಧಾನ
6.ಕಣಜ 8.ಮುಷ್ಕರ
9.ಮಿಸುನಿ 10.ತರಗು
11.ಹಲಗೆ 12.ಮಾಲು

ಸುಡೊಕು 5443

2				9		7		
	1		4		7		5	
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1	3		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5442 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ಮೈಸೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಭಾನುವಾರ ಆಯೋಜಿಸಿದ್ದ ರಾಜ್ಯ ಮಟ್ಟದ ಯುವ ಜನೋತ್ಸವ 2022 ಕಾರ್ಯಕ್ರಮದಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಬಿಜೆಪಿ ರಾಜ್ಯ ಘಟಕಗಳ ಪ್ರಮುಖ ಹುದ್ದೆಗಳಲ್ಲಿ ಬದಲಾವಣೆ ನಿರೀಕ್ಷೆ

ನವದೆಹಲಿ (ಪಿಟಿಐ): ಹಲವು ರಾಜ್ಯಗಳ ಬಿಜೆಪಿ ಘಟಕಗಳ ಪ್ರಮುಖ ಸ್ಥಾನಗಳಲ್ಲಿ ಬದಲಾವಣೆ ತರುವುದನ್ನು ಪಕ್ಷವು ಮುಂದುವರೆಸುವ ನಿರೀಕ್ಷೆ ಇದೆ. 2024ರ ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟಿರುವ ಬಿಜೆಪಿಯು ಪಕ್ಷದ ಸಂಘಟನೆಯಲ್ಲಿಯ ಸಮಸ್ಯೆಗಳನ್ನು ಮತ್ತು ಸದ್ಯ ತಲೆದೂರಿರುವ ರಾಜಕೀಯ ಸವಾಲುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಈ ಬದಲಾವಣೆ ಮಾಡಲಿದೆ ಎನ್ನಲಾಗಿದೆ.

ಬಿಜೆಪಿಯ ಸಂಸದೀಯ ಸಮಿತಿಯಿಂದ ಕೇಂದ್ರ ಸಚಿವ ನಿತಿನ್ ಗಡ್ಕರಿ, ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಕೈಬಿಡಲಾಗಿದೆ. ಉತ್ತರ ಪ್ರದೇಶಕ್ಕೆ ಹೊಸ ರಾಜ್ಯ ಘಟಕದ ಅಧ್ಯಕ್ಷರನ್ನು ನೇಮಿಸುವ ಮತ್ತು ಬಿಹಾರ ಬಿಜೆಪಿ ಘಟಕಕ್ಕೆ ಹೊಸ ಮುಖಗಳನ್ನು ತರುವ ನಿರೀಕ್ಷೆಯೂ ಇದೆ.

ಪಕ್ಷದ 'ಸಮರಭೇರಿ' ರ‍್ಯಾಲಿಯಲ್ಲಿ ಅಮಿತ್ ಶಾ ಹೇಳಿಕೆ

ಟಿಆರ್‌ಎಸ್ ಸರ್ಕಾರ ಬುಡಮೇಲು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದ ಕೆ. ಚಂದ್ರಶೇಖರ್ ರಾವ್ ನೇತೃತ್ವದ ಟಿಆರ್‌ಎಸ್ ಸರ್ಕಾರ ಕಿತ್ತೊಗೆಯುತ್ತೇವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಇಲ್ಲಿ ಹೇಳಿದರು.

ಪಕ್ಷದ 'ಸಮರಭೇರಿ' ರ‍್ಯಾಲಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮುನುಗೋಡು ಉಪಚುನಾವಣೆಯ ಗೆಲುವು ತೆಲಂಗಾಣದ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವಿನ ಹಾದಿಯಾಗಲಿದೆ. ಟಿಆರ್‌ಎಸ್ ಸರ್ಕಾರ ಉರುಳಿಸುವ ಪ್ರಕ್ರಿಯೆ ಆರಂಭವಾಗಿದೆ. ತೆಲಂಗಾಣದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಶಾ ವಿಶ್ವಾಸ ವ್ಯಕ್ತಪಡಿಸಿದರು.

ಮುನುಗೋಡು ಕ್ಷೇತ್ರದ ಕಾಂಗ್ರೆಸ್ ಶಾಸಕ ಕೊಮಟಿ ರೆಡ್ಡಿ ರಾಜಗೋಪಾಲ್ ರೆಡ್ಡಿ ರಾಜೀನಾಮೆ ನೀಡಿದ್ದು, ಶಾ ಅವರ ಸಮ್ಮುಖದಲ್ಲಿ ಬಿಜೆಪಿ ಸೇರಿದರು.

ಈ ಕ್ಷೇತ್ರದ ಉಪ ಚುನಾವಣೆಗೆ ರಾಜಗೋಪಾಲ್ ಬಿಜೆಪಿಯಿಂದ ಸ್ಪರ್ಧಿಸಲಿದ್ದಾರೆ. ಕಾಂಗ್ರೆಸ್ ಮತ್ತು ಟಿಆರ್‌ಎಸ್ ಇನ್ನೂ ಅಭ್ಯರ್ಥಿಗಳನ್ನು ಘೋಷಿಸಿಲ್ಲ.

ಅಮಿತ್ ಶಾ ಅವರ ಭೇಟಿಗೂ ಒಂದು ದಿನ ಮೊದಲು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ಪಶ್ಚಿಮ ತೆಲಂಗಾಣ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸಿದರು.

ಚಂದ್ರಶೇಖರ್ ರಾವ್ ವಿರುದ್ಧ ವಾಗ್ದಾಳಿ ನಡೆಸಿದ ಅಮಿತ್ ಶಾ, ಸೆಪ್ಟೆಂಬರ್ 17ರಂದು ಹೈದರಾಬಾದ್ ವಿಮೋಚನಾ ದಿನ ಆಚರಿಸುವುದನ್ನು ಎಐಎಂಐಎಂ ಮೇಲಿನ ಭಯದಿಂದಾಗಿ ತಡೆಯಲು ಟಿಆರ್‌ಎಸ್ ಸರ್ಕಾರ ಯತ್ನಿಸುತ್ತಿದೆ. ಆದರೆ, ಬಿಜೆಪಿ ಇದನ್ನು ಗಮನಿಸುತ್ತಿದ್ದು, ಅಧಿಕೃತ ಆಚರಣೆ ನಡೆಸಲಿದೆ ಎಂದು ಹೇಳಿದರು.

ತೆಲಂಗಾಣದ ನಲಗೊಂಡ ಜಿಲ್ಲೆಯ ಮುನುಗೋಡು ವಿಧಾನಸಭಾ ಕ್ಷೇತ್ರದಲ್ಲಿ ಭಾನುವಾರ ನಡೆದ ಪಕ್ಷದ ರ‍್ಯಾಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಪಾಲ್ಗೊಂಡು, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರನ್ನು ಹುರಿದುಂಬಿಸಿದರು– ಪಿಟಿಐ ಚಿತ್ರ

ಪರಿವಾರವಾದ: ಅಮಿತ್ ಶಾ ಪಾಠ– ಸಚಿವ ಕೆಟಿಆರ್ ವ್ಯಂಗ್ಯ

ಹೈದರಾಬಾದ್ (ಪಿಟಿಐ): 'ಪ್ರಮುಖ ಕ್ರಿಕೆಟ್ ಆಟಗಾರ'ರೊಬ್ಬರ ತಂದೆ ತೆಲಂಗಾಣಕ್ಕೆ ಬರಲಿದ್ದಾರೆ ಮತ್ತು ನಮಗೆಲ್ಲಾ ಪರಿವಾರವಾದದ ಕುರಿತು ಪಾಠ ಮಾಡಲಿದ್ದಾರೆ' ಎಂದು ಸಚಿವ ಕೆ.ಟಿ. ರಾಮರಾವ್ ಅವರು ಗೃಹ ಸಚಿವ ಅಮಿತ್ ಶಾ ಅವರನ್ನು ಗುರಿಯಾಗಿಸಿ ಭಾನುವಾರ ಟ್ವೀಟ್ ಮಾಡಿದ್ದಾರೆ.

ಕೆ. ರಾಜಗೋಪಾಲ್ ರೆಡ್ಡಿ ಅವರನ್ನು ಉದ್ದೇಶಿಸಿ ಟ್ವೀಟ್ ಮಾಡಿರುವ ಕೆ.ಟಿ. ರಾಮರಾವ್, 'ಅತಿಥಿ ಗಣ್ಯರು, ಸಂಸದರೊಬ್ಬರ ತಮ್ಮನ ಪರವಾಗಿ ಪ್ರಚಾರ ಮಾಡಲಿದ್ದಾರೆ. ಅವರ ಪತ್ನಿ ಎಂಎಲ್‌ಸಿ ಚುನಾವಣೆಗೆ ಸ್ಪರ್ಧಿಸಿದ್ದಾರೆ' ಎಂದಿದ್ದಾರೆ.

ಮತ್ತೊಂದು ಟ್ವೀಟ್ ಮಾಡಿರುವ ರಾಮರಾವ್ ಅವರು, ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳನ್ನು ಯಾತಕ್ಕಾಗಿ ಗುಜರಾತ್ ಸರ್ಕಾರ ಬಿಡುಗಡೆ ಮಾಡಿತು ಎನ್ನುವ ಕುರಿತು ಅಮಿತ್ ಶಾ ಅವರು ಮಾತನಾಡಲಿದ್ದಾರೆ. ಇದನ್ನು ಕೇಳಲು ನಾವು ಉತ್ಸುಕರಾಗಿದ್ದೇವೆ ಎಂದು ವ್ಯಂಗ್ಯವಾಡಿದ್ದಾರೆ.

ಸುದ್ದಿ 2 ನಿಮಿಷ

ಪ್ರಧಾನಿ ಹುದ್ದೆಗೆ ನಿತೀಶ್ ಪ್ರಬಲ ಅಭ್ಯರ್ಥಿ: ತೇಜಸ್ವಿ ಯಾದವ್

ನವದೆಹಲಿ(ಪಿಟಿಐ): ವಿರೋಧ-ಪಕ್ಷಗಳು ಪ್ರಧಾನಿ ಅಭ್ಯರ್ಥಿಯಾಗಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಪರಿಗಣಿಸಿದರೆ ಅವರೊಬ್ಬ ಪ್ರಬಲ ಅಭ್ಯರ್ಥಿಯಾಗಬಲ್ಲರು ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಭಾನುವಾರ ಹೇಳಿದ್ದಾರೆ.

ಕಳೆದ 50 ವರ್ಷಗಳಲ್ಲಿ ನಿತೀಶ್ ಅವರು ಸಾಮಾಜಿಕ ಹಾಗೂ ರಾಜಕೀಯ ರಂಗಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಮೀಸಲಾತಿ ಚಳವಳಿಯಲ್ಲೂ ಪಾಲ್ಗೊಂಡಿದ್ದಾರೆ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

ಬಿಹಾರದಲ್ಲಿ 'ಮಹಾಘಟಬಂಧನ್' ಸರ್ಕಾರ ಅಧಿಕಾರಕ್ಕೆ ಬರುವುದರೊಂದಿಗೆ 'ಜಂಗಲ್ ರಾಜ್' ಮರಳಲಿದೆ ಎಂದು ಬಿಜೆಪಿ ಹೇಳಿದೆ. ಇದು ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಪ್ರಯತ್ನವಾಗಿದೆ ಎಂದು ತೇಜಸ್ವಿ ಯಾದವ್ ಅವರು ಹೇಳಿದ್ದಾರೆ.

ಬಿಹಾರ ರಾಜ್ಯದಲ್ಲಿ 10 ಲಕ್ಷ ಉದ್ಯೋಗ ಸೃಷ್ಟಿಯ ಭರವಸೆ ಕುರಿತು ಪ್ರತಿಕ್ರಿಯಿಸಿರುವ ಅವರು, ಆದ್ಯತೆಯ ಮೇರೆಗೆ ಈಗಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದೇವೆ. ಬಳಿಕ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡಲಿದ್ದೇವೆ ಎಂದು ಹೇಳಿದ್ದಾರೆ

ಅರ್ಚಕರ ಆಕ್ಷೇಪ: ಜಾಹೀರಾತು ಹಿಂಪಡೆದು ಜೊಮಾಟೊ ಕ್ಷಮೆ

ಭೋಪಾಲ್ (ಪಿಟಿಐ): ಬಾಲಿವುಡ್ ನಟ ಹೃತಿಕ್ ರೋಷನ್ ನಟಿಸಿರುವ ಜೊಮಾಟೊ ಆನ್‌ಲೈನ್ ಫುಡ್ ಡೆಲಿವರಿ ಸಂಸ್ಥೆಯ ಜಾಹೀರಾತಿನಲ್ಲಿ ಹಿಂದೂ ಭಕ್ತರ ಭಾವನೆಗಳಿಗೆ ಧಕ್ಕೆಯಾಗಿದೆ ಎಂದು ಮಧ್ಯಪ್ರದೇಶದ ಮಹಾಕಾಳೇಶ್ವರ ದೇವಸ್ಥಾನದ ಅರ್ಚಕರು ಆಕ್ಷೇಪಿಸಿದ ಬೆನ್ನಲ್ಲೇ ಸಂಸ್ಥೆಯು ಭಾನುವಾರ ಜಾಹೀರಾತನ್ನು ಹಿಂಪಡೆದು, ಕ್ಷಮೆಯಾಚಿಸಿದೆ.

'ಈ ಜಾಹೀರಾತಿನಲ್ಲಿ ಮಹಾಕಾಳ್ ರೆಸ್ಟೋರೆಂಟ್ ಹೆಸರು ಉಲ್ಲೇಖಿಸಲಾಗಿತ್ತು. ಯಾರೊಬ್ಬರ ಭಾವನೆ ಮತ್ತು ನಂಬಿಕೆ ಘಾಸಿಗೊಳಿಸುವ ಉದ್ದೇಶವಿಲ್ಲ. ಈ ಬಗ್ಗೆ ಕ್ಷಮೆ ಕೋರುತ್ತೇವೆ' ಎಂದು ಜೊಮಾಟೊ ಕಂಪನಿ ಟ್ವಿಟರ್‌ನಲ್ಲಿ ತಿಳಿಸಿದೆ.

ಈ ಜಾಹೀರಾತಿನಲ್ಲಿ ಹೃತಿಕ್ ರೋಷನ್ 'ಉಜ್ಜಯಿನಿಯಲ್ಲಿ ಥಾಲಿ ಸವಿಯಬೇಕೆನಿಸಿತ್ತು. ಹಾಗಾಗಿ 'ಮಹಾಕಾಳ್'ನಿಂದ ತರಿಸಿಕೊಂಡೆ' ಎಂದು ಹೇಳುವ ಸಂಭಾಷಣೆ ಇತ್ತು.

ಮಹಾಕಾಳೇಶ್ವರದಲ್ಲಿ ಭಕ್ತರಿಗೆ ಅನ್ನದಾಸೋಹದ ಪ್ರಸಾದ ನೀಡಲಾಗುತ್ತದೆ. ದೇಗುಲದ ಅರ್ಚಕರಾದ ಮಹೇಶ್ ಮತ್ತು ಆಶೀಷ್ ಅವರು ಜೊಮಾಟೊ ಸಂಸ್ಥೆ ತಕ್ಷಣವೇ ಜಾಹೀರಾತು ಹಿಂಪಡೆದು, ಕ್ಷಮೆಯಾಚಿಸುವಂತೆ ಶನಿವಾರ ಒತ್ತಾಯಿಸಿದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ



ಬಿ.ಎಂ. ರಾಜಕುಮಾರಿ ಬಾಯಿ
ಜನನ : 05-04-1942 ನಿಧನ : 21-08-2022
ದಿ॥ ಬಿ.ಎನ್.ಮಹದೇವ್‌ಸಿಂಗ್‌ರವರ ಧರ್ಮಪತ್ನಿ
ಅಂತಿಮ ಸಂಸ್ಕಾರ ಬನಶಂಕರಿ ಚಿತಾಗಾರದಲ್ಲಿ 22-08-2022 ಸೋಮವಾರ ದಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 12 ರೊಳಗೆ
ದುಃಖತಪ್ತರು,
ಬಿ.ಎನ್. ಪವನ್ ಸಿಂಗ್ ಮತ್ತು ಕುಟುಂಬ
ಮೊಬೈಲ್ : 9980004734

ತ್ಯಾಗಿ ಸಮುದಾಯದಿಂದ 'ಮಹಾಪಂಚಾಯಿತಿ'

ಪ್ರಜಾವಾಣಿ ವಾರ್ತೆ

ಲಖನೌ: ಮನೆಗೆ ನುಗ್ಗಿ ಮಹಿಳೆಯನ್ನು ನಿಂದಿಸಿದ್ದ ಹಾಗೂ ಆಕೆಯ ಮೇಲೆ ಹಲ್ಲೆ ನಡೆಸಿದ್ದ ಆರೋಪದಡಿ ಬಂಧನಕ್ಕೊಳಗಾಗಿರುವ ರಾಜಕಾರಣಿ ಶ್ರೀಕಾಂತ್ ತ್ಯಾಗಿಯನ್ನು ಬೆಂಬಲಿಸಿ ತ್ಯಾಗಿ ಸಮುದಾಯದ ನಾಯಕರು ನೊಯ್ಡಾದ ಗೆಝಾ ಗ್ರಾಮದಲ್ಲಿರುವ ರಾಮಲೀಲಾ ಮೈದಾನದಲ್ಲಿ ಭಾನುವಾರ 'ಮಹಾ ಪಂಚಾಯಿತಿ' ನಡೆಸಿದ್ದಾರೆ. ಬಿಜೆಪಿ ವಿರುದ್ಧ ವಾಗ್ದಾಳಿಯನ್ನೂ ನಡೆಸಿದ್ದಾರೆ.

'ಬಿಜೆಪಿ ಮುಖಂಡ ಮಹೇಶ್ ಶರ್ಮಾ, ಶ್ರೀಕಾಂತ್ ಅವರನ್ನು ಉದ್ದೇಶಪೂರ್ವಕವಾಗಿ ಪ್ರಕರಣದಲ್ಲಿ ಸಿಲುಕಿಸಿದ್ದಾರೆ. ಪೊಲೀಸರು ಶ್ರೀಕಾಂತ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಕ್ಕೂ ಕುಮ್ಮಕ್ಕು ನೀಡಿದ್ದಾರೆ' ಎಂದು ಸಮುದಾಯದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಾನು ಬಿಜೆಪಿ ನಾಯಕ ಎಂದು ಹೇಳಿಕೊಂಡಿದ್ದ ಶ್ರೀಕಾಂತ್ ತ್ಯಾಗಿ ಅವರು ನೊಯ್ಡಾದ ಗ್ರ್ಯಾಂಡ್ ಒಮ್ಯಾಕ್ಸ್ ವಸತಿ ಸಮುಚ್ಚಯಕ್ಕೆ ನುಗ್ಗಿ ಮಹಿಳೆ ಮೇಲೆ ಹಲ್ಲೆ ನಡೆಸಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಎಫ್‌ಐಆರ್ ದಾಖಲಾದ ಕೂಡಲೇ ಅವರು ತಲೆಮರೆಸಿಕೊಂಡಿದ್ದರು. ಕೆಲ ದಿನಗಳ ಹಿಂದೆ ಮೀರತ್‌ನಲ್ಲಿ ತ್ಯಾಗಿ ಅವರನ್ನು ಪೊಲೀಸರು ಬಂಧಿಸಿದ್ದರು.

'ಶ್ರೀಕಾಂತ್ ತಪ್ಪು ಮಾಡಿದ್ದರೆ ಅವರನ್ನು ಶಿಕ್ಷಿಸಲಿ. ಆದರೆ ನೊಯ್ಡಾ ಪೊಲೀಸರು ವಿಚಾರಣೆ ನೆಪದಲ್ಲಿ ಠಾಣೆಗೆ ಕರೆಸಿ ಆತನ ಪತ್ನಿ ಹಾಗೂ ಚಿಕ್ಕಮ್ಮನಿಗೆ ಮಾನಸಿಕ ಹಿಂಸೆ ನೀಡಿದ್ದಾರೆ' ಎಂದು ಮುಖಂಡರು ದೂರಿದ್ದಾರೆ.

'ಇಎಸ್‌ಎ ಘೋಷಣೆ ಅನುಕೂಲಕರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಶ್ಚಿಮಘಟ್ಟಗಳಲ್ಲಿ ಸೂಕ್ಷ್ಮಪ್ರದೇಶಗಳನ್ನು (ಇಎಸ್‌ಎ) ಘೋಷಣೆ ಮಾಡುವ ಮೂಲಕ ಅದಕ್ಕೊಂದು ಸಾಂವಿಧಾನಿಕ ಭದ್ರತೆ ಸಿಗುವಂತೆ ಮಾಡಬೇಕು. ಆ ಮೂಲಕ, ಪರಿಸರ ವಿನಾಶಕಾರಿ ಯೋಜನೆಗಳಿಂದ ಈ ಸೂಕ್ಷ್ಮಪ್ರದೇಶಗಳಿಗೆ ರಕ್ಷಣೆ ನೀಡಲು ಸಾಧ್ಯ' ಎಂದು ಪರಿಸರ ಪರ 80ಕ್ಕೂ ಹೆಚ್ಚು ಸಂಘಟನೆಗಳ ಒಕ್ಕೂಟ 'ಯುನೈಟೆಡ್ ಕನ್ಸರ್ವೇಷನ್ ಮೂವ್‌ಮೆಂಟ್' ಪ್ರತಿಪಾದಿಸಿದೆ.

'ಪಶ್ಚಿಮಘಟ್ಟಗಳಲ್ಲಿ ಸೂಕ್ಷ್ಮಪ್ರದೇಶಗಳನ್ನು ಗುರುತಿಸುವ ಸಲುವಾಗಿ ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯವು ಜುಲೈ 6ರಂದು ಕರಡು ಅಧಿಸೂಚನೆ ಹೊರಡಿಸಿದೆ. ಮುಂದಿನ ಪೀಳಿಗೆಯ ಉತ್ತಮ ಭವಿಷ್ಯಕ್ಕೆ ಸುಸ್ಥಿರ ಅಭಿವೃದ್ಧಿ ಮಾದರಿಯನ್ನು ಅನುಸರಿಸುವುದು ಈ ಹೊತ್ತಿನ ತುರ್ತು. ಹೀಗಾಗಿ ಕರಡು ಅಧಿಸೂಚನೆಯಲ್ಲಿ ಕೈಬಿಟ್ಟಿರುವ ಸೂಕ್ಷ್ಮಪ್ರದೇಶಗಳನ್ನೂ ಪರಿಸರ ಸೂಕ್ಷ್ಮಪ್ರದೇಶಗಳೆಂದು ಘೋಷಿಸಬೇಕು' ಎಂದು ಸುದ್ದಿಗೋಷ್ಠಿಯಲ್ಲಿ 'ಫಾರೆಸ್ಟ್ ಫಸ್ಟ್' ಸಮಿತಿಯ ಮೀರಾ ರಾಜೇಶ್ ಅವರು ಆಗ್ರಹಿಸಿದರು.

'ಪಶ್ಚಿಮಘಟ್ಟಗಳಲ್ಲಿ ಸೂಕ್ಷ್ಮಪ್ರದೇಶ (ಇಎಸ್‌ಎ) ಘೋಷಣೆ ಇಂದ ಸ್ಥಳೀಯರಿಗೆ ಸಮಸ್ಯೆಯಾಗಲಿದೆ ಎಂದು ತಪ್ಪು ಮಾಹಿತಿ ನೀಡಲಾಗುತ್ತಿದೆ. ಜನಪ್ರತಿನಿಧಿಗಳು ಕೂಡಾ ಜನರಲ್ಲಿ ಭೀತಿ ಮೂಡಿಸುತ್ತಿದ್ದಾರೆ. ಆದರೆ, ಈ ಘೋಷಣೆಯಿಂದಾಗಿ ಅನಗತ್ಯ ಅಭಿವೃದ್ಧಿಯಿಂದ ಘಟ್ಟ ಪ್ರದೇಶಗಳು ನಾಶ ಆಗುವುದನ್ನು ನಿಲ್ಲಿಸಬಹುದು. ಪರಿಸರ ಸೂಕ್ಷ್ಮ ಹಳ್ಳಿಗಳೆಂದರೆ, ಅವು ರೈತರಿಗೆ ಹಾಗೂ ಅಲ್ಲಿ ವಾಸಿಸುವ ಇತರರಿಗೆ ಸುರಕ್ಷಿತ ಪ್ರದೇಶವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

'ಪಶ್ಚಿಮಘಟ್ಟಗಳ ರೈತರ ಕ್ಷೇಮಕ್ಕೆ ಪರಿಸರ ಸೂಕ್ಷ್ಮ ಪ್ರದೇಶ ಬೇಕಿದೆ. ಸಂರಕ್ಷಿತ ಅರಣ್ಯ ಪ್ರದೇಶಗಳಿಗೆ ಇನ್ನೂ ಹೆಚ್ಚಿನ ರಕ್ಷಣೆ ನೀಡುವ ಉದ್ದೇಶದಿಂದ 2000 ದಲ್ಲಿ ಪ್ರಣವ್ ಸೇನ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಸುಮಾರು ಒಂದು ದಶಕದ ನಂತರ ಪಶ್ಚಿಮಘಟ್ಟಗಳ ಸಂರಕ್ಷಣೆಯ ಸಲುವಾಗಿ ರಚಿಸಿದ ಪ್ರೊ. ಮಾಧವ ಗಾಡ್ಗಿಳ್ ನೇತೃತ್ವದ ಸಮಿತಿಯು ಪಶ್ಚಿಮಘಟ್ಟಗಳ ಶೇ 64 ರಷ್ಟು ಪ್ರದೇಶವನ್ನು ಸೂಕ್ಷ್ಮ ಪ್ರದೇಶವೆಂದು ಗುರುತಿಸಿತು. ಇಲ್ಲಿ ಗಣಿಗಾರಿಕೆ, ಕೆಂಪು ಪಟ್ಟಿಯಲ್ಲಿ ಬರುವ ಅಥವಾ ಮಾಲಿನ್ಯಕಾರಕ ಕಾರ್ಖಾನೆಗಳಿಗೆ ನಿಷೇಧ ಹೇರಿತ್ತು. ನಂತರದಲ್ಲಿ ಬಂದ ಡಾ. ಕಸ್ತೂರಿ ರಂಗನ್ ವರದಿಯು ಗಾಡ್ಗಿಳ್ ವರದಿಯ ಶಿಫಾರಸ್ಸಿಗೆ ವಿರುದ್ಧವಾಗಿ ಶೇ 37 ರಷ್ಟು ಭಾಗವನ್ನು ಮಾತ್ರ ಪರಿಸರ ಸೂಕ್ಷ್ಮಪ್ರದೇಶವೆಂದು ಶಿಫಾರಸು ಮಾಡಿತ್ತು. ನ್ಯಾಯಾಲಯದ ಮಧ್ಯಪ್ರವೇಶದ ಬಳಿಕವೂ ಯಾವುದೇ ಸರ್ಕಾರಗಳು ಪಶ್ಚಿಮಘಟ್ಟ ಸೂಕ್ಷ್ಮಪ್ರದೇಶಗಳನ್ನು ಗುರುತಿಸುವ ಬದಲು ವಿವಿಧ ವರದಿಗಳನ್ನು ಹಳಿಯುವ ಮತ್ತು ಜನರಿಗೆ ಸುಳ್ಳು ಹೇಳಿ ದಿಕ್ಕು ತಪ್ಪಿಸುವ ಕೆಲಸ ಮಾಡಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಿವಮೊಗ್ಗ 'ಸ್ವಾನ್' ಸಂಸ್ಥೆಯ ಅಖಿಲೇಶ್ ಚಿಪ್ಲಿ, ಕೊಡಗಿನವರಾದ ಕರ್ನಲ್ ಸಿ.ಪಿ.ಮುತ್ತಣ್ಣ, ವಿಜ್ಞಾನಿ ಹೇಮಂತ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಧ್ಯಕ್ಷ ಹುದ್ದೆಗೆ ಇನ್ನಿಲ್ಲದ ಲಾಬಿ

ಒಂದನೇ ಪುಟದಿಂದ

ಹೀಗಾಗಿ, ಕಾಂಗ್ರೆಸ್– ಜೆಡಿಎಸ್ ಮೈತ್ರಿ ಸರ್ಕಾರದ ಅವಧಿಯಲ್ಲಿ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಡಾ. ಅಂತೋಣಿ ಸೆಬಾಸ್ಟಿಯನ್ ಅವರ ಅವಧಿ ಪೂರ್ಣಗೊಳ್ಳುವ ಮುನ್ನವೇ ತಾರಾ ಅನೂರಾಧಾ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಲಾಗಿತ್ತು. ಅಂತೋಣಿ ಅವರನ್ನು ನೇಮಿಸಿ ಎಂಟು ತಿಂಗಳ ಬಳಿಕ ಆಯೋಗಕ್ಕೆ ಆರು ಸದಸ್ಯರನ್ನು ನೇಮಿಸಲಾಗಿತ್ತು.

ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆ ಅಥವಾ ಮಕ್ಕಳ ವಿರುದ್ಧದ ಆಪಾದನೆಗಳ ತ್ವರಿತ ವಿಲೇವಾರಿಗೆ ಮಕ್ಕಳ ನ್ಯಾಯಾಲಯ ಸ್ಥಾಪಿಸಲು ಕೇಂದ್ರ ಸರ್ಕಾರ 'ಮಕ್ಕಳ ಹಕ್ಕುಗಳ ರಕ್ಷಣೆ ಕಾಯ್ದೆ -2005' ಜಾರಿಗೆ ತಂದಿದೆ. ಈ ಕಾಯ್ದೆಯಡಿ 2007ರಲ್ಲಿ ರಾಜ್ಯ ಸರ್ಕಾರ 'ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ' ರಚಿಸಿ ಆದೇಶ ಹೊರಡಿಸಿತ್ತು.

'ಅಧ್ಯಕ್ಷ ಮತ್ತು ಸದಸ್ಯ ಸ್ಥಾನಗಳಿಗೆ ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಅಧ್ಯಕ್ಷ ಸ್ಥಾನ ಸಾಂವಿಧಾನಿಕ ಹುದ್ದೆ ಆಗಿರುವುದರಿಂದ ಈ ಹುದ್ದೆಗೆ ನಾಮನಿರ್ದೇಶನ ಅಥವಾ ನೇರ ನೇಮಕಾತಿಗೆ ಅವಕಾಶವಿಲ್ಲ. ಅಧ್ಯಕ್ಷ, ಸದಸ್ಯ ಸ್ಥಾನಕ್ಕೆ ಅರ್ಜಿ ಸಲ್ಲಿಸುವವರು ಮಕ್ಕಳ ಹಕ್ಕುಗಳು, ರಕ್ಷಣೆ ಮತ್ತು ಹಕ್ಕುಗಳನ್ನು ಪ್ರತಿಪಾದಿಸುವಲ್ಲಿ ಕನಿಷ್ಠ 5 ವರ್ಷ ಅನುಭವ ಹೊಂದಿರಬೇಕು. ನೇಮಕಕ್ಕೂ ಮೊದಲು ಅರ್ಜಿ ಆಹ್ವಾನಿಸಲಾಗುತ್ತದೆ. ಆದರೆ, ಅಧಿಕಾರದ ಆಸೆಯಿಂದ ಕೆಲವರು ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟು, ಶಿಫಾರಸು ಪತ್ರಗಳ ಮೂಲಕ ಲಾಬಿ ಮಾಡುತ್ತಿದ್ದಾರೆ' ಎಂದು ಅಧ್ಯಕ್ಷ ಸ್ಥಾನದ ಆಕಾಂಕ್ಷಿಯೊಬ್ಬರು ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಯಡಿಯೂರಪ್ಪಗೆ ಉನ್ನತ ಸ್ಥಾನ ರಾಜಕೀಯ ಪರಿಣಾಮವೇನು?
ಸಂವಾದ
ಭಾಗವಹಿಸುವವರು
ಅರುಣ್ ಶಹಾಪುರ ಬಿಜೆಪಿ ನಾಯಕ
ಲಾವಣ್ಯ ಬಲ್ಲಾಳ್ ಎಐಸಿಸಿ ವಕ್ತಾರೆ
ದೇವರಾಜ್ ಜೆಡಿಎಸ್ ವಕ್ತಾರ
ಮಧ್ಯಾಹ್ನ 12 ರಿಂದ 1
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/3wg3Tqw

ಬಸ್ ಖರೀದಿಯಲ್ಲಿ ಭ್ರಷ್ಟಾಚಾರ?: ತನಿಖೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಸರ್ಕಾರಕ್ಕೆ ಮತ್ತೊಂದು ಸಂಕಷ್ಟ ಎದುರಾಗಿದ್ದು, ಎಎಪಿ ನೇತೃತ್ವದ ಸರ್ಕಾರವು 1,000 ಬಸ್ ಖರೀದಿಯಲ್ಲಿ ಅವ್ಯವಹಾರ ನಡೆಸಿದೆ ಎಂಬ ಆರೋಪದ ಬಗ್ಗೆ ಸಿಬಿಐ ಪ್ರಾಥಮಿಕ ತನಿಖೆ ನಡೆಸುತ್ತಿದೆ. ಪೂರ್ವಭಾವಿ ತನಿಖೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದರೆ ಸಿಬಿಐ ಪ್ರಕರಣ ದಾಖಲಿಸಿಕೊಳ್ಳಲಿದೆ.

ಬಸ್ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ದೆಹಲಿಯ ಬಿಜೆಪಿ ಘಟಕವು ಕಳೆದ ವರ್ಷ ಸಲ್ಲಿಸಿದ್ದ ದೂರು ಆಧರಿಸಿ, ಹಿಂದಿನ ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಾಲ್ ಅವರು ತನಿಖೆಗೆ ಆದೇಶಿಸಿದ್ದರು. ₹890 ಕೋಟಿ ಮೌಲ್ಯದ ಸಾವಿರ ಬಸ್ ಖರೀದಿ ಹಾಗೂ ಬಸ್‌ಗಳ ನಿರ್ವಹಣೆಗೆ ₹350 ಕೋಟಿ ವೆಚ್ಚ ಮಾಡುವ ದೆಹಲಿ ಸರ್ಕಾರದ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಲಾಗಿತ್ತು. ಈ ಎರಡೂ ಗುತ್ತಿಗೆಯನ್ನು ಒಂದೇ ಕಂಪನಿಗೆ ನೀಡಲಾಗಿದ್ದು, 12 ವರ್ಷಗಳ ನಿರ್ವಹಣೆಗೆ ₹3,412 ಕೋಟಿ ವೆಚ್ಚವಾಗಲಿದೆ ಎಂದು ಬಿಜೆಪಿ ಹೇಳಿತ್ತು. ಹೀಗಾಗಿ ದೆಹಲಿ ಸರ್ಕಾರವು ಬಸ್ ಖರೀದಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿತ್ತು. ಪ್ರಕರಣವನ್ನು ಕೇಂದ್ರ ಗೃಹ ಸಚಿವಾಲಯಕ್ಕೆ ವರ್ಗಾಯಿಸಲಾಗಿತ್ತು. ಗೃಹ ಸಚಿವಾಲಯವು ಸಿಬಿಐ ತನಿಖೆಗೆ ಸೂಚಿಸಿತ್ತು. ಸಿಬಿಐ ತನಿಖೆ ಮೂಲಕ ಕಿರುಕುಳ ನೀಡಲಾಗುತ್ತಿದೆ ಎಂದು ಎಎಪಿ ಆರೋಪಿಸಿತ್ತು.

'ವಿಶ್ವಕ್ಕೆ ಭಾರತ ಮಾದರಿಯಾಗಿಸಲು ಆರೆಸ್ಸೆಸ್ ಶ್ರಮ'

ನವದೆಹಲಿ: 'ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ಸಮಾಜವನ್ನು ಜಾಗೃತಿಗೊಳಿಸುವ ಮತ್ತು ಒಗ್ಗೂಡಿಸುವ ಕೆಲಸವನ್ನು ಮಾಡುವ ಮೂಲಕ ಭಾರತವನ್ನು ಇಡೀ ವಿಶ್ವದಲ್ಲೇ ಮಾದರಿ ಸಮಾಜವನ್ನಾಗಿಸಲು ಶ್ರಮಿಸುತ್ತಿದೆ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಭಾನುವಾರ ಹೇಳಿದ್ದಾರೆ.

ಆರ್‌ಎಸ್‌ಎಸ್‌ನ ದೆಹಲಿ ಘಟಕದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನಮ್ಮ ಸಮಾಜದ ವಿವಿಧ ವರ್ಗಗಳ ಅನೇಕ ವ್ಯಕ್ತಿಗಳು ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನದ ಜತೆಗೆ ಕೊಡುಗೆಯನ್ನೂ ನೀಡಿದ್ದಾರೆ. ಆದರೆ, ನಾವು ಒಂದು ಸಮಾಜವಾಗಿ ಒಗ್ಗೂಡಿ ಮುಂಚೂಣಿಗೆ ಬರಲು ಸಮಯ ಹಿಡಿಯಿತು' ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

'ಸಮಾಜಮುಖಿಯಾಗಿ ಚಿಂತನೆ ನಡೆಸುವಂಥದ್ದು ಭಾರತೀಯರ ಮೂಲ ಸ್ವಭಾವ. ಇದು ಅವರ ಡಿಎನ್‌ಎಯಲ್ಲೇ ಬಂದಿದೆ. ಇಂಥ ಗುಣಗಳನ್ನು ನಾವು ಪ್ರೋತ್ಸಾಹಿಸಬೇಕು. ಅಂತೆಯೇ ಆರ್‌ಎಸ್‌ಎಸ್‌ನ ಕಾರ್ಯಕರ್ತರು ತಮ್ಮ ವೈಯಕ್ತಿಕ ಹಿತಾಸಕ್ತಿಗಳತ್ತ ಗಮನ ಕೊಡದೇ ಸಮಾಜಮುಖಿಯಾಗಿ ಕೆಲಸ ಮಾಡಬೇಕು' ಎಂದೂ ಅವರು ಸಲಹೆ ನೀಡಿದರು.

'ಯಾವುದೇ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡುವಾಗ ಕಾರ್ಯಕರ್ತರು 'ನಾನು ಮತ್ತು ನನ್ನದು' ಎಂಬುದಕ್ಕಿಂತ 'ನಮಗೆ, ನಮ್ಮದು' ಎನ್ನುವುದಕ್ಕೆ ಆದ್ಯತೆ ನೀಡಬೇಕು. ಇದು ಸಮಾಜವು ವಿಕಾಸಗೊಳ್ಳಲು ಸಹಾಯ ಮಾಡುತ್ತದೆ' ಎಂದೂ ಭಾಗವತ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಗೆ ಚುನಾವಣಾ ಪ್ರಕ್ರಿಯೆ ಆರಂಭ

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಗೆ ಭಾನುವಾರ ಚುನಾವಣಾ ಪ್ರಕ್ರಿಯೆ ಆರಂಭಗೊಂಡಿದ್ದು, ಸೆಪ್ಟೆಂಬರ್ 20ರ ವೇಳೆಗೆ ಇದು ಪೂರ್ಣಗೊಳ್ಳಲಿದೆ ಎಂದು ಪಕ್ಷದ ಕೇಂದ್ರೀಯ ಚುನಾವಣಾ ಪ್ರಾಧಿಕಾರ ತಿಳಿಸಿದೆ.

'ಆಗಸ್ಟ್ 21 ರಿಂದ ಸೆಪ್ಟೆಂಬರ್ 20ರ ನಡುವೆ ಯಾವ ದಿನ ಚುನಾವಣೆ ನಡೆಸಬೇಕು ಎಂಬುದನ್ನು ಕಾಂಗ್ರೆಸ್ ಕಾರ್ಯಕಾರಿ ಮಂಡಳಿ (ಸಿಡಬ್ಲ್ಯುಸಿ) ನಿರ್ಧರಿಸಲಿದೆ' ಎಂದು ಕೇಂದ್ರೀಯ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಧುಸೂದನ್ ಮಿಸ್ತ್ರಿ ಹೇಳಿದ್ದಾರೆ.

'ನಿಗದಿತ ವೇಳಾಪಟ್ಟಿಯ ಪ್ರಕಾರವೇ ಚುನಾವಣೆ ನಡೆಸಲು ತೀರ್ಮಾನಿಸಲಾಗಿದೆ. ಪಕ್ಷದ ನಾಯಕರಿಗೆ ಈಗಾಗಲೇ ವೇಳಾಪಟ್ಟಿ ಕಳುಹಿಸಲಾಗಿದೆ. ಸಿಡಬ್ಲ್ಯುಸಿಯ ಅನುಮತಿಗಾಗಿ ನಾವು ಕಾಯುತ್ತಿದ್ದೇವೆ. ಮತ ಚಲಾಯಿಸಲಿರುವವರ ಪಟ್ಟಿ ಸಿದ್ಧಪಡಿಸಲಾಗುತ್ತದೆ' ಎಂದರು.

ಮಾಜಿ ಐಪಿಎಸ್ ಅಧಿಕಾರಿಗೆ ಸಮನ್ಸ್

ಅಹಮದಾಬಾದ್: 2002ರ ಗುಜರಾತ್ ಗಲಭೆ ಪ್ರಕರಣಗಳಲ್ಲಿ ನಿರಪರಾಧಿಗಳನ್ನು ಸಿಲುಕಿಸಲು ಹುಸಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂಬ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಮಾಜಿ ಐಪಿಎಸ್ ಅಧಿಕಾರಿ ರಾಹುಲ್ ಶರ್ಮಾಗೆ ಭಾನುವಾರ ಸಮನ್ಸ್ ನೀಡಿದೆ.

'ಪ್ರಕರಣದ ಸಂಬಂಧ ರಾಹುಲ್ ಅವರ ಹೇಳಿಕೆ ದಾಖಲಿಸಬೇಕಿದೆ. ಹೀಗಾಗಿ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದ್ದೇವೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಜನಸಾಮಾನ್ಯರಿಗೆ ಹೆಚ್ಚು ತೆರಿಗೆ: ರಾಹುಲ್ ಟೀಕೆ

ನವದೆಹಲಿ (ಪಿಟಿಐ): 'ಕಾರ್ಪೊರೇಟ್ ಸಂಸ್ಥೆಗಳಿಗಿಂತ ಕೇಂದ್ರ ಸರ್ಕಾರ ಜನಸಾಮಾನ್ಯರ ಮೇಲೆ ತೆರಿಗೆ ವಿಧಿಸಿ ಹೆಚ್ಚು ಆದಾಯ ಗಳಿಸುತ್ತಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಟೀಕಿಸಿದ್ದರೆ, 'ತಪ್ಪು ಅಂಕಿಅಂಶ ನೀಡಿ ದೇಶವನ್ನು ದಾರಿತಪ್ಪಿಸಲು ಯತ್ನಿಸುತ್ತಿದ್ದಾರೆ' ಎಂದು ಬಿಜೆಪಿಯು ಪ್ರತಿಕ್ರಿಯಿಸಿದೆ.

'ದೇಶದ ಎಲ್ಲ ದತ್ತಾಂಶವನ್ನು ತಪ್ಪು ದಾರಿಗೆ ಎಳೆಯಲು ಸಾಧ್ಯ ಇರುವುದು ರಾಹುಲ್ ಗಾಂಧಿ ಸ್ಕೂಲ್ ಆಫ್ ಎಕನಾಮಿಕ್ಸ್ ನಲ್ಲಿ ಮಾತ್ರ. ಜನರ ತೆರಿಗೆ ಮತ್ತು ಕಾರ್ಪೊರೇಟ್ ತೆರಿಗೆಗಳು ಸೇರಿದರೆ ಶೇ 100 ಆಗುವುದಿಲ್ಲ' ಎಂದು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ.

ನರೇಂದ್ರ ಮೋದಿ ಸರ್ಕಾರ ಜನರಿಂದ ಹೆಚ್ಚು ತೆರಿಗೆ ವಸೂಲಿ ಮಾಡುತ್ತಿದೆ ಎಂಬುದನ್ನು ರಾಹುಲ್ ಅವರು ತಮ್ಮ ಟ್ವಿಟರ್‌ನಲ್ಲಿ ಇನ್ಫೋಗ್ರಾಫಿಕ್ಸ್ ಸಹಿತ ಮಾಹಿತಿ ಹಂಚಿಕೊಂಡಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
General
ಪ್ರತಿತಿಂಗಳು 65,000/ ರಿಂದ 90,000/ ಗಳಿಸಿರಿ. ಪೇಪರ್ ಬ್ಯಾಗ್ಸ್, LEDಬಲ್ಬ್ಸ್, ಟೀಕಪ್ಸ್‌ಗಳ ಉತ್ಪಾದನಾ ಘಟಕವನ್ನು ಮನೆಯಲ್ಲಿಯೇ ಅಳವಡಿಸಿ. ನಾವು ಮರುಖರೀದಿಯ ಒಪ್ಪಂದದ ಜೊತೆಗೆ, ಉಚಿತವಾಗಿ ರಾಮೆಟಿರಿಯಲ್ ಗಳನ್ನು ನೀಡುತ್ತೇವೆ. ವಿವರಗಳಿಗಾಗಿ: 8527650177

ಭವಿಷ್ಯ
Astrology
★॥ಶ್ರೀಗುರು ರಾಘವೇಂದ್ರಸ್ವಾಮಿ॥★ ಆರಾದನೆಯಿಂದ ಪ್ರೀತಿಪ್ರೇಮ,ವಶೀಕರಣ, ವ್ಯಾಪಾರ,ಸಂತಾನ, ಸಾಲಭಾದೆ, ಕೋರ್ಟ್‌ಕೇಸ್ ಇನ್ನೂ ಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 8317227470

ವಾಹನ
Four Wheelers Selling
Others

ಉದ್ಯೋಗಾವಕಾಶ
General
ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಸುವರ್ಣ ಅವಕಾಶ: ಫಾರಂನಲ್ಲಿ ಅಂಕಿಗಳು ತುಂಬುವ ಮತ್ತು ಬುಕ್ ಬರೆಯುವ ಮೂಲಕ ಗಳಿಸಿ,5 ದಿನಕ್ಕೆ 8,000-9,000/- ಕೊರಿಯರ್ ಸೌಲಭ್ಯವಿದೆ. 9108059956, 9901929956.

ಪ್ರವಾಸ
Travel
13.09.2022 06.10.2022 14.11.2022 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 14.10.2022 06.11.2022 ದುಬೈ 5 ದಿನಗಳು. 09.09.2022 19.10.2022 27.11.2022 ನೇಪಾಳ 11 ದಿನಗಳು. 06.10.2022 02.11.2022 06.12.2022 ಕಾಶಿ,ಗಯಾ,ಅಯೋಧ್ಯ 7ದಿನಗಳು. 14.09.2022 13.10.2022 12.11.2022 ಗುಜರಾತ್ 8ದಿನಗಳು. 27.09.2022 21.10.2022 20.11.2022 ರಾಜಸ್ಥಾನ್ 8 ದಿನಗಳು. 07.10.2022 11.11.2022 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು-3 9448402248 7022547922

8/10 ದಿನಗಳ ಕಾಶಿ,ಗಯಾ,ಅಯೋಧ್ಯ, ನೈಮಿಶಾರಣ್ಯ ಗೋರಕ್‌ಪುರ್. 13/23 ದಿನಗಳ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮುನೋತ್ರಿ ವೈಷ್ಣೋದೇವಿ ಅಮೃತ್‌ಸರ್ ದೆಹಲಿ ಹಾಗು 14 ದಿನಗಳ ಪಂಚದ್ವಾರಕಾ ಮಾತೃಗಯಾ,ಉಜ್ಜಯಿನಿ ಅಗಸ್ಟ್ ಸೆಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ ಶ್ರೀಸುಧಾ ಟ್ರಾವಲ್ಸ್ 080-22429289 9019301300 9448119290

EDUCATION CORNER
ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
THE RcsS SPOKEN ENGLISH ACADEMY
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

ದೆಹಲಿ ಆಗ್ರಾ ಮಥುರ ಕಾಶಿ,ಗಯಾ ಪ್ರಯಾಗ 12.09.2022, 07.10.2022 ರಿಂದ 13/8 ದಿನಗಳು. ಯುಮುನೋತ್ರಿ ಗಂಗೋತ್ರಿ ಕೇದಾರನಾಥ ಬದರಿನಾಥ್ 07.10.2022 ರಿಂದ 14 ದಿನಗಳು. ಸೋಮನಾಥ್ ದ್ವಾರಕಾ,ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ್ 30.10.2022 ರಿಂದ 15/10 ದಿನಗಳು. ಕುಲು,ಮನಾಲಿ ವೈಷ್ಣೋದೇವಿ ಶಕ್ತಿಪೀಠಗಳು 30.10.2022 ರಿಂದ 12 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು18

01.09.22,15.09.22, 08.10.22 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. 06.10.22 ನೇಪಾಳ, ಮುಕ್ತಿನಾಥ್, ಕಾಶಿ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ್) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads Online Log in to dhclassifieds.com
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331



ಪ್ರಿಯಾಂಕ್ ಪಾಂಚಾಲ್

ಭಾರತ 'ಎ' ತಂಡಕ್ಕೆ ಪ್ರಿಯಾಂಕ್?

ನವದೆಹಲಿ(ಪಿಟಿಐ): ಬೆಂಗಳೂರಿನಲ್ಲಿ ನಡೆಯಲಿರುವ ನ್ಯೂಜಿಲೆಂಡ್ 'ಎ' ತಂಡದ ಎದುರಿನ 'ಟೆಸ್ಟ್' ಪಂದ್ಯಗಳಲ್ಲಿ ಆಡುವ ಭಾರತ ಎ ತಂಡಕ್ಕೆ ಪ್ರಿಯಾಂಕ್ ಪಾಂಚಾಲ್ ನಾಯಕತ್ವ ವಹಿಸುವ ನಿರೀಕ್ಷೆ ಇದೆ.

ಚೇತನ್ ಶರ್ಮಾ ಅಧ್ಯಕ್ಷತೆಯ ರಾಷ್ಟ್ರೀಯ ಆಯ್ಕೆ ಸಮಿತಿಯು ಸೋಮವಾರ ತಂಡವನ್ನು ಪ್ರಕಟಿಸಲಿದೆ. ಪಾಂಚಾಲ್ ಅವರು ಈಚೆಗೆ ದಕ್ಷಿಣ ಆಫ್ರಿಕಾ ಎ ತಂಡದ ಎದುರಿನ ಸರಣಿಯಲ್ಲಿಯೂ ನಾಯಕತ್ವ ವಹಿಸಿದ್ದರು.

ಭಾರತ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ಅನುಭವಿ ಆಟಗಾರ ಅಜಿಂಕ್ಯ ರಹಾನೆ ಅವರು ದುಲೀಪ್ ಟ್ರೋಫಿ ಟೂರ್ನಿಯಲ್ಲಿ ಆಡುವ ಸಾಧ್ಯತೆ ಇದೆ. ಆ ಮೂಲಕ ಮತ್ತೆ ರಾಷ್ಟ್ರೀಯ ತಂಡಕ್ಕೆ ಮರಳುವ ಪ್ರಯತ್ನ ಮಾಡಲಿದ್ದಾರೆ.

ಕಳೆದ ಐಪಿಎಲ್ ಟೂರ್ನಿಯಲ್ಲಿ ರಹಾನೆ ತೊಡೆಸ್ನಾಯುವಿನ ಗಾಯಕ್ಕೊಳಗಾಗಿದ್ದರು. ಈಗ ಚೇತರಿಸಿಕೊಂಡಿರುವ ಅವರು ತಂಡಕ್ಕೆ ಮರಳಲಿದ್ದಾರೆ.

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ಮೈಸೂರು ವಾರಿಯರ್ಸ್‌ಗೆ ನಿರಾಸೆ

ಮನೀಷ್ ಅರ್ಧಶತಕ; ಗುಲ್ಬರ್ಗಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ಮನೀಷ್ ಪಾಂಡೆ ಅವರ ಅರ್ಧಶತಕದ ಬಲದಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಮೈಸೂರು ವಾರಿಯರ್ಸ್ ವಿರುದ್ಧ ಗೆಲುವು ಸಾಧಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ನಡೆದ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಇದರಿಂದಾಗಿ ವಿ.ಜಯದೇವನ್ ನಿಯಮದನ್ವಯ ನಡೆದ ಪಂದ್ಯದಲ್ಲಿ ಗುಲ್ಬರ್ಗ ತಂಡವು 7 ರನ್‌ಗಳ ಜಯ ಗಳಿಸಿತು.

ಟಾಸ್ ಗೆದ್ದ ಮೈಸೂರು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಗುಲ್ಬರ್ಗ ತಂಡವು 17.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 148 ರನ್ ಗಳಿಸಿದಾಗ ಮಳೆ ಸುರಿಯಿತು. ಇದರಿಂದಾಗಿ ಮೈಸೂರು ತಂಡಕ್ಕೆ 11 ಓವರ್‌ಗಳಲ್ಲಿ 110 ರನ್ ಗಳಿಸುವ ಗುರಿ ನೀಡಲಾಯಿತು.

ಗುಲ್ಬರ್ಗ ತಂಡದ ನಾಯಕ ಮನೀಷ್ ಪಾಂಡೆ (ಅಜೇಯ 57; 27ಎಸೆತ, 4X3, 6X4) ಹಾಗೂ ಜಸ್ವಂತ್ ಆಚಾರ್ಯ (34; 21ಎ. 6X4, 4X1) ಮಿಂಚಿದರು.

ಮೈಸೂರಿನ ಶ್ರೇಯಸ್ ಗೋಪಾಲ್ (45ಕ್ಕೆ2 ಹಾಗೂ 32 ರನ್) ಆಲ್‌ರೌಂಡ್ ಆಟವಾಡಿದರು.

ಬೆಂಗಳೂರು ಬ್ಲಾಸ್ಟರ್ಸ್‌ಗೆ ರೋಚಕ ಜಯ: ದಿನದ ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ರೋಚಕ ಜಯ ಸಾಧಿಸಿತು.

ಹುಬ್ಬಳ್ಳಿ ಟೈಗರ್ಸ್ ಎದುರು ನಡೆದ ಹಣಾಹಣಿಯಲ್ಲಿ ಎರಡು ರನ್‌ಗಳಿಂದ ಬೆಂಗಳೂರು ಗೆದ್ದಿತು.

ಮೊದಲು ಬ್ಯಾಟ್ ಮಾಡಿದ ಬೆಂಗಳೂರು, ಶಿವಕುಮಾರ್ ರಕ್ಷಿತ್ (50) ಅವರ ಅರ್ಧಶತಕದ ಬಲದಿಂದ ನಿಗದಿತ ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 171 ರನ್ ಗಳಿಸಿತು.

ಮನೀಷ್ ಪಾಂಡೆ ಆಟದ ವೈಖರಿ

ಮಹಾರಾಜ ಟ್ರೋಫಿ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ನೆಟ್ ರನ್‌ರೇಟ್
ಬೆಂಗಳೂರು	10	7	3	14	+0.965
ಗುಲ್ಬರ್ಗ	9	6	3	12	+0.470
ಮೈಸೂರು	10	5	5	10	+0.210
ಹುಬ್ಬಳ್ಳಿ	9	4	5	8	-0.090
ಮಂಗಳೂರು	9	4	5	8	-0.999
ಶಿವಮೊಗ್ಗ	9	2	7	4	-0.735

ಗುರಿ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 20 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 169 ರನ್ ಗಳಿಸಿ ಸೋಲೊಪ್ಪಿಕೊಂಡಿತು. ಮೊಹಮ್ಮದ್ ತಾಹಾ (71 ರನ್) ಅವರ ಆಟ ವ್ಯರ್ಥವಾಯಿತು.

ಸಂಕ್ಷಿಪ್ತ ಸ್ಕೋರುಗಳು: ಗುಲ್ಬರ್ಗ ಮಿಸ್ಟಿಕ್ಸ್: 17.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 148 (ಮನೀಷ್ ಪಾಂಡೆ ಔಟಾಗದೆ 57, ಜಸ್ವಂತ್ ಆಚಾರ್ಯ 34, ಕೃಷ್ಣನ್ ಶ್ರೀಜಿತ್ 30, ಶ್ರೇಯಸ್ ಗೋಪಾಲ್ 45ಕ್ಕೆ 2) ಮೈಸೂರು ವಾರಿಯರ್ಸ್: 11 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 102 (ಶ್ರೇಯಸ್ ಗೋಪಾಲ್ 32, ಪವನ್ ದೇಶಪಾಂಡೆ 25, ಕಾರ್ತಿಕ್ 19ಕ್ಕೆ 2, ರಿತೇಶ್ ಭಟ್ಕಳ್ 8ಕ್ಕೆ 2) ಫಲಿತಾಂಶ: ಗುಲ್ಬರ್ಗ ಮಿಸ್ಟಿಕ್ಸ್‌ಗೆ 7 ರನ್‌ಗಳ ಜಯ (ವಿಜೆಡಿ ಪದ್ಧತಿ).

ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 8ಕ್ಕೆ 171 (ಕುಶ್ ಮರಾಠೆ 23, ಶಿವಕುಮಾರ್ ರಕ್ಷಿತ್ 50, ಅನಿರುದ್ಧ ಜೋಷಿ 33, ಕ್ರಾಂತಿ ಕುಮಾರ್ 13; ಬಿ.ಯು. ಶಿವಕುಮಾರ್ 33ಕ್ಕೆ 2, ಶರಣ್ ಗೌಡ 24ಕ್ಕೆ 3, ಅಭಿಮನ್ಯು ಮಿಥುನ್ 20ಕ್ಕೆ 1).

ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 7ಕ್ಕೆ 169 (ಲವನೀತ್ ಸಿಸೋಡಿಯಾ 15, ಬಿ.ಯು. ಶಿವಕುಮಾರ್ 17, ಮೊಹಮ್ಮದ್ ತಾಹಾ 71, ಲಿಯಾನ್ ಖಾನ್ 18; ತುಷಾರ್ ಸಿಂಗ್ 15, ಅಭಿಮನ್ಯು ಮಿಥುನ್ 15; ಸಂತೋಕ್ ಸಿಂಗ್ 38ಕ್ಕೆ 2, ಜಗದೀಶ್ ಸುಚಿತ್ 20ಕ್ಕೆ 3, ಟಿ. ಪ್ರದೀಪ್ 30ಕ್ಕೆ 1) **ಫಲಿತಾಂಶ:** ಬೆಂಗಳೂರು ಬ್ಲಾಸ್ಟರ್ಸ್ ತಂಡಕ್ಕೆ ಎರಡು ರನ್‌ಗಳ ಜಯ.

ಇಂದಿನ ಪಂದ್ಯಗಳು: ಶಿವಮೊಗ್ಗ ಸ್ಟ್ರೈಕರ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ಮಧ್ಯಾಹ್ನ 3)

ಹುಬ್ಬಳ್ಳಿ ಟೈಗರ್ಸ್–ಮಂಗಳೂರ್ ಯುನೈಟೆಡ್ (ರಾತ್ರಿ 7)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಫ್ಯಾನ್ ಕೋಡ್ ಆಫ್

ಈಜು: ಜೆಡಿಡಾ, ಶಾಲಿನಿ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಜೆಡಿಡಾ ಅಜಿತ್ ಅವರು ಖೇಲೊ ಇಂಡಿಯಾ ಮಹಿಳೆಯರ ಸರಣಿ ಈಜು ಕೂಟದಲ್ಲಿ ಮತ್ತೆ ಮಿಂಚಿದರು.

ಇಲ್ಲಿ ಮುಕ್ತಾಯವಾದ ಕೂಟದಲ್ಲಿ ಭಾನುವಾರ ಅವರು ತಲಾ ಒಂದು ಚಿನ್ನ ಮತ್ತು ಬೆಳ್ಳಿ ಪದಕ ಜಯಿಸಿದರು. ಮಹಿಳೆಯರ 200 ಮೀ. ಬಟರ್‌ಫ್ಲೈನಲ್ಲಿ (2 ನಿಮಿಷ. 27. 98 ಸೆಕೆಂಡು) ಅಗ್ರಸ್ಥಾನ ಗಳಿಸಿದರೆ, 100 ಮೀ. ಫ್ರೀಸ್ಟೈಲ್ (1 ನಿ. 2.13ಸೆ.) ಬೆಳ್ಳಿ ಜಯಿಸಿದರು.

ಶಾಲಿನಿ ಆರ್. ದೀಕ್ಷಿತ್, ತನಿಷಾ ಗುಪ್ತಾ, ಅಸ್ಮಿತಾ ಚಂದ್ರ ಕೂಡ ಚಿನ್ನದ ಪದಕದ ಸಾಧನೆ ಮಾಡಿದರು.

ಫಲಿತಾಂಶಗಳು: ಮಹಿಳೆಯರು: 400 ಮೀ. ಫ್ರೀಸ್ಟೈಲ್: ಅಸ್ಮಿತಾ ಚಂದ್ರ (4 ನಿ. 44.10 ಸೆಕೆಂಡು)–1, ಅನುಮತಿ ಅನಿಲ್ ಚೌಗುಲೆ–2, ಅನ್ವಯಿ ಎಸ್. ಮಸ್ಕೆ–3 (ಮೂವರು ಕರ್ನಾಟಕದವರು). 200 ಮೀ. ಬಟರ್‌ಫ್ಲೈ: ಜೆಡಿಡಾ ಅಜಿತ್ (2ನಿ.27. 98ಸೆ.)–1, ತಿತೀಕ್ಷಾ ಹನುಮಂತರಾಜು–2, ಅನ್ನಾ ಸ್ಫೂರ್ತಿ ತೆರೇಸಾ–3 (ಎಲ್ಲರೂ ಕರ್ನಾಟಕ). 200 ಮೀ. ಬ್ಯಾಕ್‌ಸ್ಟ್ರೋಕ್: ಶ್ರೇಯಾ ಮೇರಿ ಕಮಲ್ (ಕೇರಳ, 2 ನಿ. 34.79 ಸೆ)–1, ನೈಶಾ ಶೆಟ್ಟಿ–2, ಹಿತಾಶ್ರೀ ನಾಗರಾಜ–3 (ಇಬ್ಬರೂ ಕರ್ನಾಟಕ). 100 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್.ಲಕ್ಷ್ಯಾ ಶಿವಾನಂದ (1 ನಿ. 19.29ಸೆ)–1, ಹಿತೈಷಿ ವಿ.–2, ಮೇಘಾಂಜಲಿ ಬಿರಾದಾರ–3 (ಮೂವರೂ ಕರ್ನಾಟಕ). 100 ಮೀ. ಫ್ರೀಸ್ಟೈಲ್: ಲೇತಿಶಾ ಮಂದಣ್ಣ (1 ನಿ.0.73 ಸೆ.)–1, ಜೆಡಿಡಾ ಅಜಿತ್–2, ಅಸ್ಮಿತಾ ಚಂದ್ರ–3 (ಮೂವರೂ ಕರ್ನಾಟಕ).

ಬಾಲಕಿಯರು: 400 ಮೀ. ಫ್ರೀಸ್ಟೈಲ್: ಶಿರಿನ್ (4 ನಿ.41.90 ಸೆ.)–1, ಅದಿತಿ ಮುಲಾಯ್–2, ರುಜುಲಾ ಶಶಿಧರ್–3 (ಎಲ್ಲರೂ ಕರ್ನಾಟಕ). 200 ಮೀ. ಬಟರ್‌ಫ್ಲೈ: ತನಿಶಿ ಗುಪ್ತಾ (2 ನಿ.30. 24ಸೆ.)–1, ರಿತಿಕಾ ಮಹೇಶ್ ಬೆಂಗಳೂರು–2, ಸಭಾ ಸುಹಾನಾ–3 (ಮೂವರೂ ಕರ್ನಾಟಕ). 200 ಮೀ. ಬ್ಯಾಕ್‌ಸ್ಟ್ರೋಕ್: ಶಾಲಿನಿ ಆರ್. ದೀಕ್ಷಿತ್ (2 ನಿ. 32.65 ಸೆ.)–1, ಅಂಬರ್ ಜೆ. ಸಿಂಗ್–2, ಮೀನಾಕ್ಷಿ ಮೆನನ್–3 (ಮೂವರು ಕರ್ನಾಟಕ). 100 ಮೀ. ಬ್ರೆಸ್ಟ್‌ಸ್ಟ್ರೋಕ್: ಲಿನೇಶಾ ಅನಿಲ್‌ಕುಮಾರ್ (1 ನಿ. 17.02ಸೆ.)–1, ವಿಹಿತಾ ನಯನಾ–2, ರಿಯಾನಾ ಫರ್ನಾಂಡೀಸ್–3 (ಮೂವರೂ ಕರ್ನಾಟಕ). 100 ಮೀ. ಫ್ರೀಸ್ಟೈಲ್: ರುಜುಲಾ ಶಶಿಧರ್ (1 ನಿ. 1.48ಸೆ.)–1, ಧೀನಿಧಿ ದೇಸಿಂಗು–2, ಆರ್ನಾ ಎಂ.ಪಿ.–3 (ಮೂವರು ಕರ್ನಾಟಕ).

ಶಾಲಿನಿ ಆರ್. ದೀಕ್ಷಿತ್

ಫುಟ್‌ಬಾಲ್: ಕೆಂಪ್ ಎಫ್‌ಸಿಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಲ್ನುನ್ಸಿಯಾಮಿ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಕೆಂಪ್ ಎಫ್‌ಸಿ ತಂಡವು ಕರ್ನಾಟಕ ವಿಮೆನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಗೆಲುವು ದಾಖಲಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಕೆಂಪ್ ಎಫ್‌ಸಿ 12–1ರಿಂದ ರೆಬೆಲ್ಸ್ ವಿಮೆನ್ಸ್ ತಂಡಕ್ಕೆ ಸೋಲುಣಿಸಿತು. ಲಲ್ನುಲ್ನಿಸಿಯಾಮಿ 3, 36 ಮತ್ತು 39ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ಮಿಸಾಕಾ ಯುನೈಟೆಡ್ ಎಫ್‌ಸಿ 5–0ಯಿಂದ ರೂಟ್ಸ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ನಿಸಿಲಿಯಾ ಮಜಾವ್ (27, 47 ಮತ್ತು 67ನೇ ನಿಮಿಷ) ಹ್ಯಾಟ್ರಿಕ್ ದಾಖಲಿಸಿದರು.

ಸೋಮವಾರ ನಡೆಯುವ ಪಂದ್ಯಗಳಲ್ಲಿ ಪಿಂಕ್ ಪ್ಯಾಂಥರ್ಸ್–ಮಾಡರ್ನ್ ಗರ್ಲ್ಸ್ ಎಫ್‌ಸಿ, ಮಾತೃ ಪ್ರತಿಷ್ಠಾನ ಎಫ್‌ಸಿ– ಕಿಕ್‌ಸ್ಟಾರ್ಟ್ ಎಫ್‌ಸಿ ಆಡಲಿವೆ.

ಸಂಕ್ಷಿಪ್ತ ಸುದ್ದಿ

ಪೇಟಿಎಂ ಸಿಇಒ: ವಿಜಯ್ ಶೇಖರ್ ಶರ್ಮ ಮರುನೇಮಕ

ನವದೆಹಲಿ (ಪಿಟಿಐ): ಪೇಟಿಎಂನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಮತ್ತು ವ್ಯವಸ್ಥಾಪಕ ನಿರ್ದೇಶಕ ಆಗಿ ವಿಜಯ್ ಶೇಖರ್ ಶರ್ಮಾ ಅವರನ್ನು ಮರುನೇಮಕ ಮಾಡಲು ಷೇರುದಾರರು ಒಪ್ಪಿಗೆ ನೀಡಿದ್ದಾರೆ.

ಕಂಪನಿಯು ಭಾನುವಾರ ಸಲ್ಲಿಸಿರುವ ವರದಿಯ ಪ್ರಕಾರ, ಒಟ್ಟು ಷೇರುದಾರರಲ್ಲಿ ಶೇಕಡ 99.67ರಷ್ಟು ಜನರು ಮರುನೇಮಕದ ಪರವಾಗಿ ಮತ ಚಲಾಯಿಸಿದ್ದಾರೆ. ಶೇ 0.33ರಷ್ಟು ಮಾತ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಮರುನೇಮಕ ಮಾಡುವುದಕ್ಕೆ ಹೂಡಿಕೆದಾರರ ಸಲಹಾ ಸಂಸ್ಥೆ ಲಿಯಾಸ್ (liAS) ವಿರೋಧ ವ್ಯಕ್ತಪಡಿಸಿತ್ತು. ಕಂಪನಿಯಯನ್ನು ಲಾಭದಾಯಕವಾಗಿಸುವುದು ಸೇರಿದಂತೆ ಹಲವು ವಾಗ್ದಾನಗಳನ್ನು ಶರ್ಮಾ ಮಾಡಿದ್ದರು. ಆದರೆ ಯಾವುವೂ ಈಡೇರಿಲ್ಲ ಎಂದು ಅದು ಹೇಳಿದೆ.

ಬಡ್ಡಿದರ ಏರಿಕೆ ಪರಿಣಾಮ ಸದ್ಯಕ್ಕಿಲ್ಲ: ಮಾರುತಿ

ನವದೆಹಲಿ (ಪಿಟಿಐ): 'ಬಡ್ಡಿದರ ಹೆಚ್ಚಳವು ವಾಹನ ಬೇಡಿಕೆಯ ಮೇಲೆ ಇನ್ನೂ ಪರಿಣಾಮ ಬೀರಿಲ್ಲ. ಆದರೆ, ಸೆಮಿಕಂಡಕ್ಟರ್ ಕೊರತೆಯು ನಿವಾರಣೆ ಆದ ಬಳಿಕ ಮತ್ತು ತಯಾರಿಕೆ ಸಹಜ ಸ್ಥಿತಿಗೆ ಮರಳಿದ ನಂತರ ಬೇಡಿಕೆಯ ನಿಜವಾದ ಚಿತ್ರಣ ಸಿಗಲಿದೆ' ಎಂದು ಮಾರುತಿ ಸುಜುಕಿ ಇಂಡಿಯಾದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಗ್ರ್ಯಾಂಡ್ ವಿಟಾರಾ ಮತ್ತು ಬ್ರೆಜಾದಂತಹ ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡಿದ ಬಳಿಕ ಗ್ರಾಹಕರಿಗೆ ವಿತರಣೆ ಮಾಡಬೇಕಿರುವ ವಾಹನಗಳ ಸಂಖ್ಯೆಯು ಕಳೆದ ತ್ರೈಮಾಸಿಕದಲ್ಲಿ 2.8 ಲಕ್ಷದಿಂದ 3.87 ಲಕ್ಷಕ್ಕೆ ಏರಿಕೆ ಆಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಆರ್‌ಬಿಐ ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ರೆಪೊ ದರವನ್ನು ಶೇಕಡ 0.50ರಷ್ಟು ಹೆಚ್ಚಿಸಿದೆ. ಮೇ ತಿಂಗಳ ಬಳಿಕ ಮೂರನೇ ಬಾರಿಗೆ ರೆಪೊ ದರ ಏರಿಕೆ ಮಾಡಲಾಗಿದೆ.

'ಚೀನಾದಿಂದ ಗಡಿ ಒಪ್ಪಂದಗಳ ಕಡೆಗಣನೆ'

ಸಾವೊಪೌಲೊ, ಬ್ರೆಜಿಲ್ (ಪಿಟಿಐ): 'ಚೀನಾವು ಭಾರತದ ಜೊತೆಗಿನ ಗಡಿ ಒಪ್ಪಂದಗಳನ್ನು ಕಡೆಗಣಿಸುತ್ತಿದೆ. ಆ ಮೂಲಕ ದ್ವಿಪಕ್ಷೀಯ ಬಾಂಧವ್ಯದ ಮೇಲೆ ಕರಿ ನೆರಳು ಆವರಿಸುವಂತೆ ಮಾಡುತ್ತಿದೆ' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾನುವಾರ ಹೇಳಿದ್ದಾರೆ.

'1990ರ ಒಪ್ಪಂದದ ಪ್ರಕಾರ, ಗಡಿ ಭಾಗದಲ್ಲಿ ಯಾರೂ ಸೇನಾ ತುಕಡಿ ನಿಯೋಜಿಸುವಂತಿಲ್ಲ. ಈ ನಿಯಮವನ್ನು ಚೀನಾ ಉಲ್ಲಂಘಿಸಿದೆ. ಕೆಲ ವರ್ಷಗಳ ಹಿಂದೆ ಗಾಲ್ವನ್ ಕಣಿವೆಯಲ್ಲಿ ನಡೆದ ಕಾದಾಟದಲ್ಲಿ ಹಲವು ಯೋಧರು ಹುತಾತ್ಮರಾಗಿದ್ದರು. ಆ ಸಮಸ್ಯೆ ಇನ್ನೂ ಬಗೆಹರಿದಿಲ್ಲ' ಎಂದಿದ್ದಾರೆ.

ರಾಜ್ಯದ 2 ಸಹಕಾರ ಬ್ಯಾಂಕ್ ಠೇವಣಿದಾರರಿಗೆ ವಿಮೆ

ಮುಂಬೈ (ಪಿಟಿಐ): ರಾಯಚೂರು ಜಿಲ್ಲೆಯ ಮಸ್ಕಿಯ ಮಲ್ಲಿಕಾರ್ಜುನ ಪಟ್ಟಣ ಸಹಕಾರ ಬ್ಯಾಂಕ್ ಮತ್ತು ತುಮಕೂರಿನ ಶ್ರೀ ಶಾರದಾ ಮಹಿಳಾ ಸಹಕಾರ ಬ್ಯಾಂಕ್‌ಗಳ ಅರ್ಹ ಠೇವಣಿದಾರರಿಗೆ ಅಕ್ಟೋಬರ್‌ನಲ್ಲಿ ವಿಮಾ ಹಣ ಸಿಗಲಿದೆ ಎಂದು ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮವು (ಡಿಐಸಿಜಿಸಿ) ಭಾನುವಾರ ತಿಳಿಸಿದೆ.

ಒಟ್ಟು 17 ಸಹಕಾರ ಬ್ಯಾಂಕ್‌ಗಳ ಠೇವಣಿದಾರರಿಗೆ ವಿಮಾ ಪರಿಹಾರ ಮೊತ್ತ ಸಿಗಲಿದೆ. ಇದರಲ್ಲಿ ಮಹಾರಾಷ್ಟ್ರದ ಎಂಟು, ಉತ್ತರ ಪ್ರದೇಶದ ನಾಲ್ಕು, ದೆಹಲಿ, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳದ ತಲಾ ಒಂದು ಬ್ಯಾಂಕ್ ಸೇರಿವೆ ಎಂದು ಅದು ಹೇಳಿದೆ.

ಈ ಸಹಕಾರ ಬ್ಯಾಂಕ್‌ಗಳ ಹಣಕಾಸು ಸ್ಥಿತಿ ಹದಗೆಟ್ಟಿದೆ ಎನ್ನುವ ಕಾರಣಕ್ಕಾಗಿ ಠೇವಣಿದಾರರು ಖಾತೆಯಿಂದ ಹಣ ಪಡೆಯುವುದು ಸೇರಿದಂತೆ ಹಲವು ನಿರ್ಬಂಧಗಳನ್ನು ಆರ್‌ಬಿಐ ವಿಧಿಸಿದೆ.

ಅರ್ಹ ಠೇವಣಿದಾರರು ವಿಮಾ ಮೊತ್ತ ಪಡೆಯಲು ತಮ್ಮ ಗುರುತನ್ನು ತಿಳಿಸುವ ಸೂಕ್ತ ದಾಖಲೆಗಳೊಂದಿಗೆ ಒಪ್ಪಿಗೆ ಪತ್ರವನ್ನು ಕಳುಹಿಸುವಂತೆ ಸೂಚನೆ ನೀಡಿದೆ. ಆಧಾರ್ ಸಂಖ್ಯೆಯ ಜೊತೆ ಜೋಡಣೆ ಆಗಿರುವ ಇನ್ನೊಂದು ಬ್ಯಾಂಕ್ ಖಾತೆಯ ವಿವರ ನೀಡುವಂತೆಯೂ ಕೇಳಿದೆ. ಈ ಖಾತೆಗೆ ವಿಮಾ ಹಣ ಸಂದಾಯ ಆಗಲಿದೆ ಎಂದು ತಿಳಿಸಿದೆ.

'ಉಚಿತ ಕೊಡುಗೆ: ಬೇಕು ಹಣಕಾಸಿನ ಮಾಹಿತಿ'

ನವದೆಹಲಿ (ಪಿಟಿಐ): 'ಉಚಿತ ಕೊಡುಗೆಗಳು ವಾಸ್ತವದಲ್ಲಿ ಉಚಿತವಲ್ಲ. ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳ ಘೋಷಣೆ ಮಾಡುವಾಗ, ಅವು ಅದಕ್ಕೆ ಬೇಕಿರುವ ಹಣವನ್ನು ಎಲ್ಲಿಂದ ತರಲಾಗುತ್ತದೆ, ಯಾವ ಬಗೆಯ ಹೊಂದಾಣಿಕೆಗಳನ್ನು ಮಾಡಿಕೊಳ್ಳಲಾಗುತ್ತದೆ ಎಂಬುದನ್ನೂ ಮತದಾರರಿಗೆ ಸ್ಪಷ್ಟಪಡಿಸುವಂತೆ ಆಗಬೇಕು' ಎಂದು ಆರ್‌ಬಿಐನ ಹಣಕಾಸು ನೀತಿ ಸಮಿತಿ ಸದಸ್ಯೆ ಆಶಿಮಾ ಗೋಯಲ್ ಹೇಳಿದ್ದಾರೆ.

ಸರ್ಕಾರವು ಉಚಿತ ಕೊಡುಗೆಗಳನ್ನು ನೀಡಿದಾಗ ಬೇರೆ ಒಂದು ಕಡೆಯಲ್ಲಿ ಅದಕ್ಕಾಗಿ ವೆಚ್ಚ ಮಾಡಬೇಕಾಗುತ್ತದೆ. ಸಾಮರ್ಥ್ಯ ವರ್ಧಿಸುವ ಸೇವೆಗಳು, ಸರಕುಗಳಿಗೆ ಮಾಡುವ ಇಂತಹ ವೆಚ್ಚಗಳು ಒಳ್ಳೆಯವು. ಆದರೆ, ಬೆಲೆಯಲ್ಲಿ ವ್ಯತ್ಯಾಸ ತರುವ ಉಚಿತ ಕೊಡುಗೆಗಳು ಕೆಟ್ಟದ್ದು ಎಂದು ಗೋಯಲ್ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಉಚಿತ ಕೊಡುಗೆಗಳು ಉತ್ಪಾದನೆಯ ಮೇಲೆ, ಸಂಪನ್ಮೂಲಗಳ ಹಂಚಿಕೆಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತವೆ. ಪರೋಕ್ಷವಾಗಿ ಭಾರಿ ವೆಚ್ಚಗಳನ್ನು ಹೇರುತ್ತವೆ. ಉಚಿತ ವಿದ್ಯುತ್ ನೀಡಲು ಆರಂಭಿಸಿದ ನಂತರ ಪಂಜಾಬ್‌ನಲ್ಲಿ ಅಂತರ್ಜಲ ಮಟ್ಟ ಕುಸಿದಿದೆ ಎಂದು ಅವರು ತಿಳಿಸಿದ್ದಾರೆ.

ಉಚಿತ ಕೊಡುಗೆಗಳಿಗೆ ಅಗತ್ಯವಿರುವ ಹಣಕಾಸಿನ ಲೆಕ್ಕಾಚಾರವನ್ನು ಬಹಿರಂಗಪಡಿಸಬೇಕು ಎಂಬ ನಿಯಮ ಜಾರಿಗೆ ಬಂದರೆ, ಪಕ್ಷಗಳು ಪೈಪೋಟಿಗೆ ಬಿದ್ದು ಜನಪ್ರಿಯ ಹಾಗೂ ಉಚಿತ ಕೊಡುಗೆಯ ಯೋಜನೆಗಳನ್ನು ಘೋಷಿಸುವುದು ಕೂಡ ಕಡಿಮೆ ಆಗುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಉಚಿತ ಕೊಡುಗೆಗಳನ್ನು ಘೋಷಿಸುವುದರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ಜನರಿಗೆ ಉಚಿತ ಕೊಡುಗೆಗಳನ್ನು ನೀಡುವುದರ ಬಗ್ಗೆ ಪರಿಶೀಲಿಸಲು ವಿಶೇಷ ಸಮಿತಿಯನ್ನು ರಚಿಸುವ ಸಲಹೆಯನ್ನು ಸುಪ್ರೀಂ ಕೋರ್ಟ್ ಈಚೆಗೆ ನೀಡಿತ್ತು.

ಮುಖ್ಯಾಂಶಗಳು

- 'ಬೆಲೆಯಲ್ಲಿ ವ್ಯತ್ಯಾಸ ತರುವ ಉಚಿತ ಕೊಡುಗೆಗಳು ಕೆಟ್ಟದ್ದು'
- ಉತ್ಪಾದನೆ, ಸಂಪನ್ಮೂಲಗಳ ಹಂಚಿಕೆ ಮೇಲೆ ಪರಿಣಾಮ

ಕಾರು ಬಾಂಬ್ ಸ್ಫೋಟ: ಪುಟಿನ್ ಆಪ್ತನ ಪುತ್ರಿ ಹತ್ಯೆ

ಮಾಸ್ಕೊ (ಎಪಿ): 'ರಷ್ಯಾ ರಾಷ್ಟ್ರೀಯವಾದಿ ಅಲೆಕ್ಸಾಂಡರ್ ಡುಗಿನಾ ಅವರ ಮಗಳು ಡೇರಿಯಾ ಡುಗಿನಾ, ಕಾರು ಬಾಂಬ್ ಸ್ಫೋಟದಲ್ಲಿ ಹತರಾಗಿದ್ದಾರೆ' ಎಂದು ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

'ಡೇರಿಯಾ ಅವರ ಎಸ್‌ಯುವಿ ಕಾರಿನಲ್ಲಿ ದುಷ್ಕರ್ಮಿಗಳು ಶನಿವಾರ ರಾತ್ರಿ ಬಾಂಬ್ ಅಳವಡಿಸಿ ಸ್ಫೋಟ ನಡೆಸಿದ್ದಾರೆ' ಎಂದು ಮಾಸ್ಕೊ ವಿಭಾಗದ ತನಿಖಾ ತಂಡ ಹೇಳಿದೆ.

'29 ವರ್ಷದ ಡೇರಿಯಾ ಅವರು ತಂದೆಯೊಂದಿಗೆ ಸಾಂಸ್ಕೃತಿಕ ಉತ್ಸವವೊಂದರಲ್ಲಿ ಪಾಲ್ಗೊಂಡಿದ್ದರು. ಅಲೆಕ್ಸಾಂಡರ್ ಅವರು ಎಸ್‌ಯುವಿ ಕಾರಿನ ಮೂಲಕ ಮನೆಗೆ ಮರಳಬೇಕಿತ್ತು. ಕೊನೆ ಕ್ಷಣದಲ್ಲಿ ಅವರು ಮತ್ತೊಂದು ಕಾರಿನಲ್ಲಿ ಪ್ರಯಾಣ ಮಾಡಲು ನಿರ್ಧರಿಸಿದ್ದರು. ಹೀಗಾಗಿ ಡೇರಿಯಾ ಆ ಕಾರು ಏರಿದ್ದರು. ಮನೆಗೆ ವಾಪಾಸಾಗುತ್ತಿದ್ದಾಗ ಸ್ಫೋಟ ಸಂಭವಿಸಿದೆ' ಎಂದು ರಷ್ಯಾದ ಮಾಧ್ಯಮಗಳು ವರದಿ ಮಾಡಿವೆ.

'ರಷ್ಯಾವು ಉಕ್ರೇನ್ ಮೇಲೆ ಯುದ್ಧ ಸಾರಿದ್ದನ್ನು ಅಲೆಕ್ಸಾಂಡರ್ ಬೆಂಬಲಿಸಿದ್ದರು. ಹೀಗಾಗಿ ಉಕ್ರೇನ್‌ನ ಉಗ್ರಗಾಮಿಗಳು ಅಲೆಕ್ಸಾಂಡರ್ ಹತ್ಯೆಗೆ ಮುಂದಾಗಿದ್ದರು' ಎಂದು ರಷ್ಯಾ ಬೆಂಬಲಿತ ಡೊನೆಸ್ಕ್ ಪೀಪಲ್ಸ್ ರಿಪಬ್ಲಿಕ್ ಸಂಘಟನೆಯ ಅಧ್ಯಕ್ಷ ಡೆನಿಸ್ ಪುಶಿಲಿನ್ ದೂರಿದ್ದಾರೆ.

ಅಲೆಕ್ಸಾಂಡರ್ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್‌ಗೆ ಆಪ್ತರಾಗಿದ್ದಾರೆ.

ಯಶಸ್ವಿ ನಿರ್ವಹಣೆಗೆ 'ಹೂಡಿಕೆ ಲೆಕ್ಕಾಚಾರ'

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

'ನಿಶ್ಚಿತ ಠೇವಣಿ (ಎಫ್.ಡಿ.) ಇಟ್ಟರೆ ಹಣ ಸುರಕ್ಷಿತ... ಅಯ್ಯೋ ಕಷ್ಟ ಕಾಲಕ್ಕೆ ಆಗೋ ಚಿನ್ನ ತೆಗೆದುಕೊಳ್ಳೋದು ಅದಕ್ಕಿಂತ ಬೆಸ್ಟ್ ಅಲ್ವಾ...?' ಹೀಗೆ ವಿವಿಧ ಹೂಡಿಕೆಗಳ ಬಗ್ಗೆ ಜನಸಾಮಾನ್ಯರು ತಮ್ಮದೇ ಅನುಭವದ ಆಧಾರದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತಾರೆ.

ಆದರೆ ಯಾವುದೇ ಹೂಡಿಕೆ ಮಾಡುವಾಗ 'ಹೂಡಿಕೆ ಲೆಕ್ಕಾಚಾರ' ಬಹಳ ಮುಖ್ಯ. ಯಾವ ಹೂಡಿಕೆ ಎಷ್ಟು ಲಾಭ ಕೊಡುತ್ತದೆ ಎಂಬ ಅಂದಾಜು ಮಾಡಿ ಹೂಡಿಕೆ ಮಾಡಿದಾಗ ಮಾತ್ರ ಸಂಪತ್ತು ವೃದ್ಧಿಯಾಗುತ್ತದೆ. ಈ ಲೇಖನದಲ್ಲಿ ಹೂಡಿಕೆ ಕ್ಯಾಲ್ಕ್ಯುಲೇಟರ್ (INVESTMENT CALCULATOR) ಬಗ್ಗೆ ತಿಳಿದುಕೊಳ್ಳೋಣ.

ಏನಿದು ಹೂಡಿಕೆ ಕ್ಯಾಲ್ಕ್ಯುಲೇಟರ್?: ಯಾವ ಹೂಡಿಕೆ ಎಷ್ಟು ಲಾಭ ತಂದುಕೊಡುತ್ತದೆ ಎಂದು ಲೆಕ್ಕಾಚಾರ ಮಾಡುವ ಸಾಧನವೇ ಹೂಡಿಕೆ ಕ್ಯಾಲ್ಕ್ಯುಲೇಟರ್. ಇಷ್ಟೇ ಅಲ್ಲ, ಎಷ್ಟು ಅವಧಿಗೆ ಹೂಡಿಕೆ ಮಾಡಬೇಕು, ಎಷ್ಟು ಹೂಡಿಕೆ ಮಾಡಬೇಕು, ಎಲ್ಲಿ ಹೂಡಿಕೆ ಮಾಡಿದರೆ ಉತ್ತಮ... ಹೀಗೆ ಎಲ್ಲ ಅಂದಾಜುಗಳನ್ನು ಹೂಡಿಕೆ ಕ್ಯಾಲ್ಕ್ಯುಲೇಟರ್ ಒದಗಿಸಿಕೊಡುತ್ತದೆ. ಈ ಮೂಲಕ ಹೂಡಿಕೆ ಗುರಿ ತಲುಪಲು ನೆರವಾಗುತ್ತದೆ.

ಬ್ಯಾಂಕಿಂಗ್, ಮ್ಯೂಚುವಲ್ ಫಂಡ್ ಮತ್ತು ಇನ್ನಿತರ ಹೂಡಿಕೆಗೆ ಸಂಬಂಧಿಸಿದ ಹಲವು ವೆಬ್‌ಸೈಟ್‌ಗಳಲ್ಲಿ ಹೂಡಿಕೆ ಕ್ಯಾಲ್ಕ್ಯುಲೇಟರ್ ಲಭ್ಯವಿರುತ್ತದೆ. ಎಕ್ಸೆಲ್ ಶೀಟ್ ಬಳಕೆ ಗೊತ್ತಿದ್ದಲ್ಲಿ ಅದನ್ನು ಕೂಡ ಹೂಡಿಕೆ ಲೆಕ್ಕಾಚಾರಕ್ಕೆ ಬಳಸಬಹುದು.

ಒಳಗೊಳ್ಳುವ ಅಂಶಗಳು: ಆರಂಭಿಕವಾಗಿ ಎಷ್ಟು ಹೂಡಿಕೆ ಮಾಡುತ್ತೀರಿ, ನಿರೀಕ್ಷಿತ ಲಾಭಾಂಶ, ಹೂಡಿಕೆ ಅವಧಿ, ಬೆಲೆ ಏರಿಕೆ ಲೆಕ್ಕಾಚಾರ, ಹೆಚ್ಚುವರಿ ಹೂಡಿಕೆ ಹೀಗೆ ಹಲವು ಅಂಶಗಳನ್ನು ಹೂಡಿಕೆ ಕ್ಯಾಲ್ಕ್ಯುಲೇಟರ್ ಒಳಗೊಳ್ಳುತ್ತದೆ.

ಉದಾಹರಣೆ ಸಹಿತ ವಿವರಣೆ:

ಹೂಡಿಕೆಗೆ ಪರಿಗಣಿಸಿರುವ ಅಂಶಗಳು (ಪಟ್ಟಿ–1)

ಈಗಿನ ವಯಸ್ಸು	20 ವರ್ಷ
ನಿವೃತ್ತಿ ವಯಸ್ಸು	60 ವರ್ಷ
ಮಾಸಿಕ ಹೂಡಿಕೆ	₹500
ಹೂಡಿಕೆ ಮೊತ್ತದ ವಾರ್ಷಿಕ ಹೆಚ್ಚಳ	ಶೇ 5
ಹಣದುಬ್ಬರ (ಬೆಲೆ ಏರಿಕೆ ಪ್ರಮಾಣ)	ಶೇ 5

ಮೇಲಿನ 1ನೇ ಪಟ್ಟಿಯಲ್ಲಿರುವಂತೆ ನಿಮ್ಮ ಈಗಿನ ವಯಸ್ಸು 20 ವರ್ಷ ಆಗಿದ್ದು, ನಿಮಗೆ 60 ವರ್ಷ ವಯಸ್ಸಾಗುವವರೆಗೆ ಹೂಡಿಕೆ ಮಾಡುತ್ತೀರಿ ಎಂದು ಭಾವಿಸೋಣ. ಪ್ರತಿ ತಿಂಗಳು ₹ 500 ಹೂಡಿಕೆ ಮಾಡುತ್ತೀರಿ, ವರ್ಷದಿಂದ ವರ್ಷಕ್ಕೆ ಹೂಡಿಕೆ ಮೊತ್ತ ಶೇ 5ರಷ್ಟು ಹೆಚ್ಚಳ ಮಾಡುತ್ತೀರಿ ಎಂದುಕೊಳ್ಳೋಣ. ಅಂದರೆ ಮೊದಲನೇ ವರ್ಷ ₹ 500 ಹೂಡಿಕೆ ಮಾಡಿದರೆ, ಎರಡನೇ ವರ್ಷ ₹ 525 ಹೂಡಿಕೆ ಮಾಡುತ್ತೀರಿ, ಮೂರನೆಯ ವರ್ಷದಲ್ಲಿ ₹ 525ರ ಶೇ 5ರಷ್ಟನ್ನು ಮತ್ತೆ ಹೆಚ್ಚಳ ಮಾಡಿಕೊಳ್ಳುತ್ತೀರಿ (ಅಂದರೆ, ₹ 551.25) ಎಂದು ತಿಳಿಯೋಣ. ಹೂಡಿಕೆಯು ಇದೇ ರೀತಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತ ಸಾಗುತ್ತದೆ. ಇದಕ್ಕೆ ಶೇ 5ರಷ್ಟು ಹಣದುಬ್ಬರ ಲೆಕ್ಕಾಚಾರವನ್ನು ಸೇರಿಸೋಣ. ಹೀಗೆ ಮಾಡಿದಾಗ ಬೇರೆ ಬೇರೆ ಹೂಡಿಕೆಗಳಲ್ಲಿ ಯಾವ ಲಾಭ ಸಿಗುತ್ತದೆ ಎನ್ನುವುದನ್ನು ಲೆಕ್ಕಾಚಾರ ಮಾಡೋಣ.

ಮೇಲಿನ ಹೂಡಿಕೆ ಕ್ಯಾಲ್ಕ್ಯುಲೇಟರ್ 1ನೇ ಪಟ್ಟಿಯಲ್ಲಿರುವ ನಿಯಮಗಳನ್ನು ಒಳಗೊಂಡು ಲೆಕ್ಕಾಚಾರ ಮಾಡಿದಾಗ ಎರಡನೇ ಪಟ್ಟಿಯಲ್ಲಿರುವಂತೆ, 20ನೇ ವರ್ಷದಿಂದ 60 ವರ್ಷ ವಯಸ್ಸಿನವರೆಗೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿ ಶೇ 5ರಷ್ಟು ಬಡ್ಡಿ ಲಾಭ ಪಡೆದರೆ ನಿಮ್ಮ ಬಳಿ ₹ 16,82,566 ಹಣವಿರುತ್ತದೆ. ಅದೇ ಅವಧಿಗೆ ಚಿನ್ನದ ಮೇಲೆ ಹೂಡಿಕೆ ಮಾಡಿ ಶೇ 10ರಷ್ಟು ಲಾಭ ಸಿಕ್ಕರೆ ₹ 53,58,116 ನಿಮ್ಮ ಬಳಿ ಇರುತ್ತದೆ. ಮ್ಯೂಚುವಲ್ ಫಂಡ್‌ನಲ್ಲಿ ತೊಡಗಿಸಿ ಶೇ 15ರಷ್ಟು ಲಾಭ ಪಡೆದರೆ ₹2,21,58,439 ದೊರಕುತ್ತದೆ. ಷೇರು ಮಾರುಕಟ್ಟೆಯಲ್ಲಿ ತೊಡಗಿಸಿ ಶೇ 20ರಷ್ಟು ಲಾಭ ಸಿಕ್ಕರೆ ₹10,81,61,644 ದಕ್ಕುತ್ತದೆ. ಆದರೆ ಹಣದುಬ್ಬರವನ್ನು ಪರಿಗಣಿಸಿದಾಗ ನಿಮ್ಮ ಒಟ್ಟು ಹೂಡಿಕೆ ಹಣ ಅರ್ಧದಷ್ಟು ಮೌಲ್ಯ ಕಳೆದುಕೊಳ್ಳುವುದು ಕೂಡ ಕಂಡುಬರುತ್ತದೆ. ಹಾಗಾಗಿ ಹೂಡಿಕೆ ಮಾಡುವಾಗ ಹಣದುಬ್ಬರದ ಅಂದಾಜು ಮಾಡಿಕೊಳ್ಳಬೇಕು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ವಿವಿಧ ಹೂಡಿಕೆಗಳಲ್ಲಿ ಸಿಗುವ ಲಾಭಾಂಶ (ಪಟ್ಟಿ–2)

ವಿವಿಧ ಹೂಡಿಕೆಗಳಲ್ಲಿ ನಿರೀಕ್ಷಿತ ಲಾಭಾಂಶ	ನಿಮಗೆ ಸಿಗುವ ಮೊತ್ತ	ಹಣದುಬ್ಬರ ಪರಿಗಣಿಸಿದಾಗ ಸಿಗುವ ಮೊತ್ತ
ನಿಶ್ಚಿತ ಠೇವಣಿ (ಎಫ್.ಡಿ) ಶೇ 5	₹16,82,566	₹7,24,799
ಚಿನ್ನದ ಮೇಲಿನ ಹೂಡಿಕೆ ಶೇ 10	₹53,58,116	₹16,75,594
ಮ್ಯೂಚುವಲ್ ಫಂಡ್ ಹೂಡಿಕೆ ಶೇ 15	₹2,21,58,439	₹53,00,464
ಷೇರು ಮಾರುಕಟ್ಟೆಯಲ್ಲಿ ನೇರ ಹೂಡಿಕೆ ಶೇ 20ರಷ್ಟು	₹10,81,61,644	₹2,17,44,087

(ಗಮನಿಸಿ: ಮೇಲೆ ಸೂಚಿಸಿರುವಂತೆ ವಿವಿಧ ಹೂಡಿಕೆಗಳ ಮೇಲಿನ ಗಳಿಕೆ ಸ್ಥಿರವಾಗಿರುವುದಿಲ್ಲ. ವರ್ಷದಿಂದ ವರ್ಷಕ್ಕೆ ವ್ಯತ್ಯಾಸವಾಗಬಹುದು. ಅಂಕಿ-ಅಂಶಗಳು ಅಂದಾಜಿಗೆ ಮಾತ್ರ)

ಸತತ ಐದನೇ ವಾರ ಷೇರುಪೇಟೆ ಗಳಿಕೆ

ಸತತ ಐದನೇ ವಾರವೂ ಷೇರುಪೇಟೆ ಸೂಚ್ಯಂಕಗಳು ಗಳಿಕೆ ದಾಖಲಿಸಿವೆ. ಆಗಸ್ಟ್ 19ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಮಟ್ಟದ ಗಳಿಕೆ ಕಂಡಿವೆ. 59,646 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.30ರಷ್ಟು ಜಿಗಿದಿದೆ. 17,758 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.34ರಷ್ಟು ಹೆಚ್ಚಳ ದಾಖಲಿಸಿದೆ. ಬಿಎಸ್‌ಇ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಸುಮಾರು ಶೇ 1ರಷ್ಟು ಹೆಚ್ಚಳವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಪವರ್ ಸೂಚ್ಯಂಕ ಶೇ 3ರಷ್ಟು ಗಳಿಸಿಕೊಂಡಿದೆ. ಬಿಎಸ್‌ಇ ಟೆಲಿಕಾಂ ಶೇ 2ರಷ್ಟು ಮತ್ತು ಕ್ಯಾಪಿಟಲ್ ಗೂಡ್ಸ್ ಶೇ 1.8ರಷ್ಟು ಹೆಚ್ಚಳವಾಗಿವೆ. ಲೋಹ ಸೂಚ್ಯಂಕ ಶೇ 2ರಷ್ಟು ಕುಸಿದಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 3,128.96 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,808.89 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಗ್ರೀನ್ ಎನರ್ಜಿ, ಅದಾನಿ ಪೋರ್ಟ್ಸ್, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿ, ಅಂಬುಜಾ ಸಿಮೆಂಟ್ಸ್, ಅದಾನಿ ಎಂಟರ್‌ಪ್ರೈಸಸ್, ಎಚ್‌ಪಿಸಿಎಲ್ ಮತ್ತು ಐಷರ್ ಮೋಟರ್ಸ್ ಜಿಗಿದಿವೆ. ಮಿಡ್ ಕ್ಯಾಪ್‌ನಲ್ಲಿ ಅದಾನಿ ಪವರ್, ಐಆರ್‌ಸಿಟಿಸಿ, ಐಸಿಐಸಿಐ ಸೆಕ್ಯೂರಿಟೀಸ್, ಜೀ ಎಂಟರ್‌ಟೇನ್ಮೆಂಟ್ ಮತ್ತು ಕ್ಲೀನ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಗಳಿಗೆ ಕಂಡಿವೆ.

ಸ್ಮಾಲ್‌ಕ್ಯಾಪ್‌ನಲ್ಲಿ ಫೋರ್ಬ್ಸ್ ಗೋಕಾಕ್, ರಾಣೆ ಹೋಲ್ಡಿಂಗ್ಸ್, ಜುಬ್ಲಿಯಂಟ್ ಇಂಡಸ್ಟ್ರೀಸ್, ರೆಪ್ಕೋ ಹೋಮ್ ಫೈನಾನ್ಸ್, ಡಿಎಫ್ಎಂ ಫುಡ್ಸ್, ಯಾರಿ ಡಿಜಿಟಲ್ ಇಂಟಿಗ್ರೇಟೆಡ್ ಸರ್ವಿಸಸ್ ಮತ್ತು ಬಾನ್ಕೋ ಪ್ರಾಡಕ್ಟ್ಸ್ ಶೇ 20ರಿಂದ ಶೇ 61ರವರೆಗೆ ಜಿಗಿದಿವೆ.

ಇಳಿಕೆ: ಮಿಡ್ ಕ್ಯಾಪ್‌ನಲ್ಲಿ ಮುತ್ತೂಟ್ ಫೈನಾನ್ಸ್, ಭಾರತ್ ಫೋರ್ಜ್, ಅಪೋಲೊ ಹಾಸ್ಪಿಟಲ್ಸ್ ಆ್ಯಂಡ್ ಎಂಟರ್‌ಪ್ರೈಸಸ್ ಮತ್ತು ಬಾಯೆರ್ ಕ್ರಾಪ್ ಸೈನ್ಸ್ ಕುಸಿದಿವೆ. ಸ್ಮಾಲ್ ಕ್ಯಾಪ್‌ನಲ್ಲಿ ನವಕಾರ್ ಕಾರ್ಪೊರೇಷನ್, ಜಾಗರಣ್ ಪ್ರಕಾಶನ್, ಐನಾಕ್ಸ್ ಲೀಷರ್, ಪಿವಿಆರ್, ಡಿಬಿ ರಿಯಾಲ್ಟಿ ಶೇ 10ರಿಂದ ಶೇ 20ರಷ್ಟು ತಗ್ಗಿವೆ.

ಮುನ್ನೋಟ: ಕಳೆದ ಎರಡು ತಿಂಗಳಲ್ಲಿ ಸೆನ್ಸೆಕ್ಸ್ ಶೇ 17ರಷ್ಟು ಜಿಗಿತ ಕಂಡಿದೆ. ಹಾಗೆಂದಮಾತ್ರಕ್ಕೆ 2020-21ರಲ್ಲಿ ಸಿಕ್ಕಿದ ಎರಡಂಕಿ ಬೆಳವಣಿಗೆಯನ್ನು ನೀವು ಈಗ ನಿರೀಕ್ಷಿಸಲು ಸಾಧ್ಯವಿಲ್ಲ. ಷೇರುಪೇಟೆಯಲ್ಲಿ ಸೂಚ್ಯಂಕಗಳ ತ್ವರಿತ ಮತ್ತು ಹರಿತ ಏರಿಳಿತ ತಳ್ಳಿಹಾಕುವಂತಿಲ್ಲ. ಸದ್ಯದ ಮಟ್ಟಿಗೆ ಷೇರು ಹೂಡಿಕೆದಾರರು ವ್ಯವಸ್ಥಿತ ಹೂಡಿಕೆ ಯೋಜನೆ ಪರಿಗಣಿಸಬಹುದು.

ಇಂದು ನಿರುದ್ಯೋಗ ವಿರೋಧಿ ರ್‍ಯಾಲಿ

ಟಿಕಾಯತ್ ಪೊಲೀಸ್ ವಶ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯ ಜಂತರ್ ಮಂತರ್‌ನಲ್ಲಿ ನಿರುದ್ಯೋಗ ವಿರೋಧಿ ರ್‍ಯಾಲಿಯಲ್ಲಿ ಭಾಗವಹಿಸಲು ಗಾಜಿಪುರ ಗಡಿ ದಾಟಲು ಪ್ರಯತ್ನಿಸಿದ ರೈತ ನಾಯಕ ರಾಕೇಶ್ ಟಿಕಾಯತ್ ಅವರನ್ನು ದೆಹಲಿ ಪೊಲೀಸರು ಭಾನುವಾರ ತಡೆದು, ಮುನ್ನೆಚ್ಚರಿಕೆ ಕ್ರಮವಾಗಿ ವಶಕ್ಕೆ ಪಡೆದರು.

ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ರಾಷ್ಟ್ರೀಯ ವಕ್ತಾರ ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ಪ್ರಭಾವಿ ನಾಯಕ ಟಿಕಾಯತ್ ಅವರನ್ನು ರಾಜಧಾನಿಯಲ್ಲಿ ಪ್ರತಿಭಟನೆಗೆ ಜನ ಒಗ್ಗೂಡಿಸದಂತೆ ನಿರ್ಬಂಧಿಸುವ ಸಲುವಾಗಿ, ಮಧ್ಯಾಹ್ನದ ವೇಳೆಗೆ ಗಡಿಯಲ್ಲಿ ದೆಹಲಿ ಪೊಲೀಸರು ತಡೆದರು. ನಂತರ ಅವರನ್ನು ವಶಕ್ಕೆ ಪಡೆದರು ಎಂದು ಮೂಲಗಳು ಹೇಳಿವೆ.

ಟಿಕಾಯತ್ ಅವರನ್ನು ವಶಕ್ಕೆ ಪಡೆದ ನಂತರ ಅವರನ್ನು ಮಧು ವಿಹಾರ್ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಅಲ್ಲಿ ಅವರಿಗೆ ಗಡಿಯಿಂದ ಹಿಂತಿರುಗುವಂತೆ ವಿನಂತಿಸಲಾಯಿತು, ಪೊಲೀಸರ ಮನವಿಗೆ ಒಪ್ಪಿದ ಟಿಕಾಯತ್ ಅವರನ್ನು ಗಡಿಯಿಂದ ಪೊಲೀಸ್ ಬೆಂಗಾವಲಿನಲ್ಲಿ ವಾಪಸ್ ಕಳುಹಿಸಲಾಯಿತು ಎಂದು ದೆಹಲಿ ಡಿಸಿಪಿ ಸಮೀರ್ ಶರ್ಮಾ ತಿಳಿಸಿದರು. ಎಸ್‌ಕೆಎಂ ಹಾಗೂ ಇತರೆ ರೈತ ಸಂಘಟನೆಗಳು ಸೋಮವಾರ ಜಂತರ್ ಮಂತರ್‌ನಲ್ಲಿ 'ಮಹಾಪಂಚಾಯತ್' ಆಯೋಜಿಸಿವೆ.

ಇಮ್ರಾನ್ ಭಾಷಣದ ನೇರ ಪ್ರಸಾರ ನಿಷೇಧ

ಇಸ್ಲಾಮಾಬಾದ್ (ಪಿಟಿಐ): ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಭಾಷಣಗಳನ್ನು ನೇರ ಪ್ರಸಾರ ಮಾಡುವುದನ್ನು ಪಾಕಿಸ್ತಾನದ ಸುದ್ದಿ ವಾಹಿನಿಗಳು ನಿಷೇಧಿಸಿವೆ.

ಇಮ್ರಾನ್‌ಖಾನ್ ಅವರ ಭಾಷಣಗಳು ದೇಶದ ಶಾಂತಿ ಸುವ್ಯವಸ್ಥೆಯನ್ನು ಕೆಡಿಸುವಂತಿವೆ ಎಂದು ಪಾಕಿಸ್ತಾನ ಎಲೆಕ್ಟ್ರಾನಿಕ್ ಮೀಡಿಯಾ ರೆಗ್ಯೂಲೇಟರಿ ಅಥಾರಿಟಿ (ಪಿಇಎಂಆರ್‌ಎ) ಅಭಿಪ್ರಾಯಪಟ್ಟಿದೆ. ಆದ್ದರಿಂದ ಅವರ ಭಾಷಣಗಳನ್ನು ತಿದ್ದುಪಡಿ ಮಾಡದೆ, ತಮ್ಮ ವಾಹಿನಿಗಳಲ್ಲಿ ಪ್ರಸಾರ ಮಾಡಬಾರದು ಎಂದು ಸುದ್ದಿ ವಾಹಿನಿಗಳಿಗೆ ಪಿಇಎಂಆರ್‌ಎ ಸೂಚನೆ ನೀಡಿದೆ.

ಶನಿವಾರ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಇಮ್ರಾನ್ ಖಾನ್ ಅವರು, ಪೊಲೀಸ್ ಅಧಿಕಾರಿಗಳು, ಮಹಿಳಾ ನ್ಯಾಯಾಧೀಶರು, ಚುನಾವಣಾ ಆಯೋಗ ಮತ್ತು ಎದುರಾಳಿ ಪಕ್ಷಗಳ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಹಾಕಿದ್ದರು. ದೇಶದ್ರೋಹದ ಪ್ರಕರಣದಲ್ಲಿ ಇಮ್ರಾನ್ ಖಾನ್ ಅವರ ಆಪ್ತ ಶಹಬ್ಬಾಸ್ ಗಿಲ್ ಅವರನ್ನು ಕಳೆದ ವಾರ ಬಂಧಿಸಲಾಗಿದೆ. ಈ ಕಾರಣಕ್ಕಾಗಿ ಇಮ್ರಾನ್ ಖಾನ್ ಅವರು ಸರ್ಕಾರಿ ಸಂಸ್ಥೆಗಳ ವಿರುದ್ಧ ಮಾತನಾಡುತ್ತಿದ್ದಾರೆ ಎನ್ನಲಾಗುತ್ತಿದೆ.

ಉಕ್ರೇನ್ ಸ್ವಾತಂತ್ರ್ಯೋತ್ಸವಕ್ಕೆ ರಷ್ಯಾ ದಾಳಿ: ಝೆಲೆನ್‌ಸ್ಕಿ

ಕೀವ್, ಉಕ್ರೇನ್ (ಎಎಫ್‌ಪಿ):- ಮುಂದಿನ ವಾರದಲ್ಲಿ (ಬುಧವಾರ) 31ನೇ ಸ್ವಾತಂತ್ರ್ಯೋತ್ಸವ ಆಚರಿಸಲು ಸಜ್ಜಾಗಿರುವ ಉಕ್ರೇನ್ ಮೇಲೆ ದಾಳಿ ನಡೆಸಲು ರಷ್ಯಾ ಸಜ್ಜಾಗಿರಬಹುದು ಎಂದು ಉಕ್ರೇನ್ ಅಧ್ಯಕ್ಷ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭಾನುವಾರ ಎಚ್ಚರಿಸಿದ್ದಾರೆ.

ಶನಿವಾರ ವಿಡಿಯೊ ಭಾಷಣ ಮಾಡಿರುವ ಝೆಲೆನ್‌ಸ್ಕಿ, ರಷ್ಯಾ ಸೇನಾ ಕಾರ್ಯಾಚರಣೆ ಶುರುವಾಗಿ ಇದೇ 24ಕ್ಕೆ ಆರು ತಿಂಗಳು ತುಂಬಲಿದೆ. ಇದೇ ವೇಳೆ ದೇಶದ ಜನತೆ ಸ್ವಾತಂತ್ರ್ಯೋತ್ಸವದಲ್ಲಿ ಮೈಮರೆಯಬಹುದೆಂದು ರಷ್ಯಾ ಭಾವಿಸಿ, ಉಕ್ರೇನಿಗರ ಮೇಲೆ ಕ್ರೌರ್ಯ ಮೆರೆಯುವ ಸಾಧ್ಯತೆ ಇದೆ ಎಂದು ಎಚ್ಚರಿಸಿದ್ದಾರೆ.

ದೇಶದ ರಾಜಧಾನಿ ಕೀವ್, ಸಾರ್ವಜನಿಕರು ಒಂದೇ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಒಟ್ಟುಗೂಡುವುದನ್ನು ಇದೇ 22ರಿಂದ 25ರವರೆಗೆ ನಿಷೇಧಿಸಿದೆ. ಹಾಗೆಯೇ ಹಾರ್ಕಿವ್‌ನಲ್ಲಿ ಇದೇ 23ರಿಂದ 25ರವರೆಗೆ ನಿಷೇಧಾಜ್ಞೆ ಘೋಷಿಸಲಾಗಿದೆ.

'ಕೀವ್ ಸೇರಿ ನಮ್ಮ ಹಲವು ನಗರಗಳ ಮೇಲೆ ರಷ್ಯಾ ಬಾಂಬ್‌ಗಳ ಸುರಿಮಳೆ ಮತ್ತು ನೌಕಾ ಕ್ಷಿಪಣಿ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸುವ ಸಾಧ್ಯತೆ ಇದೆ' ಎಂದು ಉಕ್ರೇನ್ ಅಧ್ಯಕ್ಷರ ಸಲಹೆಗಾರ ಮಿಖಾಯ್ಲೊ ಪೊಡಲಿಯಾಕ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)

₹400-655

ದ್ವಿತಳಿ (ಬಿ.ವಿ)

₹444-803

ಕೆಜಿಎಫ್ ತಂಡ ಚಾಂಪಿಯನ್

ಚೊಚ್ಚಲ ಗ್ರ್ಯಾನ್ ಪ್ರೀ ಬ್ಯಾಡ್ಮಿಂಟನ್ ಲೀಗ್: ಮಂಡ್ಯ ಬುಲ್ಸ್ ತಂಡ ರನ್ನರ್ಸ್ ಅಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟವಾಡಿದ ಕೆಜಿಎಫ್ ವೂಲ್ವ್ಸ್ ತಂಡವು ಚೊಚ್ಚಲ ಗ್ರ್ಯಾನ್‌ಪ್ರೀ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಕೋರ್ಟ್‌ನಲ್ಲಿ ಭಾನುವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ಕೆಜಿಎಫ್ ತಂಡವು 7–2ರಿಂದ ಮಂಡ್ಯ ಬುಲ್ಸ್ ಸವಾಲನ್ನು ಮೆಟ್ಟಿನಿಂತಿತು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಕೆಜಿಎಫ್ ತಂಡದ ಗ್ಲೋರಿಯಾ ವಿನಯಕುಮಾರ್ 15–11, 15–11ರಿಂದ ಮಂಡ್ಯದ ಅನನ್ಯಾ ಪ್ರವೀಣ್ ವಿರುದ್ಧ ಜಯಿಸಿದರು. ಪುರುಷರ ಡಬಲ್ಸ್ ಟ್ರಂಪ್ ಪಂದ್ಯದಲ್ಲಿ ಕೆಜಿಎಫ್‌ನ ಹೇಮಂತ್ ಗೌಡ, ಪ್ರಕಾಶ್ ರಾಜ್ ಜೋಡಿಯು 7–15, 15–11, 14–15ರಿಂದ ಮಂಡ್ಯದ ಅಶಿತ್ ಸೂರ್ಯ–ಸಾಯಿ ಪ್ರತೀಕ್ ವಿರುದ್ಧ ಸೋತಿತು.

ಪುರುಷರ ಸಿಂಗಲ್ಸ್‌ನಲ್ಲಿ ಕೆಜಿಎಫ್‌ನ ನರೇಶ್ ಅಯ್ಯರ್ 15–13, 15–3ರಿಂದ ಅನಿರುದ್ಧ ದೇಶಪಾಂಡೆ ಎದುರು ಜಯಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಕೆಜಿಎಫ್‌ನ ಸುಯಶ್ ವಿ ಹಾಗೂ ಪಿ. ಅಮೃತಾ 15–8, 15–14ರಿಂದ ಮಧುಸೂದನ್ ಮತ್ತು ರುಥ್ ಮಿಶಾ ವಿನೋದ್ ಜೋಡಿಯನ್ನು ಸೋಲಿಸಿದರು. ಕೊನೆಯ ಸುತ್ತಿನ ಟ್ರಂಪ್ ಸೂಪರ್ ಪಂದ್ಯದಲ್ಲಿ ಹೇಮಂತ್ ಗೌಡ, ಪ್ರಕಾಶ್ ರಾಜ್ ಹಾಗೂ ಸುಹಾಸ್ ವಿ ಅವರು ಮಂಡ್ಯದ ಅಶಿತ್ ಸೂರ್ಯ, ಸಾಯಿ ಪ್ರತೀಕ್ ಹಾಗೂ ಮಧುಸೂದನ್ ಎದುರು 21–15ರಿಂದ ಮೇಲುಗೈ ಸಾಧಿಸಿದರು. ಇದರೊಂದಿಗೆ ತಂಡವು ಜಯದ ಸಂಭ್ರಮದಲ್ಲಿ ಮಿಂದೆದ್ದಿತು.

ಪ್ರಶಸ್ತಿ ಗೆದ್ದ ಕೆಜಿಎಫ್ ತಂಡವು ₹ 24 ಲಕ್ಷ ನಗದು ಬಹುಮಾನ ತನ್ನದಾಗಿಸಿಕೊಂಡಿತು. ರನ್ನರ್ಸ್ ಅಪ್ ಮಂಡ್ಯ ₹ 12 ಲಕ್ಷ ಜೇಬಿಗಿಳಿಸಿತು.

ಪಂದ್ಯಶ್ರೇಷ್ಠ ಗೌರವ ಗಳಿಸಿದ ಹೇಮಂತ್ ಗೌಡ ₹ 25 ಸಾವಿರ ಚೆಕ್ ಪಡೆದರು.

ಪ್ರಶಸ್ತಿಯೊಂದಿಗೆ ಕೆಜಿಎಫ್ ವೂಲ್ವ್ಸ್ ತಂಡದ ಸಂಭ್ರಮ: ಎಡದಿಂದ (ಕುಳಿತವರು) ಹೇಮಂತ್ ಗೌಡ ಮತ್ತು ರುದ್ರ. (ನಿಂತವರು) ಪ್ರಕಾಶ್ ರಾಜ್, ರಶ್ಮಿ ಗಣೇಶ್, ಸಂಗೀತಾ ಮರಿ (ಸಹಾಯಕ ಕೋಚ್), ಗ್ಲೋರಿಯಾ ವಿನಯಕುಮಾರ್, ಅಮೃತಾ ಪಿ, ಅಭಿನಂದ್ ಶೆಟ್ಟಿ (ಮುಖ್ಯ ಕೋಚ್), ಸುಹಾಸ್ ಗೌಡ, ಶಿವ (ಸಹ ಮಾಲೀಕ,) ನರೇನ್ ಅಯ್ಯರ್, ಲೋಮೇಶ್ಸ, ಸಚಿನ್ (ಇಬ್ಬರೂ ಸಹ ಮಾಲೀಕರು)– ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಭಾರತ–ಜಿಂಬಾಬ್ವೆ 3ನೇ ಏಕದಿನ ಪಂದ್ಯ ಇಂದು

ಲಯಕ್ಕೆ ಮರಳುವತ್ತ ರಾಹುಲ್ ಚಿತ್ತ

ಹರಾರೆ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಭಾರತ ತಂಡ ಅತಿಥೇಯ ಜಿಂಬಾಬ್ವೆ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯಲ್ಲಿ ಕ್ಲೀನ್ ಸ್ವೀಪ್ ಮಾಡುವತ್ತ ಚಿತ್ತ ನೆಟ್ಟಿದೆ.

ಮೂರು ಪಂದ್ಯಗಳ ಸರಣಿಯ ಮೊದಲೆರಡರಲ್ಲಿ ಸುಲಭ ಜಯಸಾಧಿಸಿರುವ ಭಾರತವು ಈಗ ತನ್ನ ಬೆಂಚ್ ಶಕ್ತಿಯನ್ನು ಕೊನೆಯ ಪಂದ್ಯದಲ್ಲಿ ಕಣಕ್ಕಿಳಿಸುವ ಸಾಧ್ಯತೆ ಇದೆ.

ಮುಂದಿನ ವರ್ಷ ನಡೆಯಲಿರುವ ಐಸಿಸಿ ವಿಶ್ವಕಪ್ ಟೂರ್ನಿಗೆ ತಂಡ ಕಟ್ಟುವತ್ತಲೂ ಆಯ್ಕೆ ಸಮಿತಿ ಕಣ್ಣು ನೆಟ್ಟಿದೆ. ಆದ್ದರಿಂದ ಈ ವರ್ಷ ನಡೆಯುವ ಏಕದಿನ ಪಂದ್ಯಗಳಲ್ಲಿ ಉತ್ತಮವಾಗಿ ಆಡುವ ಆಟಗಾರರು ವಿಶ್ವಕಪ್ ಟೂರ್ನಿಯಲ್ಲಿ ಕಣಕ್ಕಿಳಿಯುವ ಅವಕಾಶ ಪಡೆಯಬಹುದು.

2–0ಯಿಂದ ಸರಣಿಯನ್ನು ತಂಡವು ಕೈವಶ ಮಾಡಿಕೊಂಡಿದೆ. ಆದರೆ, ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿದ ನಂತರ ಹೋದ ಪಂದ್ಯದಲ್ಲಿ ತಮ್ಮ ಬ್ಯಾಟಿಂಗ್ ಲಯಕ್ಕೆ ಮರಳುವಲ್ಲಿ ರಾಹುಲ್ ವಿಫಲರಾದರು. ಅವರು ಕೊನೆ ಪಂದ್ಯದಲ್ಲಿಯೂ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತ. ಆದರೆ ಶಿಖರ್ ಧವನ್‌ಗೆ ವಿಶ್ರಾಂತಿ ಕೊಡುವ ಸಾಧ್ಯತೆ ಇದೆ. ಇದರಿಂದಾಗಿ ರಾಹುಲ್ ಅವರೊಂದಿಗೆ ಶುಭಮನ್ ಗಿಲ್ ಅಥವಾ ಇಶಾನ್ ಕಿಶನ್ ಇನಿಂಗ್ಸ್ ಆರಂಭಿಸಬಹುದು.

ಕೆ.ಎಲ್. ರಾಹುಲ್– ಪಿಟಿಐ ಚಿತ್ರ

ರೆಗಿಸ್ ಚಕಾಬ್ವಾ

ಕಳೆದ ಪಂದ್ಯದಲ್ಲಿ ಮಿಂಚಿರುವ ಸಂಜು ಸ್ಯಾಮ್ಸನ್ ಮತ್ತೊಂದು ಅವಕಾಶ ಪಡೆಯಬಹುದು. ಬೌಲಿಂಗ್‌ನಲ್ಲಿ ಕೆಲವು ಬದಲಾವಣೆಗಳಾಗಬಹುದು. ಸಿರಾಜ್ ವಿಶ್ರಾಂತಿ ಪಡೆದು ಆವೇಶ್ ಖಾನ್ ಕಣಕ್ಕಿಳಿಯುವ ನಿರೀಕ್ಷೆ ಇದೆ.

ಆತಿಥೇಯ ತಂಡವು ಎರಡನೇ ಪಂದ್ಯದಲ್ಲಿ ಬೌಲಿಂಗ್‌ನಲ್ಲಿ ಸ್ವಲ್ಪ ಭರವಸೆಯ ಆಟವಾಡಿತ್ತು. ಆದರೆ ಎರಡೂ ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿತ್ತು. ರೆಗಿಸ್ ಚಕಾಬ್ವಾ ನಾಯಕತ್ವದ ತಂಡವು ಸಮಾಧಾನಕರ ಗೆಲುವಿಗೆ ಪ್ರಯತ್ನಿಸಬಹುದು.

ಪಂದ್ಯ ಆರಂಭ: ಮಧ್ಯಾಹ್ನ 12.45

ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಡುರಾಂಡ್ ಕಪ್: ಆರ್ಮಿ ಗ್ರೀನ್‌ಗೆ ಜಯ

ಗುವಾಹಟಿ (ಪಿಟಿಐ): ನಾಯಕ ಪಿ.ಸಿ. ಲಲ್ಲಾಮ್ಕಿಯಾ ಗಳಿಸಿದ ಎರಡು ಗೋಲುಗಳ ಬಲದಿಂದ ಆರ್ಮಿ ಗ್ರೀನ್ ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಸೋಲಿಸಿತು.

ಭಾನುವಾರ ಇಲ್ಲಿ ನಡೆದ ಪಂದ್ಯಲ್ಲಿ ಆರ್ಮಿ 3–1ರಿಂದ ನಾರ್ತ್‌ಈಸ್ಟ್ ತಂಡವನ್ನು ಮಣಿಸಿತು. ವಿಜೇತ ತಂಡದ ಪರ ಸೋಮೇಶ್ ಕೊಠಾರಿ ಒಂದು ಗೋಲು ಹೊಡೆದರು. ನಾರ್ತ್‌ಈಸ್ಟ್ ತಂಡದ ಪರ ದೀಪು ಮಿರ್ಧಾ ಸಮಾಧಾನಕರ ಗೋಲು ದಾಖಲಿಸಿದರು.

ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಷಿಪ್ ಇಂದಿನಿಂದ: ಸಿಂಧು ಅಲಭ್ಯ

ಲಕ್ಷ್ಯ, ಪ್ರಣಯ್ ಮೇಲೆ ಭರವಸೆ

ಟೋಕಿಯೊ (ಪಿಟಿಐ): ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಷಿಪ್ ಸೋಮವಾರ ಇಲ್ಲಿ ಆರಂಭವಾಗಲಿದ್ದು, ಯುವ ಆಟಗಾರ ಲಕ್ಷ್ಯ ಸೇನ್ ಮತ್ತು ಎಚ್.ಎಸ್. ಪ್ರಣಯ್ ಅವರು ಭಾರತದ ಪದಕದ ಭರವಸೆ ಎನಿಸಿದ್ದಾರೆ. ದಶಕದಲ್ಲಿ ಮೊದಲ ಬಾರಿಗೆ ಪಿ.ವಿ.ಸಿಂಧು ಅವರು ಚಾಂಪಿಯನ್‌ಷಿಪ್‌ಗೆ ಲಭ್ಯರಿಲ್ಲ.

2019ರಲ್ಲಿ ಚಿನ್ನ ಸೇರಿದಂತೆ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು ಐದು ಪದಕ ಜಯಿಸಿರುವ ಸಿಂಧು, ಪಾದದ ನೋವಿನ ಕಾರಣ ಈ ಬಾರಿ ಕಣಕ್ಕಿಳಿಯುತ್ತಿಲ್ಲ. ಬರ್ಮಿಂಗ್‌ಹ್ಯಾಮ್‌ನಲ್ಲಿ ಇತ್ತೀಚೆಗೆ ಕೊನೆಗೊಂಡ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಅವರು ಗಾಯಗೊಂಡಿದ್ದರು.

ಲಕ್ಷ್ಯ, ಪ್ರಣಯ್ ಮತ್ತು ಕಿದಂಬಿ ಶ್ರೀಕಾಂತ್ ಅವರ ಮೇಲೆ ಈ ಬಾರಿ ಹೆಚ್ಚು ನಿರೀಕ್ಷೆ ಇದೆ. 2011ರ ಆವೃತ್ತಿಯಿಂದ ಭಾರತ ಬರಿಗೈನಲ್ಲಿ ಮರಳಿಲ್ಲ. 2021ರಲ್ಲಿ ಶ್ರೀಕಾಂತ್ ಹಾಗೂ ಲಕ್ಷ್ಯ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಮುತ್ತಿಟ್ಟಿದ್ದರು. ಆದರೆ ಹೋದ ವರ್ಷಕ್ಕಿಂತ ಈ ಬಾರಿ ಕಣದಲ್ಲಿ ಬಲಿಷ್ಠ ಆಟಗಾರರಿರುವುದು ಭಾರತದ ಆಟಗಾರರಿಗೆ ಸವಾಲಾಗಿದೆ.

ಕಳೆದ ಬಾರಿ ಆಡದಿದ್ದ ಜಪಾನ್‌ನ ಕೆಂಟೊ ಮೊಮೊಟಾ, ಇಂಡೊನೇಷ್ಯಾ ಜೋಡಿ ಜೋನಾಥನ್ ಕ್ರಿಸ್ಟಿ ಮತ್ತು ಆ್ಯಂಟನಿ ಗಿಂಟಿಂಗ್ ಈ ಬಾರಿ ಅಂಗಣಕ್ಕಿಳಿಯುವರು. ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನದ ಪದಕ ಜಯಿಸಿರುವ ಲಕ್ಷ್ಯ, ಇಲ್ಲಿ ಶುಭಾರಂಭದ ನಿರೀಕ್ಷೆಯಲ್ಲಿದ್ದಾರೆ. ಮೊದಲ ಪಂದ್ಯದಲ್ಲಿ ಅವರು ಡೆನ್ಮಾರ್ಕ್‌ನ ಹಾನ್ಸ್ ಕ್ರಿಸ್ಟಿಯನ್ ಸೋಲ್‌ಬರ್ಗ್ ವಿಟಿಂಗಸ್ ಎದುರು ಆಡುವರು.

ಪ್ರಣಯ್ ಅವರಿಗೆ ಮೊದಲ ಹಣಾಹಣಿಯಲ್ಲಿ ಮೊಮೊಟಾ ಸವಾಲು ಎದುರಾಗಿದೆ. 2019ರ ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತ ಬಿ. ಸಾಯಿ ಪ್ರಣೀತ್ ಕೂಡ ಕಣದಲ್ಲಿದ್ದು, ಮೊದಲ ಪಂದ್ಯದಲ್ಲಿ ತೈವಾನ್‌ನ ಚೊ ಟಿನ್ ಯೆನ್ ಅವರನ್ನು ಎದುರಿಸುವರು. ಡಬಲ್ಸ್ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರಿಗೆ ಮೊದಲ ಸುತ್ತಿನಲ್ಲಿ ಬೈ ಲಭಿಸಿದೆ.

ಮಹಿಳಾ ಸಿಂಗಲ್ಸ್‌ನಲ್ಲಿ ಸೈನಾ ನೆಹ್ವಾಲ್ ಕೂಡ ಭರವಸೆ ಮೂಡಿಸಿದ್ದಾರೆ. ವಿಶ್ವಚಾಂಪಿಯನ್‌ಷಿಪ್‌ನಲ್ಲಿ ತಲಾ ಒಂದು ಬೆಳ್ಳಿ ಮತ್ತು ಕಂಚು ಗೆದ್ದಿರುವ ಅವರು ಮೊದಲ ಸೆಣಸಾಟದಲ್ಲಿ ಹಾಂಗ್‌ಕಾಂಗ್‌ನ ಚೆಂಗ್ ಎನ್‌ಗಾನ್ ಯಿ ಎದುರು ಆಡುವರು.

ಮಹಿಳಾ ಡಬಲ್ಸ್‌ನಲ್ಲಿ ಕನ್ನಡತಿ ಅಶ್ವಿನಿ ಪೊನ್ನಪ್ಪ–ಎನ್. ಸಿಕ್ಕಿರೆಡ್ಡಿ, ಗಾಯತ್ರಿ ಗೋಪಿಚಂದ್–ತ್ರಿಶಾ ಜೋಲಿ ಕೂಡ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.

ನೇರ ಪ್ರಸಾರ: ಸ್ಪೋರ್ಟ್ಸ್ 18

ಪಂದ್ಯಗಳ ಆರಂಭ: ರಾತ್ರಿ 7.30

ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಭಾರತದ ಪದಕವಿಜೇತರು		
ಪುರುಷರ ಸಿಂಗಲ್ಸ್		
ಪ್ರಕಾಶ್ ಪಡುಕೋಣೆ	1983	ಕಂಚು
ಬಿ.ಸಾಯಿ ಪ್ರಣೀತ್	2019	ಕಂಚು
ಕಿದಂಬಿ ಶ್ರೀಕಾಂತ್	2021	ಬೆಳ್ಳಿ
ಲಕ್ಷ್ಯ ಸೇನ್	2021	ಕಂಚು
ಮಹಿಳಾ ಸಿಂಗಲ್ಸ್		
ಪಿ.ವಿ.ಸಿಂಧು		
2013, 2014	ಕಂಚು	
2017, 2018	ಬೆಳ್ಳಿ	
2019	ಚಿನ್ನ	
ಸೈನಾ ನೆಹ್ವಾಲ್		
2015 ಬೆಳ್ಳಿ	2017 ಕಂಚು	
ಮಹಿಳಾ ಡಬಲ್ಸ್		
ಜ್ವಾಲಾ ಗುಟ್ಟಾ/ಅಶ್ವಿನಿ ಪೊನ್ನಪ್ಪ		
2011 ಕಂಚು		

ಲಕ್ಷ್ಯ ಸೇನ್– ಪಿಟಿಐ ಚಿತ್ರ

ಚೆಸ್: ಪ್ರಗ್ನಾನಂದಗೆ ಮತ್ತೆ ಸೋಲು

ಮಿಯಾಮಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಗ್ನಾನಂದ ಅವರು ಎಫ್‌ಟಿಎಕ್ಸ್ ಕ್ರಿಪ್ಟೊ ಕಪ್ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ಸೋಲು ಅನುಭವಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಭಾನುವಾರ ಅವರು ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ಡುಡಾ ಎದುರು 2–4ರಿಂದ ಎಡವಿದರು. ಈ ಪಂದ್ಯದಲ್ಲಿ ಸೋತರೂ ಪ್ರಗ್ನಾನಂದ 13 ಪಾಯಿಂಟ್ಸ್‌ನೊಂದಿಗೆ ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಫುಟ್‌ಬಾಲ್ ಆಟಗಾರ ಕರೀಮುಲ್ಲಾ ನಿಧನ

ಬೆಂಗಳೂರು: ಮೈಸೂರು ರಾಜ್ಯ ತಂಡವನ್ನು ಪ್ರತಿನಿಧಿಸಿದ್ದ ಫುಟ್‌ಬಾಲ್ ಆಟಗಾರ ಕರೀಮುಲ್ಲಾ ಖಾನ್ (80) ಭಾನುವಾರ ನಿಧನರಾದರು.



ಕರೀಮುಲ್ಲಾ ಖಾನ್

ಅವರಿಗೆ ನಾಲ್ವರು ಪುತ್ರರು ಮೂವರು ಪುತ್ರಿಯರಿದ್ದಾರೆ.

1962ರಲ್ಲಿ ಬೆಂಗಳೂರಿನ ಕಂಠೀರ ಕ್ರೀಡಾಂಗಣದಲ್ಲಿ ನಡೆದ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಕರೀಮುಲ್ಲಾ ಖಾನ್ ಆಡಿದ್ದರು. ತಂಡದ ನಾಯಕರಾಗಿಯೂ ಕಾರ್ಯನಿರ್ವಹಿಸಿದ್ದರು.

ರೈಲ್ವೆ, ಎಚ್‌ಎಎಲ್ ಮತ್ತಿತರ ತಂಡಗಳನ್ನೂ ಅವರು ಪ್ರತಿನಿಧಿಸಿದ್ದರು. ಡುರಾಂಡ್ ಕಪ್, ರೋವರ್ಸ್ ಕಪ್, ಸಿಲೋನ್‌ನಲ್ಲಿ ನಡೆದ ಪೆಂಟಾಂಗ್ಯುಲರ್ ಟೂರ್ನಿಗಳಲ್ಲಿ ಆಡಿದ್ದರು.

ಭಾನುವಾರ ಸಂಜೆ ಮಾರತ್ತಹಳ್ಳಿಯಲ್ಲಿ ಅವರ ಅಂತ್ಯಕ್ರಿಯೆ ನೆರವೇರಿತು.

ತೆಲುಗು ಯೋಧಾಸ್ ಮತ್ತು ರಾಜಸ್ಥಾನ ವಾರಿಯರ್ಸ್ ನಡುವಣ ಸೆಣಸಾಟ

ಒಡಿಶಾ ತಂಡಕ್ಕೆ ಜಯ

ಪುಣೆ: ಒಡಿಶಾ ಜಗರ್‌ನಟ್ಸ್ ತಂಡವು ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ರೋಚಕ ಜಯ ಸಾಧಿಸಿತು.

ಇಲ್ಲಿಯ ಛತ್ರಪತಿ ಶಿವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ 50– 47ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಸೋಲಿಸಿತು.

ಇನ್ನೊಂದು ಹಣಾಹಣಿಯಲ್ಲಿ ತೆಲುಗು ಯೋಧಾಸ್ ಭರ್ಜರಿ ಜಯ ಗಳಿಸಿತು. 83–45ರಿಂದ ರಾಜಸ್ಥಾನ ವಾರಿಯರ್ಸ್ ಎದುರು ಗೆದ್ದಿತು.

ಹಾಕಿ: ಮಿಂಚಿದ ಮೆಹೆರ್

ಬೆಂಗಳೂರು: ಮೆಹೆರ್ ಕೌರ್ ಮೆಹ್ತಾ ಗಳಿಸಿದ ಆರು ಗೋಲುಗಳ ಬಲದಿಂದ ಬೆಂಗಳೂರು ಬ್ಲ್ಯೂಸ್ ತಂಡವು ಡಿ.ಎಸ್. ಮೂರ್ತಿ ಮತ್ತು ರಾಧಾ ಮೂರ್ತಿ ಸ್ಮಾರಕ ಹಾಕಿ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸಿತು.

ಕರ್ನಾಟಕ ರಾಜ್ಯ ಹಾಕಿ ಕ್ರೀಡಾಂ ಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಭಾನುವಾರ ಬ್ಲ್ಯೂಸ್ 9–1ರಿಂದ ಚಿನ್ಮಯ ವಿದ್ಯಾಲಯವನ್ನು ಪರಾಭವಗೊಳಿಸಿತು.

ಮೆಹೆರ್ 1, 2, 5, 6, 11 ಮತ್ತು 18ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. ಚರಿಸ್ಮಾ ಲೂಯಿಸ್ 15 ಮತ್ತು 16ನೇ ನಿಮಿಷ, ಸಭಾ ಇಲ್ಯಾಸ್ (4ನೇ ನಿಮಿಷ) ವಿಜೇತ ತಂಡದ ಪರ ಗೋಲು ಗಳಿಸಿದರು. ಚಿನ್ಮಯ ಪರ ಶ್ರೇಯಾ ಎಂ. (8ನೇ ನಿಮಿಷ) ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ವಾರಿಯರ್ಸ್ ಸ್ಪೋರ್ಟ್ಸ್ 15–1ರಿಂದ ಲಿಯೊಸ್ ಸ್ಪೋರ್ಟ್ಸ್ ಕ್ಲಬ್ ಎದುರು ಜಯ, ಜೆಎಫ್‌ಎಚ್‌ಎ 4–4ರಿಂದ ಡೆಕಾಥ್ಲಾನ್ ಹಾಕಿ ತಂಡದೊಂದಿಗೆ ಡ್ರಾ , ಲಿಯೊಸ್ ಸ್ಪೋರ್ಟ್ಸ್ ಕ್ಲಬ್ 4–3ರಿಂದ ಸಂಡೆ ಬಾಯ್ಸ್ 'ಬಿ' ಎದುರು ಗೆಲುವು ಸಾಧಿಸಿದವು. ಪ್ರೈಮ್‌ರೋಸ್ 8-5ರಿಂದ ಆಂಗ್ಲೊ ಇಂಡಿ ಯನ್ ಹಾಕಿ ಕ್ಲಬ್ ಎದುರು, ಡೆಕಾ ಥ್ಲಾನ್ 12–2ರಿಂದ ವಾರಿ ಯರ್ಸ್ ಎದುರು, ಜೆಎಫ್‌ಎಚ್‌ಎ 14–0ಯಿಂದ ಸಂಡೆ ಬಾಯ್ಸ್ 'ಬಿ' ಎದುರು, ಫಾಲ್ಕನ್ 13–3ರಿಂದ ಆಂಗ್ಲೊ ಇಂಡಿಯನ್ ವಿರುದ್ಧ ಗೆದ್ದವು.

ವಾರಿಯರ್ಸ್ ಸ್ಪೋರ್ಟ್ಸ್ ಕ್ಲಬ್‌ನ ರಣದೀಪ್ (ಎಡ) ಮತ್ತು ಲಿಯೊಸ್ ಸ್ಪೋರ್ಟ್ಸ್ ಕ್ಲಬ್‌ನ ದೇವರಾಜ್ ಶೇಖರ್ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್